ರಾಮಕೃಷ್ಣ ಮಹಾಸಂಘದ ಕನ್ನಡ ಮಾಸಪತ್ರಿಕೆ

ವಿವೇಕಪ್ರಭ

ಪರಿಪೂರ್ಣ ಜೀವನದ ಪರಮಾಪ್ತ ಪತ್ರಿಕೆ



₹ 14

ಡಿಸೆಂಬರ್ 2017

PACKAGE TOURS 2017/18

Hotel Room Accom. & South Indian Veg. Food

Mini Andhra : 05 Days
Dec 07

Mantralaya, Srishaila, Mahanandi, Ahobilam (Nava Narasimha)

Rajasthan Special : 16 Days
Feb 08

Jaipur, Pushkar, Ajmer, Chittaurgarh, Udaipur, Eklingji, Nathadwar, Mt. Abu, Jodhpur, Jaisalmer, Bikaner

North East India : 16 Days
Mar 23

Guwahati, Kamakhya, Kaziranga, Shillong, Cherrapunjee, Dawki, Bomdilla, Sela Pass, Tawang, Dirung, Bhalukpong

Jyothirlinga - Shirdi : 11 Days
Jan 27

Nasik, Triyambak, Shanisinganapur, Shirdi, Bhimashankar, Ujjain, Omkareshwar, Aundah, Parli, Aurangabad, Ellora, Grishneshwar

Andhra Special : 12 Days
Jan 19

Bhadrachalam, Annavaram, Simhachalam, Borra Caves, Draksharam, Vasavi Penugonda, Dwaraka Tirumala, Mangalagiri, Vijayawada

Kashi Gaya Chitrakoot : 14 Days
Feb 15 Mar 23

Allahabad, Gaya, Bodhgaya, Kashi, Saranath, Ayodhya, Naimisharanya, Chitrakoot

Kolkata Darjeeling : 16 Days
Apr 03

Bhubaneshwar, Puri, Konark, Chilka Lake, Kolkata, Siliguri, Gangtok, Chengu Lake, Harbhajan Singh Mandir, Darjeeling, Tiger Hills

Shaktipeetha Manali Special : 18 Days
Apr 03, 18

Wagah Border [Indo-Pak Border], Amritsar, Vaishnavi Devi, Chamunda, Kangra, Chintapurni, Jwalamukhi, Baijnath, Kullu-Manali, Vasista, Rohtang Pass [Optional], Naina Devi, Kufri, Shimla, Chandigarh, Kurukshetra, New Delhi

Kashi Nepal : 16 Days
Apr 04

Kashi, Gorakhpur, Lumbini, Pokhara, Mukhinath (optional), Manokamana, Patan, Kathmandu, Bhaktapur

South India : 05 Days
Jan 30

Srirangam, Trichy, Tanjore, Rameshwaram, Kanyakumari, Madurai

Shri Hansaa Travels

Recognised by Department of Tourism, Govt. of Karnataka

: 640, 40th Cross, 8th Block, Jayanagar, Bangalore - 70

: hansaatravels@gmail.com : hansaatravels.com

080-26643276 / 26543891 / 9341215612 / 9341415612


ವಿವೇಕಪ್ರಭ

ಡಿಸೆಂಬರ್-2017

ಸಂಪುಟ 18 ಸಂಚಿಕೆ 12







ವಿಶೇಷ ಲೇಖನ




ಧಾರಾವಾಹಿ

ವ್ಯವಸ್ಥಾಪಕ ಸಂಪಾದಕರು
ಸ್ವಾಮಿ ಆತ್ಮಜ್ಞಾನಂದ

ಸಂಪಾದಕರು
ಸ್ವಾಮಿ ಜ್ಞಾನಯೋಗಾನಂದ

ನೆರವು:
ಆರ್. ಎಸ್. ಪೂರ್ಣಾನಂದ
ಡಾ. ಕೆ. ಎಲ್. ಪ್ರಸನ್ನಾಕ್ಷೀ
ಡಾ. ಎಚ್. ಪಾಂಡುರಂಗ ವಿಠಲ

ಅಕ್ಷರ ಜೋಡಣೆ
ಶ್ರೀರಾಮಕೃಷ್ಣ ಆಶ್ರಮ, ಮೈಸೂರು

ಮುದ್ರಣ
ಮಯೂರ್ ಗ್ರಾಫಿಕ್ಸ್, ಬೆಂಗಳೂರು

ಮುಖಪುಟ:
ಕಾಶೀಪುರ ತೋಟದ ಮನೆ
(ಶ್ರೀರಾಮಕೃಷ್ಣರು ಮಹಾಸಮಾಧಿ ಹೊಂದಿದ ಸ್ಥಳ)

ಈ ಪತ್ರಿಕೆಯ ಧ್ಯೇಯ

'ನಾವು ಪತ್ರಿಕೆಯ ಮೂಲಕ ಸಕಲ ವಿಚಾರಗಳಲ್ಲಿಯೂ ಜೀವನಪೋಷಕ ಆದರ್ಶಗಳನ್ನು ಜನರಿಗೆ ಕೊಡಬೇಕು... ವೇದವೇದಾಂತಗಳ ಉಚ್ಚ ಭಾವನೆಗಳನ್ನು ಸುಲಭವಾದ ಮಾತುಗಳಲ್ಲಿ ಜನರಿಗೆ ತಿಳಿಸಿಕೊಡಬೇಕು.'

– ಸ್ವಾಮಿ ವಿವೇಕಾನಂದ

E-mail: mysuru.vivekaprabha@rkmm.org
Website: www.vivekaprabha.net
ಫೋನ್ : 9481533505

ಚಂದಾ ವಿವರ

ಬಿಡಿ ಪ್ರತಿ : ₹ 14
ವಾರ್ಷಿಕ : ₹ 140
ಮೂರು ವರ್ಷ : ₹ 375
ಆಜೀವ (25 ವರ್ಷ) : ₹ 3,000
ಪೋಷಕರು : ₹ 5,000 ಅಥವಾ ಹೆಚ್ಚು.
ವಿದೇಶಗಳಿಗೆ : (ಏರ್‌ಮೇಲ್)
ವಾರ್ಷಿಕ : $ 20; **ಮೂರು ವರ್ಷ :** $ 60
ಆಜೀವ (25ವರ್ಷ) : $ 300
ಪೋಷಕರು : $ 600 ಅಥವಾ ಹೆಚ್ಚು.

ಚಂದಾ ಹಣವನ್ನು (Sri Ramakrishna Ashrama, Viveka Prabha A/c ಹೆಸರಿಗೆ) ಎಂ.ಓ. ಅಥವಾ ಡಿ.ಡಿ. ಮೂಲಕ ಮಾತ್ರ ಕಳುಹಿಸಬೇಕು. ಚೆಕ್‌ಗಳನ್ನು ಸ್ವೀಕರಿಸಲಾಗುವುದಿಲ್ಲ. ಆಜೀವ ಚಂದಾದಾರರು ಮತ್ತು ಪೋಷಕರಿಗೆ ಮೈಸೂರು ಆಶ್ರಮದ ಪುಸ್ತಕಗಳ ಮೇಲೆ ಮೈಸೂರು ಆಶ್ರಮದ ಮೂಲಕ ನೇರವಾಗಿ ಕೊಂಡಾಗ ಮಾತ್ರ ಶೇ. 20 ರಷ್ಟು ರಿಯಾಯಿತಿ ಕೊಡಲಾಗುವುದು. ಪೋಷಕ ಸಹಾಯಧನಕ್ಕೆ 80-G ಅಧಿನಿಯಮದ ಪ್ರಕಾರ ವರಮಾನ ತೆರಿಗೆ ವಿನಾಯಿತಿ ಇದೆ. ಪೋಷಕರ ಹೆಸರನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುವುದು.

ಶ್ರೀಶಾರದಾ ಷೋಡಶೀ ಸ್ತುತಿಯಿಂದ

ಯಾ ಶಾರದೈವ ಸಕಲಾಗಮಬೋಧರೂಪಾ
ಶ್ರೀರಾಮಕೃಷ್ಣಪರಹಂಸಪತಿವ್ರತಾಭೂತ್ ।
ಶ್ರೀಶಾರದಾಮಣಿರಿತಿ ಪ್ರಥಿತಾಭಿಧಾನಾ
ತಾಂ ಮಾತರಂ ಪ್ರಣಮತ ಪ್ರಿಯಭಕ್ತವರ್ಗಾಃ ॥ ೧ ॥

ಯಾರು ಎಲ್ಲ ಆಗಮಗಳಿಂದ ತಿಳಿಯಲ್ಪಡುವ ಸಾಕ್ಷಾತ್ ಜಗನ್ಮಾತೆ ಸರಸ್ವತಿಯೇ ಆಗಿರುವರೋ, ಯಾರು ಶ್ರೀರಾಮಕೃಷ್ಣ ಪರಮಹಂಸರ ಸಹ ಧರ್ಮಿಣಿಯಾಗಿದ್ದರೋ, ಯಾರು 'ಶ್ರೀಶಾರದಾಮಣಿ' ಎಂಬ ಹೆಸರಿನಿಂದ ಖ್ಯಾತರಾದರೋ, ಅಂತಹ ಮಾತೆಯನ್ನು ಪ್ರಿಯಭಕ್ತರೆಲ್ಲರೂ ನಮಿಸಿರಿ.

ಉದೀರ್ಣಸರ್ವಾದ್ವಯಬೋಧವಾರಿಧಿಂ
ವಿಲೋಕ್ಯ ತಂ ಹಂತ ಪತಿಂ ಪತಿವ್ರತಾ ।
ಜುಹಾವ ಯಾ ಯೌವನಮಾತ್ಮನೋ ಹವಿಃ
ತದೀಯವೈರಾಗ್ಯಪವಿತ್ರಪಾವಕೇ ॥ ೨ ॥

ಮಹಾಪತಿವ್ರತೆಯಾದ ಈ ಮಾತೆಯು, ತನ್ನ ಪತಿ ಅದ್ವೈತ ಜ್ಞಾನದ ಮಹಾಸಮುದ್ರವೆಂಬುದನ್ನು ಅರಿತು, ಅವರ ವೈರಾಗ್ಯವೆಂಬ ಪವಿತ್ರಾಗ್ನಿಯಲ್ಲಿ ತಮ್ಮ ಯೌವನವನ್ನು ಹವಿಸ್ಸಾಗಿ ಅರ್ಪಿಸಿದರು.

ಶಿವಮನು ತಪಸಿ ನಿವಿಷ್ಟಾ ತಮಪಿ ಜಯಂತೀ ನಿಜೈರ್ನಿಯಮೈಃ ।
ಪಾರ್ವತ್ಯೇವೈಷೇತಿ ಧ್ಯಾಯತ ಭೋಃ ಶಾರದಾಂ ಜನನೀಮ್ ॥

ಶಿವನನ್ನೇ ಅನುಸರಿಸಿ ತಪಸ್ಸನ್ನಾಚರಿಸಿದ ಪಾರ್ವತಿಯು, ಕೊನೆಗೆ ತಪಸ್ಸಿನ ಮಹಿಮೆಯಲ್ಲಿ ತನ್ನ ಪತಿಯನ್ನೇ ಮೀರಿ ನಿಂತಳು. ಅಂತಹ ಪಾರ್ವತಿಯೇ ಈ ಶಾರದಾಮಾತೆಯೆಂದು ಧ್ಯಾನಿಸಿರಿ.



ಅಧ್ಯಾತ್ಮಪದ್ಮಮಧುವಾಸಿತಮಾನಸಾಂತಃ-
ಪೋಪ್ಲೂಯಮಾನಪರಹಂಸಸದಾನುಯಾನಾ ।
ನಿತ್ಯಂ ಸಮುಲ್ಲಸತು ನೋ ಹೃದಿ ರಾಜಹಂಸೀ
ಶ್ರೀಶಾರದಾ ದುರಿತನಾಶವಿಶಾರದಾ ಸಾ ॥

ಅಧ್ಯಾತ್ಮವೆಂಬ ತಾವರೆಯ ಮಕರಂದವನ್ನು ಹೀರುವ, ಮಾನಸವೆಂಬ ಸರೋವರದಲ್ಲಿ ಪರಮಹಂಸದೊಂದಿಗೆ ಸದಾ ವಿಹರಿಸುತ್ತಿರುವ, ಪರಮಹಂಸಿಯಾದ ಶ್ರೀ ಶಾರದಾಮಾತೆಯು ಎಲ್ಲ ದುರಿತಗಳನ್ನೂ ನಾಶಮಾಡುವವರು. ಅವರು ನಮ್ಮ ಹೃದಯದಲ್ಲಿ ನಿತ್ಯವೂ ನಲಿದಾಡಲಿ.

— ಡಾ. ವಿ. ರಾಘವನ್

ಸೂಕ್ತಿಪ್ರಭ

ಶ್ರೀಮಾತೆಯವರ ಉಪದೇಶಗಳು

❖ ಭಗವಂತನ ನಾಮಜಪ ಮಾಡಿದರೆ, ಕಾಲು ಕತ್ತರಿಸಿ ಹೋಗಬೇಕಾದಲ್ಲಿ ಒಂದು ಸೂಜಿ ಚುಚ್ಚುವುದು ಅಷ್ಟೆ. ಜಪತಪಾದಿಗಳನ್ನು ಮಾಡಿದರೆ ಕರ್ಮ ಬಹುಪಾಲು ಕ್ಷಯವಾಗುವುದು.

❖ ಎಲ್ಲವೂ ಮನಸ್ಸನ್ನೇ ಅವಲಂಬಿಸಿದೆ. ಮನಸ್ಸಿನಲ್ಲಿಯೇ ಶುದ್ಧ, ಅಶುದ್ಧ ಎಲ್ಲವೂ. ಮನುಷ್ಯ ತನ್ನ ಮನಸ್ಸನ್ನು ಮೊದಲು ಮಲಿನಗೊಳಿಸಿಬಿಡುತ್ತಾನೆ. ಆದ್ದರಿಂದಲೇ ಅವನು ಇತರರ ದೋಷವನ್ನು ನೋಡುತ್ತಾನೆ. ನೀನು ಇತರರ ದೋಷವನ್ನು ನೋಡಿದರೆ ಅವನಿಗೇನಾಗುತ್ತದೆ? ಅದರಿಂದ ನಿನಗೇ ಹಾನಿಯಾಗುತ್ತದೆ.. ದೋಷವನ್ನು ನೋಡಬಾರದು. ಇತರರ ದೋಷ ನೋಡದಿರುವುದು ಕ್ಷಮಾರೂಪದ ತಪಸ್ಸು.

❖ ಗಂಗಾತೀರದಲ್ಲಿ ನಾಲ್ಕು ಕ್ರೋಶ (ಎಂಟು ಮೈಲಿ)ದುದ್ದಕ್ಕೂ ಪವಿತ್ರ ಗಾಳಿ ಬೀಸುತ್ತಿರುತ್ತದೆ. ಗಾಳಿಯ ರೂಪದ ನಾರಾಯಣ ಅದು! ತುಂಬಾ ತಪಸ್ಸು ಮಾಡಿದರೆ ಮಾತ್ರ ಮನಸ್ಸು ಶುದ್ಧವಾಗುವುದು. 'ಸಾಧನೆ ಮಾಡದೆ ಶುದ್ಧವಸ್ತುವಾದ ಭಗವಂತನ ಪ್ರಾಪ್ತಿಯಾಗದು.'

❖ ಮನಸ್ಸು ಶುದ್ಧವಾದರೆ ಧ್ಯಾನ, ಧಾರಣ ಯಾಕೆ ಸಾಧ್ಯವಾಗದು? ದರ್ಶನವೇಕಾಗದು? ಜಪ ಮಾಡಲು ಕುಳಿತರೆ ಒಳಗಿನಿಂದ ತಾನಾಗಿಯೇ ಭಗವಂತನ ನಾಮ ಮೇಲಕ್ಕೆ ಎದ್ದು ಬರತೊಡಗುವುದು. ಅದಕ್ಕಾಗಿ ವಿಶೇಷ ಪ್ರಯತ್ನ ಮಾಡಬೇಕಾಗುವುದಿಲ್ಲ.

❖ ನೋಡು ಮಗೂ, ಸಾಧನೆ ಅಂತ ಹೇಳು, ಅಥವಾ ಭಜನೆ ಅಂತಲಾದರೂ ಹೇಳು — ಎಲ್ಲವನ್ನೂ ಈ ವಯಸ್ಸಿನಲ್ಲೇ ಮಾಡಿ ಮುಗಿಸು. ಕೊನೆಗಾಲದಲ್ಲಿ ಇನ್ನೇನಾಗುವುದು? ಏನೇನು ಮಾಡಲಾಗುವುದೋ ಎಲ್ಲವೂ ಈಗ ಮಾತ್ರ ಸಾಧ್ಯ.

❖ ಮನುಷ್ಯ ಭಗವಂತನನ್ನು ಮರೆತೇ ಬಿಟ್ಟಿದ್ದಾನೆ. ಆದ್ದರಿಂದ ಯಾವಾಗ ಆವಶ್ಯಕತೆಯಿದೆಯೋ ಆಗ ಭಗವಂತ ತಾನಾಗಿಯೇ ಒಮ್ಮೊಮ್ಮೆ ಬಂದು, ಸಾಧನೆ ಮಾಡಿ, ಇತರರಿಗೆ ದಾರಿ ತೋರಿಸಿಕೊಡುತ್ತಾನೆ. ಈ ಬಾರಿ ಭಗವಂತ (ಶ್ರೀರಾಮಕೃಷ್ಣ ಅವತಾರದ ಮೂಲಕ) ತ್ಯಾಗವನ್ನು ತೋರಿಸಿಕೊಟ್ಟಿದ್ದಾನೆ.

('**ಶ್ರೀಶಾರದಾದೇವಿ ವಚನವೇದ**' ದಿಂದ)

ರಾಮಕೃಷ್ಣ ಮಠ
ಮಂಗಳಾದೇವಿ, ಮಂಗಳೂರು

08242414412 mangaloremath@gmail.com

ಭಾವಸಂಗಮ
ಭಕ್ತ ಸಮಾಗಮ '18

26,27,28 ಜನವರಿ 2018

ಪರಿಕಲ್ಪನೆ
ಸಮನ್ವಯ ಮತ್ತು ಸ್ವೀಕಾರ

ದಿವ್ಯತ್ರಯರು ಬದುಕಿದ ಬಗೆ ಎಲ್ಲ ವೇದಾಂತಗಳಿಗೆ ಜೀವಂತ ಭಾಷ್ಯ; ಹಲವು ಆಯಾಮಗಳ ಸಮನ್ವಯ-ಸ್ವೀಕಾರಗಳಿಗೆ ಹಿಡಿದ ಕನ್ನಡಿ. ಇದು ಎಲ್ಲ ಕಾಲಕ್ಕೆ ಬೇಕಾದ ಬೆಳಕು. ಹೀಗಾಗಿ ಈ ಸಲದ ಭಾವಸಂಗಮ ಈ 'ಸಮನ್ವಯ-ಸ್ವೀಕಾರ'ಗಳನ್ನು ಪ್ರಧಾನ ಪರಿಕಲ್ಪನೆಯಾಗಿ ಹೊಂದಿದೆ. ದಿವ್ಯತ್ರಯರ ಸಂದೇಶದ ಬೆಳಕಿನಲ್ಲಿ ಹಾಗೂ ಭಾರತೀಯ ಪರಂಪರೆಯ ಹಿನ್ನೆಲೆಯಲ್ಲಿ ಹಲವು ಗೋಷ್ಠಿಗಳಲ್ಲಿ ಈ ತಾತ್ವಿಕತೆಯ ಹಲವು ಆಯಾಮಗಳ ಪರಿಶೀಲನೆ ನಡೆಯಲಿದೆ. ಜೊತೆಗೆ ಸಂವಾದ, ಪ್ರಶ್ನೋತ್ತರ, ಭಕ್ತಿಗೀತೆಗಳು, ಹರಿಕಥೆ, ನಿರ್ದೇಶಿತ ಧ್ಯಾನ, ಸಾಂಸ್ಕೃತಿಕ ಕಾರ್ಯಕ್ರಮಗಳು ಈ ಸಮ್ಮೇಳನದ ಭಾಗವಾಗಿರುತ್ತವೆ. ಇಂತಹ ಅಪೂರ್ವ ಭಕ್ತಸಮಾಗಮದಲ್ಲಿ ಭಾಗವಹಿಸುವ, ಕಾರ್ಯಕ್ರಮಗಳನ್ನು ಆನಂದಿಸಿ ಆಸ್ವಾದಿಸುವ ಸದವಕಾಶ ನಿಮ್ಮದಾಗಲಿ.

26 ಜನವರಿ 2018

ಗೋಷ್ಠಿ 1
ಶ್ರೀರಾಮಕೃಷ್ಣರಲ್ಲಿ ಭಾವಸಮನ್ವಯ
ದೇವ-ಮಾನುಷ ಸಮನ್ವಯ
ಸಾಧಕ-ಗುರು ಸಮನ್ವಯ
ಗಾರ್ಹಸ್ಥ್ಯ-ಸಂನ್ಯಾಸ ಸಮನ್ವಯ

ಗೋಷ್ಠಿ 2
ಶ್ರೀರಾಮಕೃಷ್ಣರ ತತ್ತ್ವಸಮನ್ವಯ
ಭಕ್ತಿ-ಜ್ಞಾನ ಸಮನ್ವಯ
ಶಾಸ್ತ್ರ-ಅನುಭವಗಳ ಸಮನ್ವಯ
ಏಕ-ಅನೇಕ ಸಮನ್ವಯ

27 ಜನವರಿ 2018

ಗೋಷ್ಠಿ 3
ಶ್ರೀಮಾತೆ ಶಾರದಾದೇವಿಯವರಲ್ಲಿ ಸರ್ವಸ್ವೀಕಾರದ ಸ್ವರೂಪ
ಶ್ರೀಮಾತೆಯವರಲ್ಲಿ ಮಾನವತೆ-ದೈವಿಕತೆಗಳ ಸಮ್ಮಿಲನ
ಶ್ರೀಮಾತೆಯವರ ಸಂದೇಶ: ವ್ಯಾಪಕತೆಯ ನೆಲೆಗಟ್ಟು
ಶ್ರೀಮಾತೆಯವರಲ್ಲಿ ಸಂಪ್ರದಾಯ-ಆಧುನಿಕತೆಗಳ ಸಂಗಮ

ಗೋಷ್ಠಿ 4
ವಿವೇಕಾನಂದರಲ್ಲಿ ಸಮನ್ವಯದ ನೆಲೆಗಳು 1
ವಿಶ್ವಧರ್ಮದ ಸ್ವರೂಪ
ವ್ಯಷ್ಟಿ-ಸಮಷ್ಟಿಗಳ ಸಮನ್ವಯ
ಯೋಗಗಳ ಸಮನ್ವಯ

ಗೋಷ್ಠಿ 5
ವಿವೇಕಾನಂದರಲ್ಲಿ ಸಮನ್ವಯದ ನೆಲೆಗಳು 2
ವಿಜ್ಞಾನ ಮತ್ತು ಅಧ್ಯಾತ್ಮ
ಪೌರ್ವಾತ್ಯ ಮತ್ತು ಪಾಶ್ಚಾತ್ಯ
ಪ್ರಾಚೀನ ಮತ್ತು ಆಧುನಿಕ

28 ಜನವರಿ 2018

ಗೋಷ್ಠಿ 6
ಭಾರತೀಯ ಪರಂಪರೆಯಲ್ಲಿ ಸಮನ್ವಯದೃಷ್ಟಿ
ಉಪನಿಷತ್ತುಗಳಲ್ಲಿ ಸಮನ್ವಯದೃಷ್ಟಿ
ಭಗವದ್ಗೀತೆಯಲ್ಲಿ ಸಮನ್ವಯದೃಷ್ಟಿ
ರಾಮಾಯಣ-ಮಹಾಭಾರತಗಳಲ್ಲಿ ಸಮನ್ವಯದೃಷ್ಟಿ



ಗಮನಿಸಿ

- ಈ ಪುಟದ ಹಿಂಭಾಗದಲ್ಲಿ ನೋಂದಣಿ ಅರ್ಜಿಯನ್ನು ಕೊಡಲಾಗಿದೆ, ಆಸಕ್ತರು ಅದನ್ನು ಕತ್ತರಿಸಿಕೊಂಡು, ಭರ್ತಿ ಮಾಡಿ ರಾಮಕೃಷ್ಣ ಮಠ ಮಂಗಳಾದೇವಿ ಮಂಗಳೂರು – 575001. ಇಲ್ಲಿಗೆ ಕಳುಹಿಸತಕ್ಕದು.

ಪ್ರವೇಶ ಶುಲ್ಕ
ವಸತಿ ಸಹಿತ : ₹ 1000
ವಸತಿ ರಹಿತ : ₹ 500

ಸಂಪರ್ಕ 94492 88200

❈ ಭಾವಸಂಗಮ ❈

ಭಕ್ತ ಸಮಾಗಮ '18

ನೋಂದಣಿ ಅರ್ಜಿ

ಹೆಸರು:..

ಸ್ತ್ರೀ ☐ ಪುರುಷ ☐ ವಯಸ್ಸು:............

ಊರು:..

ವಿಳಾಸ:..

....

..................................ಪಿನ್:....................

ಮೊಬೈಲ್ ಸಂಖ್ಯೆ:..

ಈ–ಮೇಲ್:..

ವಸತಿ ಸಹಿತ	ವಸತಿ ರಹಿತ
₹.1000 ☐	₹500 ☐

ಮಂಗಳೂರಿಗೆ ಬಂದು ತಲುಪುವ ದಿನಾಂಕ & ಸಮಯ

....

ರೈಲ್/ಬಸ್ ವಿವರ:..

ನೋಂದಣಿ ಶುಲ್ಕವನ್ನು ನಾನು ಭಕ್ತಸಮಾವೇಶಕ್ಕೆ ಆಗಮಿಸಿದಾಗ ಭರಿಸುತ್ತೇನೆ ಮತ್ತು ಮಠದ ಎಲ್ಲಾ ನೀತಿ–ನಿಯಮಗಳನ್ನು ಪಾಲಿಸುತ್ತೇನೆ.

ಸಹಿ..

* ಒಬ್ಬರಿಗಿಂತ ಹೆಚ್ಚು ಪ್ರತಿನಿಧಿಗಳು ಬರುತ್ತಿದ್ದಲ್ಲಿ ಈ ಅರ್ಜಿಯ ಜೆರಾಕ್ಸ್ ಪ್ರತಿಯನ್ನು ಬಳಸಬಹುದು.

ಕಚೇರಿಯ ಉಪಯೋಗಕ್ಕಾಗಿ

ನೋಂದಣಿ ಸಂಖ್ಯೆ:..

ಕತ್ತರಿಸಿ

ಸೂಚನೆಗಳು

- ಶಿಬಿರದಲ್ಲಿ ಭಾಗವಹಿಸಲು ಮೊದಲು ಬಂದವರಿಗೆ ಪ್ರಥಮ ಆದ್ಯತೆಯ ಮೇರೆಗೆ ಅವಕಾಶ ನೀಡಲಾಗುವುದು.
- ಹೆಸರು ನೋಂದಾಯಿಸಲು ಕಡೆಯ ದಿನಾಂಕ 15 ಜನವರಿ 2018.
- ಶಿಬಿರಾರ್ಥಿಗಳು 26–1–2018ರಂದು ಪೂರ್ವಾಹ್ನ 9 ಗಂಟೆಯ ಒಳಗೆ ಮಂಗಳೂರು ರಾಮಕೃಷ್ಣ ಮಠಕ್ಕೆ ಬರಬೇಕು. ಹಾಗೂ ಜನವರಿ 28–1–2018 ಅಪರಾಹ್ನ 4 ಗಂಟೆಯ ವರೆಗೆ ಶಿಬಿರದಲ್ಲಿ ಭಾಗವಹಿಸಬೇಕು. ಶಿಬಿರಾರ್ಥಿಗಳಿಗೆ ಊಟ – ವಸತಿಯ ವ್ಯವಸ್ಥೆಯನ್ನು ಜನವರಿ 26 ರ ಬೆಳಿಗ್ಗೆಯಿಂದ 28 ರ ರಾತ್ರಿಯವರೆಗೆ ಮಠದ ವತಿಯಿಂದ ಕಲ್ಪಿಸಲಾಗುವುದು.
- ಪುರುಷರಿಗೆ ಮತ್ತು ಮಹಿಳೆಯರಿಗೆ ಪ್ರತ್ಯೇಕ ವಸತಿ ವ್ಯವಸ್ಥೆಯನ್ನು ಕಲ್ಪಿಸಲಾಗುವುದು.
- ಭಕ್ತ ಸಮಾವೇಶದಲ್ಲಿ ಭಾಗವಹಿಸುವ ಭಕ್ತರು ಉತ್ತಮ ಆರೋಗ್ಯವನ್ನು ಹೊಂದಿರಬೇಕು.
- ಶಿಬಿರದ ಸಮಯದಲ್ಲಿ ಆಶ್ರಮದ ನೀತಿ–ನಿಯಮಗಳನ್ನು ಪಾಲಿಸುತ್ತ ಆಶ್ರಮದ ಆಧ್ಯಾತ್ಮಿಕ ವಾತಾವರಣಕ್ಕೆ ಧಕ್ಕೆಯಾಗದಂತೆ ನಡೆದುಕೊಳ್ಳಬೇಕು. ಆಶ್ರಮದಲ್ಲಿ ಶಿಸ್ತಿಗೆ ಬಹಳ ಪ್ರಾಮುಖ್ಯತೆಯನ್ನು ನೀಡಲಾಗುವುದು.
- ಶಿಬಿರದ ದಿನಗಳಲ್ಲಿ ಎಲ್ಲ ಕಾರ್ಯಕ್ರಮಗಳಲ್ಲಿ ಕಡ್ಡಾಯವಾಗಿ ಭಾಗವಹಿಸಬೇಕು.
- ಮೊಬೈಲ್‌ಗಳನ್ನು ಅತ್ಯಂತ ನಿಯಮಿತವಾಗಿ ಬಳಸಬಹುದು. ಆದರೆ ಕಾರ್ಯಕ್ರಮದ ಸಮಯದಲ್ಲಿ ಮೊಬೈಲ್ ಬಳಕೆ ನಿಷಿದ್ಧ.
- ಕಾರ್ಯಕ್ರಮದ ಸಂದರ್ಭದಲ್ಲಿ ರಾಮಕೃಷ್ಣ–ವಿವೇಕಾನಂದ–ವೇದಾಂತ ಸಾಹಿತ್ಯ ವಿಶೇಷ ರಿಯಾಯಿತಿ ದರದಲ್ಲಿ ಲಭ್ಯವಿರುತ್ತದೆ.
- ಬೆಲೆಬಾಳುವ ವಸ್ತುಗಳನ್ನು ನಿಮ್ಮೊಡನೆ ತರಬಾರದಾಗಿ ವಿನಂತಿ ಮತ್ತು ನಿಮ್ಮ ನಿಮ್ಮ ವಸ್ತುಗಳಿಗೆ ನೀವೇ ಜವಾಬ್ದಾರರು.
- ಶಿಬಿರವು ಕನ್ನಡ ಮಾಧ್ಯಮದಲ್ಲಿರುತ್ತದೆ.
- ವಿವರಗಳಿಗಾಗಿ ಆಶ್ರಮದ ಕಾರ್ಯಾಲಯವನ್ನು ಸಂಪರ್ಕಿಸಬಹುದು.

94492 88200 | 0824–2414412

ಸಂಪಾದಕೀಯ

ತಾಯಿ ಕಲಿಸಿದ ಪಾಠ



ಪ್ರತಿಯೊಬ್ಬರಿಗೂ ಜನ್ಮ ನೀಡಿದ ತಾಯಿಯೇ ಮೊದಲ ಗುರು. ಹುಟ್ಟಿದೊಡನೆಯೇ ಕಣ್ಣು ಬಿಟ್ಟು ಜಗತ್ತಿನ ಪ್ರತಿಯೊಂದನ್ನೂ ಪರಿಚಯಿಸಿಕೊಳ್ಳುವ ಮೊದಲೇ ಮಗು ತಾಯಿಯನ್ನು ನೋಡುತ್ತದೆ; ಅವಳ ಪ್ರೀತಿ, ಆರೈಕೆಗಳನ್ನು ಪಡೆಯುತ್ತದೆ. ಅಲ್ಲಿಂದ ಮುಂದೆ ಪ್ರತಿಯೊಂದನ್ನೂ ಕಲಿಸಿಕೊಡುವ ತಾಯಿ, ತನ್ನ ಪ್ರೀತಿಯೆಂಬ ದಿವ್ಯ ಸಾಧನದಿಂದ ಮಗುವಿಗೆ ಮಾರ್ಗದರ್ಶನ ಮಾಡುತ್ತಾಳೆ. ಲೌಕಿಕ ಜೀವನದಲ್ಲಿ ಇದು ತೀರ ಸಹಜವಾದ ಸಂಗತಿ. ಭಗವಂತನ ವಿಷಯಕ್ಕೆ ಬಂದಾಗ ಗುರುವೇ ತಾಯಿ ಮಾಡುವ ಕೆಲಸವನ್ನು ಮಾಡುತ್ತಾನೆ. ತನ್ನ ಶಿಷ್ಯನ ಮೇಲೆ ಗುರುವಿಗೂ ಮಮತೆ, ವಾತ್ಸಲ್ಯ, ಪ್ರೀತಿಗಳಿರಬಹುದಾದರೂ, ಎಲ್ಲ ಗುರುಗಳೂ ನೀಡುವ ಉಪದೇಶ ವಿಧಾನ ಒಂದೇ ರೀತಿಯದಲ್ಲ. ಹಲವರಿಗೆ ಪ್ರೀತಿಯೆಂಬುದು ಬೋಧನೆಗಾಗಿ ಇರುವ ಸಾಧನವೂ ಅಲ್ಲ. ಆದರೆ ಸಾಕ್ಷಾತ್ ಜಗನ್ಮಾತೆಯೇ ಜನ್ಮತಳೆದು ಬಂದು ಆಧ್ಯಾತ್ಮಿಕ ಪಥದಲ್ಲಿ ಮಾರ್ಗದರ್ಶನ ಮಾಡಿದರೆ? ಲೌಕಿಕ ಜೀವನದಲ್ಲಿ ಕಾಣುವ ಮಾತೃತ್ವದ ಗುಣಗಳೆಲ್ಲವೂ ಅಲ್ಲಿ ಘನೀಭವಿಸಿ, ಮಾತೃವಾತ್ಸಲ್ಯವೇ ಅಲ್ಲಿ ದೈವೀಶಕ್ತಿಯಾಗಿ ಪರಿಣಮಿಸಿ, ತನ್ನ ಮಕ್ಕಳಾದ ಪ್ರಪಂಚದ ಜೀವಿಗಳನ್ನೆಲ್ಲ ಸಂಸಾರವೆಂಬ ನದಿಯಾಚೆಗಿರುವ ಪರಬ್ರಹ್ಮವೆಂಬ ಮಹಾಸಮುದ್ರದೆಡೆಗೆ ಆಕೆ ಕರೆದೊಯ್ಯುವಳು. ಶ್ರೀಮಾತೆ ಶಾರದಾದೇವಿಯವರಲ್ಲಿ ನಾವು ಕಾಣುವುದು ಇದೇ ಮಹಿಮೆಯನ್ನು.

ಎಣೆಯಿಲ್ಲದ ಪ್ರೀತಿ

ಶ್ರೀಮಾತೆ ತಮ್ಮ ಶಿಷ್ಯ-ಶಿಷ್ಯೆಯರಿಗೆ ನೇರ ಉಪದೇಶ ಕೊಟ್ಟಿರುವ ಉದಾಹರಣೆಗಳು ಸಾಕಷ್ಟಿವೆ; ಮಂತ್ರದೀಕ್ಷೆ, ಬ್ರಹ್ಮಚರ್ಯ, ಸಂನ್ಯಾಸ ನೀಡಿ ಅಕ್ಷರಾರ್ಥದಲ್ಲಿ ಆಧ್ಯಾತ್ಮಿಕ ಗುರುವಾಗಿ ಅವರು ಕೆಲವರನ್ನು ಹರಸಿದ್ದೂ ಇದೆ. ಆದರೆ ಎಲ್ಲದಕ್ಕಿಂತಲೂ ಹೆಚ್ಚಾಗಿ ಅವರು ತಮ್ಮ ಮಕ್ಕಳ ಜೀವನದ ಮೇಲೆ ಅಚ್ಚಳಿಯದ ಪ್ರಭಾವ ಬೀರಿದ ಅಂಶವೆಂದರೆ — ಅವರು ತೋರಿಸಿದ ಅಸೀಮ ಪ್ರೀತಿ. ಶ್ರೀಮಾತೆ ಹಲವು ವಿಷಯಗಳನ್ನು ಮಾತಿನ ಮೂಲಕ ಹೇಳಿ ಕಲಿಸುತ್ತಿರಲಿಲ್ಲ; ಅವರ ಪ್ರೀತಿಯೇ ಎಲ್ಲರ ಹೃದಯವನ್ನು ಹೊಕ್ಕುಬಿಡುತ್ತಿತ್ತು. ಅವರ ಪ್ರತಿಯೊಂದು ಚರ್ಯೆ, ನಡವಳಿಕೆ, ಜೀವನಕ್ರಮವೇ ಶಿಷ್ಯಂದಿರನ್ನು ಹಾಗೂ ಭಕ್ತರನ್ನು ಪ್ರಭಾವಿಸುತ್ತಿತ್ತು. ಅವರು ಆಡಿದ ಸಹಜ, ಸಾಮಾನ್ಯ ಮಾತುಗಳೇ ಶಿಷ್ಯರ ಹಾಗೂ ಭಕ್ತರ ಪಾಲಿಗೆ ಶ್ರೇಷ್ಠ ಉಪದೇಶವೆನಿಸುತ್ತಿತ್ತು. ಶ್ರೀಮಾತೆ ಎಲ್ಲೂ ಪ್ರವಚನ, ಉಪದೇಶಗಳನ್ನು ನೀಡಲಿಲ್ಲ — ಸರಳ ಮಾತಿನ ಮೂಲಕವೇ ದಿವ್ಯಪಥದ ಕಿರಣಗಳನ್ನು ಸೂಸಿಬಿಡುತ್ತಿದ್ದರು.

ಶ್ರೀಮಾತೆಯವರ ಪ್ರೀತಿ, ವಾತ್ಸಲ್ಯ, ಕಾಳಜಿ ಇವು ಲೌಕಿಕ ಬದುಕಿಗಿಂತ ತುಂಬ ಎತ್ತರದಲ್ಲಿತ್ತು. ಅವರ ಪ್ರೀತಿಯಲ್ಲಿ ಯಾವುದೇ ಸ್ವಾರ್ಥವಿರಲಿಲ್ಲ, ಯಾವುದೇ ಬಗೆಯ ಮೋಹ, ಆಸಕ್ತಿಗಳಿರಲಿಲ್ಲ. ಎಲ್ಲರನ್ನೂ ಅವರು ತಮ್ಮ ಮಕ್ಕಳೆಂದೇ ಕಂಡರು, ಅವರನ್ನೆಲ್ಲ ಅಹೇತುಕ ಪ್ರೀತಿಯಿಂದ ಪಾಲಿಸಿದರು. ಇದೇ ಸಾಮಾನ್ಯ ಮಾತೃತ್ವಕ್ಕೂ, ಶ್ರೀಮಾತೆಯಲ್ಲಿದ್ದ 'ದೈವೀ ಮಾತೃತ್ವ'ಕ್ಕೂ ಇರುವ ವ್ಯತ್ಯಾಸ. ಕೇವಲ ತಮ್ಮ ಶಿಷ್ಯರನ್ನಷ್ಟೇ ಅಲ್ಲ, ಜಗತ್ತಿನ ಪ್ರತಿಯೊಂದು ಜೀವಿ ಕೂಡ ತನ್ನ ಮಕ್ಕಳೇ; ಅಷ್ಟೇಕೆ ಕ್ರಿಮಿಕೀಟ- ಜಂತುಗಳೂ ತಮ್ಮ ಮಕ್ಕಳೇ ಎಂದು ಶ್ರೀಮಾತೆ ಹೇಳುತ್ತಾರೆ. 'ಜಗನ್ಮಾತೆ' ಎಂಬುದರ ಅರ್ಥ ಅದೇ ಅಲ್ಲವೆ? ಪ್ರತಿಯೊಂದು ಜೀವಿಯ ಸೃಷ್ಟಿ, ಪಾಲನೆ, ಲಯಗಳಿಗೆ ಕಾರಣಕರ್ತಳಾದ, ಜಗತ್ತಿನ ಪ್ರತಿಯೊಂದು ಆಗುಹೋಗನ್ನು ನಿಯಂತ್ರಿಸುವ, ಇಡೀ ಜಗತ್ತಿನ ಕಣಕಣದಲ್ಲೂ ನೆಲೆಸಿರುವ ಶಕ್ತಿರೂಪಿಣಿ ದೇವಿಯೇ ತಾನು ಎಂಬುದನ್ನು ಶ್ರೀಮಾತೆ ಶಾರದಾದೇವಿಯವರು ಹಲವು ಸಂದರ್ಭಗಳಲ್ಲಿ ಒಪ್ಪಿಕೊಂಡದ್ದಿದೆ. ಆದರೆ ಬಾಹ್ಯಜಗತ್ತಿಗೆ ಮಾತ್ರ ಅವರು ಸಾಮಾನ್ಯ ಹಳ್ಳಿಯ ಹೆಂಗಸು; ದೈನಂದಿನ ಕೆಲಸಗಳಲ್ಲೇ ಮುಳುಗಿದ್ದ ಒಬ್ಬಾಕೆ ಗ್ರಾಮೀಣ ಸ್ತ್ರೀ. ಯಾರು ಶ್ರೀಮಾತೆಯವರ ದೈವೀಸ್ವರೂಪವನ್ನು ಕಾಣಬಲ್ಲ ಶಕ್ತಿಯನ್ನು ಹೊಂದಿದ್ದರೋ, ಅವರಿಗೆ ಮಾತ್ರ ಶ್ರೀಮಾತೆ ತಮ್ಮ ನಿಜವಾದ ವ್ಯಕ್ತಿತ್ವವನ್ನು ತೋರಿಸಿ ಕೊಟ್ಟರು.

ದೇವರನ್ನು ಕಾಣುವುದು ಹೇಗೆ?

ಭಗವಂತನನ್ನು ಪಡೆಯಲು ಏನು ಮಾಡಬೇಕು? ಯಾವ ರೀತಿಯ ಸಾಧನೆ ಮಾಡಿದರೆ ಸಾಕ್ಷಾತ್ಕಾರವುಂಟಾಗುವುದು? —

ಇದು ಸಾಮಾನ್ಯವಾಗಿ ಎಲ್ಲ ಸಾಧಕನನ್ನು ಕಾಡುವ ಪ್ರಶ್ನೆ. ಶ್ರೀಮಾತೆಯವರ ಬಳಿಗೆ ಬಂದವರೆಲ್ಲ ಅವರ ಬಳಿ ನೇರವಾಗಿ ಈ ಪ್ರಶ್ನೆಗಳನ್ನು ಕೇಳುತ್ತಿದ್ದರು. ಶ್ರೀಮಾತೆ ಅವರಿಗೆ ಸಾಮಾನ್ಯವಾಗಿ ನೀಡುತ್ತಿದ್ದ ಉತ್ತರ, 'ಭಗವಂತನಲ್ಲಿ ಶರಣಾಗು', 'ಒಂದೇ ಮನಸ್ಸಿನಿಂದ ಪ್ರಾರ್ಥಿಸು' ಅಥವಾ 'ಸಾಧನೆ, ಜಪತಪ ಮಾಡಬೇಕು' ಇತ್ಯಾದಿ. ಆದರೂ ಅನೇಕ ಸಂದರ್ಭಗಳಲ್ಲಿ ಪ್ರಶ್ನೆ ಕೇಳುವವನ ಸ್ವಭಾವ, ಮನಸ್ಥಿತಿ ಹಾಗೂ ಮಾನಸಿಕ ಸಿದ್ಧತೆಗಳನ್ನು ನೋಡಿಕೊಂಡು ಅವನಿಗೆ ಯಾವುದು ಸೂಕ್ತವೋ ಅಂಥ ಉಪದೇಶ ನೀಡುತ್ತಿದ್ದರು ಶ್ರೀಮಾತೆ.

ಭಗವಂತನನ್ನು ಕಾಣುವುದಕ್ಕೆ ಶ್ರೀಮಾತೆ ಪ್ರಾರ್ಥನೆ, ಜಪ ಸಾಧನೆ, ಶರಣಾಗತಿ, ಭಕ್ತಿ, ಪೂಜೆ-ಭಜನೆ, ಭಗವಂತನ ಕೃಪೆ ಇವೆಲ್ಲವೂ ಅಗತ್ಯವೆನ್ನುತ್ತಿದ್ದರು. ಆದರೂ ಅವರು ಸುಲಭವಾಗಿ ಭಗವಂತನ ದರ್ಶನವಾಗುವುದು ಎನ್ನುತ್ತಿರಲಿಲ್ಲ; ಕಠಿಣ ಶ್ರಮ, ಸತತ ಸಾಧನೆಗಳು ಅತ್ಯಗತ್ಯ ಎನ್ನುತ್ತಿದ್ದರು: ''ಒಂದು ನಿರ್ದಿಷ್ಟ ಸಂಖ್ಯೆಯನ್ನು ಇಟ್ಟುಕೊಂಡು ಜಪ ಮಾಡುವುದು, ಜಪಮಾಲೆಯ ಮೇಲೋ ಬೆರಳುಗಳ ಮೇಲೋ ಎಣಿಸುವುದು, ಇವುಗಳ ಮುಖ್ಯ ಉದ್ದೇಶ ಮನಸ್ಸನ್ನು ಭಗವಂತನ ಕಡೆಗೆ ತಿರುಗಿಸುವುದು. ಅತ್ತಿತ್ತ ಓಡಿ ಹೋಗುವುದೇ ಮನಸ್ಸಿನ ಸ್ವಭಾವ. ಈ ಎಲ್ಲ ಸಾಧನಗಳಿಂದ ಮನಸ್ಸು ಭಗವಂತನ ಕಡೆಗೆ ತಿರುಗುತ್ತದೆ.'' *('ಶ್ರೀನುಡಿ' , ಪು. ೨೩, ಮೈಸೂರು ಶ್ರೀರಾಮಕೃಷ್ಣ ಆಶ್ರಮದ ಪ್ರಕಟಣೆ)*

''ಗಡಿಯಾರ 'ಟಿಕ್, ಟಿಕ್' ಶಬ್ದ ಮಾಡುವಂತೆ, ಭಗವಂತನ ನಾಮವನ್ನು ಸ್ಮರಿಸುತ್ತಲೇ ಇರಬೇಕು. ಅದೇ ಎಲ್ಲವನ್ನೂ ಕೊಡುತ್ತದೆ. ಇನ್ನೇನನ್ನೂ ಮಾಡಬೇಕಾಗಿಯೇ ಇಲ್ಲ.'' *(ಅಲ್ಲೇ ಪು. ೨೨)* ''ದಿನವೂ ಹದಿನೈದರಿಂದ ಇಪ್ಪತ್ತು ಸಾವಿರದವರೆಗೆ ಜಪ ಮಾಡಿದ್ದೇ ಆದರೆ ಪರಿಣಾಮವನ್ನು ಕಾಣಬಹುದು. ಯಾರೇ ಆಗಲಿ, ಮೊದಲು ಹೀಗೆ ಜಪ ಮಾಡಲಿ. ಆಮೇಲೆ ನನ್ನನ್ನು ಬಂದು ಕೇಳಲಿ. ಆದರೆ ಜಪವನ್ನು ಸ್ವಲ್ಪ ಮನಸ್ಸಿಟ್ಟು ಮಾಡಬೇಕು. ಸುಮ್ಮನೆ ಬಂದು ದೂರುತ್ತಾರೆ, 'ಜಪದಿಂದ ಏನೂ ಆಗುತ್ತಿಲ್ಲವಲ್ಲ, ಏಕೆ?' ಎಂದು.'' *(ಅಲ್ಲೇ, ಪು.೨೩)*

ಭಗವಂತನನ್ನು ಕುರಿತು ಮಾತನಾಡುವಾಗ ಶ್ರೀಮಾತೆ ಇತರರಿಗೆ ಉತ್ಸಾಹವುಂಟಾಗುವಂತೆ, ಧೈರ್ಯತುಂಬುವಂತೆ ಆತ್ಮೀಯವಾಗಿ ತಿಳಿಸಿಕೊಡುತ್ತಿದ್ದರು. ಅವರ ಸಾನ್ನಿಧ್ಯದಿಂದಲೂ, ಸರಳವಾದ ಮಾತುಗಳಿಂದಲೂ ಬಳಿಗೆ ಬಂದವರ ಸಂದೇಹವೆಲ್ಲ ಅಳಿಸಿ ಹೋಗುತ್ತಿದ್ದವು. ಕ್ಷೀರೋದಬಾಲಾ ರಾಯ್ ಎಂಬ ಭಕ್ತೆಗೆ ಅವರು ನೀಡಿದ ಉಪದೇಶ ಹೀಗಿದೆ: ''ಭಗವಂತ ನಿನ್ನನ್ನು ಎಲ್ಲಿ ಹೇಗಿಡುತ್ತಾನೋ, ಅಲ್ಲೇ ಸಂತೋಷದಿಂದ ಇರು. ಭಗವಂತನನ್ನು ಪ್ರಾರ್ಥಿಸುವುದು, ಅವನನ್ನು ಪಡೆಯುವುದು - ಇದೇ ಗುರಿ. ಅವನನ್ನು ಪ್ರಾರ್ಥಿಸಿದರೆ ಅವನು ನಿನ್ನ ಕೈಹಿಡಿದು ಕರೆದು ಕೊಳ್ಳುತ್ತಾನೆ. ಅವನನ್ನು ಅವಲಂಬಿಸಿದ ಮೇಲೆ ನೀನು ಯಾವುದೇ ಭಯಪಡಬೇಕಾಗಿಲ್ಲ.'' *(ಶ್ರೀಶಾರದಾದೇವಿ ವಚನವೇದ, ಪು. ೨೯೧.)* ಶ್ರೀಮಾತೆಯವರ ಬಳಿಗೆ ಬರುತ್ತಿದ್ದ ಈ ಭಕ್ತೆ ಮುಂದೆ ಹೀಗೆ ಬರೆಯುತ್ತಾಳೆ: ''ಶ್ರೀಮಾತೆಯವರನ್ನು ನೋಡಿಯೇ ನಾನು ಆನಂದದಿಂದ ತುಂಬಿಹೋಗುತ್ತಿದ್ದೆ. ನಾನು ಎಲ್ಲವನ್ನೂ ಪಡೆದಿದ್ದೇನೆ, ಎಲ್ಲವೂ ನನಗೆ ಲಭಿಸಿತು, ಇನ್ನೇನೂ ಬಾಕಿ ಉಳಿದಿಲ್ಲ ಎಂದು ನನಗನ್ನಿಸಿತು. ನನ್ನ ಮಾತೆ ವಿಶ್ವಜನನಿ, ನನ್ನ ಇಷ್ಟದೇವತೆ ರಾಜರಾಜೇಶ್ವರಿ; ಗುರುವಿನ ರೂಪದಲ್ಲಿ ನನ್ನೆದುರು ನಿಂತಿದ್ದಾರೆ! ನಾನು ಇನ್ನೇನನ್ನು ಪಡೆಯಬೇಕಾಗಿದೆ? ಹೀಗೆ ಭಾವಿಸುತ್ತ ನಾನು ಕೊನೆಯಿಲ್ಲದ ಆನಂದವನ್ನು ಅನುಭವಿಸುತ್ತಿದ್ದೆ. ನಾನು ಶ್ರೀಮಾತೆಯವರ ಬಳಿ ಹೆಚ್ಚೇನೂ ಪ್ರಶ್ನೆ ಕೇಳುತ್ತಿರಲಿಲ್ಲ. ಶ್ರೀಮಾತೆ ತಾವಾಗಿಯೇ ಏನು ಹೇಳುತ್ತಿದ್ದರೋ ಅದನ್ನು ಕೇಳಿಯೇ ತೃಪ್ತಳಾಗುತ್ತಿದ್ದೆ.'' *(ಅಲ್ಲೇ, ಪು. ೨೯೨)* ಶ್ರೀಮಾತೆಯವರ ವ್ಯಕ್ತಿತ್ವವೇ ಅಂಥದು. ತಮ್ಮ ಸಾನ್ನಿಧ್ಯದಿಂದಲೇ ಭಕ್ತರ ಮನಸ್ಸನ್ನು ಶುದ್ಧಗೊಳಿಸಿಬಿಡುತ್ತಿದ್ದರು. ಅವರ ಒಂದೊಂದು ಮಾತೂ ಭಕ್ತರ ಪಾಲಿಗೆ ಸಂಜೀವಿನಿಯೆನಿಸಿಬಿಡುತ್ತಿತ್ತು.

ಪ್ರಪಂಚದೊಂದಿಗೆ

ಕೆಲವು ಸಂತರ ಉಪದೇಶಗಳಲ್ಲಿ 'ಪ್ರಪಂಚದ ಮೇಲೆ ವೈರಾಗ್ಯ', 'ಲೌಕಿಕ ಜಗತ್ತನ್ನು ದಾಟಿ ಹೋಗುವುದು' ಎಂಬ ಮಾತುಗಳು ಬರುತ್ತವೆ. ಇಂತಹ ತೀವ್ರ ವೈರಾಗ್ಯದ, ಸರ್ವಸಂಗ ಪರಿತ್ಯಾಗದ ಉಪದೇಶಗಳನ್ನು ಶ್ರೀಮಾತೆ ಎಲ್ಲರಿಗೂ ನೀಡುತ್ತಿರಲಿಲ್ಲ. ಸಂನ್ಯಾಸಿಗಳಿಗೆ ಮಾತ್ರ ಅವರು ಪ್ರಪಂಚ ನಿಸ್ಸಾರವೆಂದು ಬೋಧಿಸುತ್ತಿದ್ದರು; ಉಳಿದವರಿಗೆಲ್ಲ ಸಂಸಾರದಲ್ಲಿದ್ದುಕೊಂಡೇ ಭಗವಂತನನ್ನು ಪಡೆಯುವ ಮಾರ್ಗವನ್ನು ತಿಳಿಸಿಕೊಡುತ್ತಿದ್ದರು.

ಪ್ರಪಂಚದಲ್ಲಿ ನಾವು ಹೇಗಿರಬೇಕು? ಯಾವ ರೀತಿ ಜನರ ನಡುವೆ ಬದುಕಿದರೆ ನಮಗೆ ಶಾಂತಿ, ನೆಮ್ಮದಿ ಹಾಗೂ ಆಧ್ಯಾತ್ಮಿಕ ಪ್ರಗತಿಯುಂಟಾಗುವುದು? ಈ ವಿಚಾರವಾಗಿ ಶ್ರೀರಾಮಕೃಷ್ಣರು ನೀಡಿರುವ ಅಮೂಲ್ಯ ಉಪದೇಶಗಳಂತೆಯೇ ಶ್ರೀಮಾತೆಯವರ ಬೋಧನೆಗಳೂ ಅತ್ಯಂತ ಉಪಯುಕ್ತವಾಗಿವೆ. ಶ್ರೀಮಾತೆ ಸರಳವಾಗಿಯೂ ನೇರವಾಗಿಯೂ ಹೇಳುವ ಮಾತುಗಳು ಪ್ರಾಯೋಗಿಕವಾಗಿರುತ್ತಿದ್ದವು; ಕೈಗೂಡದ ಆದರ್ಶಗಳನ್ನೆಂದೂ ಅವರು ಜನರ ಮುಂದಿಡುತ್ತಿರಲಿಲ್ಲ. ''ಬಹಳ ಎಚ್ಚರಿಕೆಯಿಂದ ಜೀವನ ಸಾಗಿಸಬೇಕು. ಪ್ರತಿಯೊಂದು ಒಳ್ಳೆಯ ಕೆಲಸವೂ ಅದಕ್ಕೆ ತಕ್ಕ ಪ್ರತಿಫಲವನ್ನು ನೀಡುವುದು. ಇತರರ ಬಗ್ಗೆ ಕಟುವಾದ ನುಡಿಗಳನ್ನು ಆಡುವುದು ಒಳ್ಳೆಯದಲ್ಲ. ಹಾಗೆ ಮಾಡಿದರೆ ಇತರರ ನೋವಿಗೆ ನೀನೇ ಕಾರಣವಾಗುವೆ.'' *(Teachings of Sarda Devi, P.95)* ''ಎಲ್ಲರನ್ನೂ ಸಮಾನವಾಗಿ ಪ್ರೀತಿಸುವುದು ಹೇಗೆ ಎಂದು ಹೇಳುತ್ತೇನೆ, ಕೇಳು. ನೀನು ಯಾರನ್ನು ಪ್ರೀತಿಸುವೆಯೋ ಅವರಿಂದ ಏನನ್ನೂ ನಿರೀಕ್ಷಿಸಬಾರದು. ಹಾಗೆ ನಿರೀಕ್ಷಿಸಿದರೆ, ಆಗ ನೀನು ಹೆಚ್ಚು ಕೊಟ್ಟವರನ್ನು ಹೆಚ್ಚು ಪ್ರೀತಿಸುತ್ತೀಯೆ; ಕಡಿಮೆ ಕೊಟ್ಟವರನ್ನು ಕಡಿಮೆ ಪ್ರೀತಿಸುತ್ತೀಯೆ. ಹೀಗೆ ನೀನು ಎಲ್ಲರನ್ನೂ ಸಮಾನವಾಗಿ ಪ್ರೀತಿಸಲು ಆಗುವುದಿಲ್ಲ.'' *(ಶ್ರೀನುಡಿ, ಪು. ೨೯)*

ಶ್ರೀಮಾತೆಯವರ ಬಳಿಗೆ ಬರುವತ್ತಿದ್ದವರು ಹಲವು ಬಗೆಯ ಸ್ವಭಾವದಿಂದ ಕೂಡಿರುತ್ತಿದ್ದರು. ಎಲ್ಲರೂ ಅವರ ಮುಂದೆ ಆಧ್ಯಾತ್ಮಿಕ ವಿಚಾರಗಳನ್ನು ಮಾತ್ರ ಮಾತನಾಡುತ್ತಾರೆ ಎಂದೇನೂ ಇರಲಿಲ್ಲ. ತಮ್ಮ ತಮ್ಮ ಸಮಸ್ಯೆಗಳು, ಗೊಂದಲ, ಪ್ರಾಪಂಚಿಕ ಕಷ್ಟನಷ್ಟ ಹಾಗೂ ರೋಗರುಜಿನಗಳು, ಅವುಗಳಿಗೆ ಪರಿಹಾರ – ಎಲ್ಲವನ್ನೂ ಶ್ರೀಮಾತೆಯವರ ಮುಂದೆ ಹೇಳಿಕೊಳ್ಳುತ್ತಿದ್ದರು. ಶ್ರೀಮಾತೆ ಅವರಿಗೆ ನೀಡುತ್ತಿದ್ದ ಸಲಹೆ, ಮಾರ್ಗದರ್ಶನ, ಸಾಂತ್ವನದ ನುಡಿಗಳು ಅವರ ಹೃದಯವನ್ನು ಹಗುರ ಮಾಡುತ್ತಿದ್ದವು, ಹಾಗೂ ಅದರಿಂದ ಅವರ ಅನೇಕ ಸಮಸ್ಯೆಗಳು ಪರಿಹಾರವಾಗುತ್ತಿದ್ದವು. ಶ್ರೀಮಾತೆಗೆ ಪ್ರತಿಯೊಬ್ಬರ ಬೇಗೆ, ಬಳಲಿಕೆ, ನೋವುಗಳು ಅರ್ಥವಾಗುತ್ತಿದ್ದವು. ಅದಕ್ಕನುಗುಣವಾಗಿ ಅವರು ಸ್ಪಂದಿಸುತ್ತ ಭಗವಂತನಲ್ಲಿ ಪ್ರಾರ್ಥಿಸುತ್ತಿದ್ದರು. ಸರಯೂಬಾಲಾ ದೇವಿ ಎಂಬ ಭಕ್ತೆಗೆ ಅವರು ಹೇಳಿದ್ದರು, ''ಮನಸ್ಸಿನಲ್ಲಿ ನೀನು ಹೀಗೆ ಭಾವಿಸಿಕೊ – ಬೇರೆ ಯಾರೂ ಇಲ್ಲದಿದ್ದರೂ ನನಗೊಬ್ಬಳು 'ತಾಯಿ' ಇದ್ದಾಳೆ ಅಂತ.'' ಶ್ರೀಮಾತೆ ಈ ರೀತಿ ತಮ್ಮ ನುಡಿಗಳಿಂದ ಭಕ್ತರ ಹೃದಯದಲ್ಲಿ ಧೈರ್ಯ ತುಂಬುತ್ತಿದ್ದರು.

ಪ್ರಾಪಂಚಿಕ ಸಮಸ್ಯೆಗಳಿಗೆ ಅವರು ತೋರಿಸಿಕೊಡುತ್ತಿದ್ದ ಪರಿಹಾರಗಳು ಪ್ರಾರ್ಥನೆ, ಶರಣಾಗತಿಗಳಷ್ಟೇ ಅಲ್ಲ; ಉತ್ತಮ ನಡವಳಿಕೆ, ಸಾಮಾನ್ಯ ಬುದ್ಧಿಶಕ್ತಿಗಳಿಂದ ಅನೇಕ ತೊಂದರೆಗಳನ್ನು ನಿವಾರಿಸಿಕೊಳ್ಳಬಹುದು ಎನ್ನುತ್ತಿದ್ದರು. ಸಹನೆ, ಕರುಣೆ, ಅನುಕಂಪೆ, ಸೇವೆ ಮುಂತಾದ ಗುಣಗಳನ್ನು ಬೆಳೆಸಿಕೊಳ್ಳಬೇಕೆಂದು ಅವರು ಭಕ್ತರಿಗೆ ಹೇಳುತ್ತಿದ್ದರು. 'ಹೊಂದಿಕೊಂಡೇ ಹೋಗಬೇಕು', 'ಅಪ್ರಿಯ ಸತ್ಯವನ್ನೆಂದಿಗೂ ಅನಗತ್ಯವಾಗಿ ಆಡಬಾರದು' ಎಂಬಂತಹ ಲೌಕಿಕ ನಡವಳಿಕೆಯ ಮಾತುಗಳನ್ನೂ ಅವರು ಆಡುತ್ತಿದ್ದರು. ''ಕರುಣೆ ಇಲ್ಲದವನನ್ನು ಮನುಷ್ಯ ಎಂದು ಕರೆಯಲು ಹೇಗೆ ಸಾಧ್ಯ?'' ಎನ್ನುತ್ತಾರೆ ಶ್ರೀಮಾತೆ. *(ಶ್ರೀನುಡಿ, ಪು. ೨೯).* ''ಪ್ರೀತಿ ಏನನ್ನು ಬೇಕಾದರೂ ಸಾಧಿಸಬಲ್ಲುದು. ಬಲವಂತವಾಗಿಯೋ ಅಥವಾ ಸುತ್ತು ಬಳಸು ವಿಧಾನದಿಂದಲೋ ಯಾರನ್ನೂ ನೀನು ಹೇಳಿದಂತೆ ಕೇಳುವ ಹಾಗೆ ಮಾಡಲು ಸಾಧ್ಯವಿಲ್ಲ'' *(ಅಲ್ಲೇ)* – ಈ ಬಗೆಯ ಉಪದೇಶಗಳು ಲೌಕಿಕ ಜೀವನದಲ್ಲೂ ನಾವು ನಡೆಯಬೇಕಾದ ವಿಧಾನವನ್ನು ಹೇಳಿಕೊಡುತ್ತವೆ. ಇಲ್ಲಿ ಕೂಡ ಭಗವಂತನ ಶಕ್ತಿ, ಸಾನ್ನಿಧ್ಯ, ಅವನ ಸ್ಮರಣೆ ಹಾಗೂ ಉಪಾಸನೆ ಅತ್ಯಗತ್ಯವೆನ್ನುತಾರೆ ಶ್ರೀಮಾತೆ. ಅವರ ಪಾಲಿಗೆ ಲೌಕಿಕ, ಆಧ್ಯಾತ್ಮಿಕಗಳೆಂದು ಎರಡು ಜಗತ್ತುಗಳಿಲ್ಲ; ಇಡೀ ಜಗತ್ತೇ ಭಗವಂತನಿಂದ ಪರಿಪೂರ್ಣವಾಗಿದೆ. ನಾವು ಅದನ್ನು ಕಂಡುಕೊಳ್ಳಬೇಕು ಅಷ್ಟೆ. ಅವರು ಹೇಳುತ್ತಾರೆ: ''ಈ ಜಗತ್ತು ಭಗವಂತನದು. ಅವನು ನಮ್ಮನ್ನು ಎಲ್ಲೇ ಇಡಲಿ, ಏನೇ ಮಾಡಲಿ ನಾವು ಅದನ್ನು ಸಮಾಧಾನದಿಂದ ತೆಗೆದುಕೊಳ್ಳಬೇಕು. ಶ್ರದ್ಧಾಭಕ್ತಿಗಳಿಂದ ನಾವು ಸಂಪೂರ್ಣ ಭಗವಂತನಲ್ಲಿ ಶರಣಾಗಬೇಕು.'' *(ಶ್ರೀನುಡಿ. ೮.)* ಹೀಗೆ ಸಾಧಕನ ನಡೆ, ನುಡಿ, ಸ್ವಭಾವಗಳು ಮುಖ್ಯವೆನ್ನುತ್ತಿದ್ದರು.

ಕೆಲಸ ಮತ್ತು ಸಾಧನೆ

ಶ್ರೀಮಾತೆಯವರು ಕೆಲಸಕ್ಕೆ ಅತ್ಯಂತ ಮಹತ್ವ ನೀಡಿದ್ದರು. ''ಕರ್ಮದಿಂದ ಮಾತ್ರ ಕರ್ಮಬಂಧನದಿಂದ ಪಾರಾಗಬಹುದು, ಕರ್ಮ ಮಾಡದೆ ಇರುವುದರಿಂದಲ್ಲ. ಪೂರ್ಣ ಅನಾಸಕ್ತಿ ಆಮೇಲೆ ಬರುತ್ತದೆ'' ಎನ್ನುತ್ತಾರೆ. *(ಶ್ರೀನುಡಿ, ೧೭)* ''ದಿನದ ಇಪ್ಪತ್ತ ನಾಲ್ಕು ಗಂಟೆ ಧ್ಯಾನ–ಚಿಂತನೆಗಳಲ್ಲಿ ತೊಡಗಿರಲು ಯಾರಿಗೂ ಸಾಧ್ಯವಿಲ್ಲ. ಆದ್ದರಿಂದ ಕೆಲಸ ಮಾಡಲೇಬೇಕು. ಇದರಿಂದ ಮನಸ್ಸು ಲವಲವಿಕೆಯಿಂದ ಇರುತ್ತದೆ.'' *(ಅಲ್ಲೇ.)* ಸ್ವತಃ ತಾವೇ ಅತ್ಯುತ್ತಮ ಕರ್ಮಯೋಗಿಯಾಗಿದ್ದರು ಶ್ರೀಮಾತೆ. ಅತ್ಯಂತ ವೇಗವಾಗಿ ಹಾಗೂ ಅಚ್ಚುಕಟ್ಟಾಗಿ ಕೆಲಸ ಮಾಡಿ ಮುಗಿಸುವ ಕಲೆ ಅವರಿಗೆ ಸಿದ್ಧಿಸಿತ್ತು ಎಂದು ಅವರ ಶಿಷ್ಯಂದಿರು ಹೇಳುತ್ತಾರೆ. ಗೃಹಕೃತ್ಯ, ಇತರರಿಗೆ ಸಹಾಯ ಮಾಡುವುದು, ತನ್ನವರಿಗಾಗಿ ಮಿಡಿಯುವ ಹೃದಯ, ಅವರಿಗೆ ಏನನ್ನಾದರೂ ಮಾಡಲು ಸಿದ್ಧರಾಗಿರುವುದು – ಇವನ್ನು ನಾವು ಶ್ರೀಮಾತೆಯವರ ಜೀವನದಲ್ಲಿ ನೋಡುತ್ತೇವೆ. ತಮ್ಮ ಬಂಧುವರ್ಗ, ಭಕ್ತಜನರು, ಶಿಷ್ಯಂದಿರು, ಶಾಂತಿಯನ್ನರಸಿ ದೂರದಿಂದ ಬಂದವರು, ದೀಕ್ಷೆಗಾಗಿ ಬೇಡುವ ಸಾಧಕರು – ಇವರ ನಡುವೆ ಇದ್ದುಕೊಂಡು, ಎಲ್ಲ ಶಿಷ್ಯಂದಿರಿಗಾಗಿ, ತಮ್ಮ ಮಕ್ಕಳ ಏಳಿಗೆಗಾಗಿ ನಿರಂತರ ಪ್ರಾರ್ಥಿಸುತ್ತಿದ್ದರು. ಸ್ವತಃ ತಾವು ಅನುಭವಿಸಿ ಕಂಡುಕೊಂಡ ಸತ್ಯವನ್ನೇ ಅವರು ಇತರರಿಗೂ ಈ ಹೇಳುತ್ತಾರೆ: ''ಒಂದು ವಸ್ತು ಎಷ್ಟೇ ಕ್ಷುಲ್ಲಕವೆನಿಸಿದರೂ ಅದನ್ನು ಅಲಕ್ಷ್ಯ ಮಾಡಬಾರದು. ಪ್ರತಿಯೊಂದಕ್ಕೂ ಸಲ್ಲಬೇಕಾದ ಗೌರವವನ್ನು ಸಲ್ಲಿಸಬೇಕು. ಒಂದು ಪೊರಕೆಯನ್ನೂ ಗೌರವದಿಂದ ಕಾಣಬೇಕು. ತೀರ ಸಣ್ಣ ಕೆಲಸವನ್ನೂ ಗೌರವದಿಂದ ಮಾಡಬೇಕು.'' *(ಅಲ್ಲೇ ಪು. ೧೯)*

ಮಾತೃತ್ವದ ದೈವೀ ಆದರ್ಶ

ಶ್ರೀಮಾತೆ ಜಗತ್ತಿಗೆ ತೋರಿಸಿ ಕೊಟ್ಟಿರುವುದು ಮಾತೃತ್ವದ ಹಿಂದಿರುವ ದೈವೀ ಆದರ್ಶವನ್ನು. ಸ್ತ್ರೀಯಾದವಳು ಪರಿಪೂರ್ಣತೆಯನ್ನು ಹೊಂದುವುದು ಮಾತೃತ್ವದಿಂದ. ಇದಕ್ಕೆ ದೈಹಿಕವಾದ, ಮನೋವೈಜ್ಞಾನಿಕವಾದ ಅಥವಾ ಸಾಮಾಜಿಕ–ಸಾಂಸ್ಕೃತಿಕ ಆಧಾರವಿದೆ ಎನ್ನುವ ವಾದಗಳನ್ನೆಲ್ಲ ದಾಟಿ ಹೋಗಿ, ಎಲ್ಲದಕ್ಕೂ ಮೂಲವಾಗಿರುವ ಆಧ್ಯಾತ್ಮಿಕ ಸತ್ಯವೇ ಭಗವಂತನನ್ನು ತಾಯಿಯಾಗಿ ಕಾಣುವುದಕ್ಕೆ ಆಧಾರವೆಂಬುದನ್ನು ಶ್ರೀಮಾತೆಯವರ ಅದ್ಭುತ ಜೀವನ ತೋರಿಸಿಕೊಟ್ಟಿದೆ. ಯಾವುದೇ ತತ್ತ್ವವನ್ನು ಪ್ರತಿಪಾದಿಸದೆ, ಯಾವ ಪಂಥವನ್ನೂ ಪ್ರತಿನಿಧಿಸದೆ, ಅಥವಾ ಯಾವುದೋ ಒಂದು ಮಾರ್ಗವನ್ನು ಪುರಸ್ಕರಿಸದೆ ತಮ್ಮ ಅದ್ಭುತ ಜೀವನದಿಂದಲೇ ಶ್ರೀಮಾತೆ ತಮ್ಮ ಮಾತೃಪ್ರೇಮವನ್ನು ಸಕಲ ಮಾನವರೆಡೆಗೆ ಹರಿಸಿದರು; ಸಮಸ್ತ ಚರಾಚರವನ್ನೂ ಅವರು ತಮ್ಮದಾಗಿಸಿಕೊಂಡರು. ಭಾರತೀಯ ಸಂಸ್ಕೃತಿ ಜಗತ್ತಿಗೆ ನೀಡಿರುವ ಮಹತ್ತರ ಕೊಡುಗೆಯೇ ಮಾತೃತ್ವದ ದೈವೀ ಆದರ್ಶ. ಅದರ ಅತ್ಯುತ್ತಮ ಜೀವಂತ ನಿದರ್ಶನವೇ ಶ್ರೀಮಾತೆ ಶಾರದಾದೇವಿಯವರು.

ದೈವೀಶಕ್ತಿ



ಭಗವಂತನಿಗೆ ಯಾವುದೂ ಅಸಾಧ್ಯವಲ್ಲ. ಅವನ ಸ್ವರೂಪ ಏನೆಂಬುದನ್ನು ಯಾರಿಂದಲೂ ಬಾಯಿಂದ ವರ್ಣಿಸಲಾಗುವುದಿಲ್ಲ. ಭಗವಂತನ ಕೈಯಲ್ಲಿ ಎಲ್ಲವೂ ಸಾಧ್ಯ. ಒಂದು ಕಡೆ ಇಬ್ಬರು ಯೋಗಿಗಳು ಸಾಧನೆಯಲ್ಲಿ ತೊಡಗಿದ್ದರು. ನಾರದ ಋಷಿ ಆ ಮಾರ್ಗವಾಗಿ ಒಂದು ದಿನ ಮುಂದುವರಿಯುತ್ತಿದ್ದರು. ಒಬ್ಬ ಯೋಗಿ ನಾರದರ ಪರಿಚಯ ಮಾಡಿಕೊಂಡು ಅವರನ್ನು ಕೇಳಿದ: ‘ನೀವು ನಾರಾಯಣನ ಸಾನ್ನಿಧ್ಯದಿಂದ ಬರುತ್ತಾ ಇದ್ದೀರಲ್ಲವೆ? ಆತ ಏನು ಮಾಡುತ್ತಾ ಇದ್ದಾನೆ?’ ನಾರದರು ಹೇಳಿದರು: ‘ಈಗ ತಾನೆ ನೋಡಿಕೊಂಡು ಬಂದೆ. ಆತ ಸೂಜಿಯ ಕಣ್ಣಿನ ಮೂಲಕ ಆನೆ ಮತ್ತು ಒಂಟೆಗಳನ್ನು ಈ ಕಡೆಯಿಂದ ಆ ಕಡೆಗೆ, ಆ ಕಡೆಯಿಂದ ಈ ಕಡೆಗೆ ಹುಗಿಸುತ್ತಾ ಇರುವುದನ್ನು.’ ಅವರಲ್ಲಿ ಒಬ್ಬ ಹೇಳಿದ: ‘ಅದರಲ್ಲಿ ಆಶ್ಚರ್ಯ ಪಡುವುದೇನಿದೆ? ಆತನಿಗೆ ಎಲ್ಲವೂ ಸಾಧ್ಯ.’ ಆದರೆ ಇನ್ನೊಬ್ಬ ವಿಸ್ಮಯದಿಂದ ಕೇಳಿದ: ‘ಏನು! ಅದು ಎಂದಿಗಾದರೂ ಸಾಧ್ಯವೆ? ನೀವು ಅಲ್ಲಿಗೆ ಹೋಗಲೇ ಇಲ್ಲ ಅಂತ ಕಾಣುತ್ತದೆ!’

ಆದ್ಯಾಶಕ್ತಿಯ ಸಹಾಯದಿಂದಲೇ ಭಗವಂತನ ಅವತಾರ ಲೀಲೆ. ಭಗವಂತ ತನ್ನ ಈ ಶಕ್ತಿಯಿಂದ ಮನುಷ್ಯನಾಗಿ ಅವತರಿಸುತ್ತಾನೆ. ಆಗ ಮಾತ್ರವೇ ಅವತಾರಪುರುಷನಿಗೆ ಕೆಲಸ ಮಾಡಲು ಸಾಧ್ಯವಾಗುತ್ತದೆ. ಎಲ್ಲವೂ ಭಗವತಿಯ ಶಕ್ತಿಯಿಂದಲೇ ಘಟಿಸುತ್ತವೆ.

ಕೆಲವು ವೇಳೆ ಭಗವಂತ ಚುಂಬಕ, ಭಕ್ತ ಸೂಜಿ ಆಗುತ್ತಾರೆ. ಭಗವಂತ ಭಕ್ತನನ್ನು ಆಕರ್ಷಿಸಿಬಿಡುತ್ತಾನೆ. ಇನ್ನು ಕೆಲವು ವೇಳೆ ಭಕ್ತ ಚುಂಬಕ, ಭಗವಂತ ಸೂಜಿ ಆಗಿಬಿಡುತ್ತಾನೆ. ಭಕ್ತನ ಆಕರ್ಷಣೆ ಅಷ್ಟು ಬಲವಾದದ್ದು, ಆತನ ಪ್ರೇಮಕ್ಕೆ ಮುಗ್ಧನಾಗಿ ಭಗವಂತ ಆತನ ಹತ್ತಿರಕ್ಕೆ ಹಾರಿಬರುತ್ತಾನೆ.

ಭಗವಂತನ ಸೃಷ್ಟಿಯಲ್ಲಿ ಎಲ್ಲವೂ ಸಾಧ್ಯ ಎಂಬ ಶ್ರದ್ಧೆಯೊಂದಿದ್ದರೆ ಬೇಕಾದಷ್ಟು. ನಿನ್ನ ಭಾವನೆಗಳೇ ಸತ್ಯವಾದುವು, ಉಳಿದವರದೆಲ್ಲಾ ಅಸತ್ಯವಾದುವು ಎಂಬ ಭಾವನೆ ನಿನ್ನ ಮನಸ್ಸಿನ ಹೊಸ್ತಿಲನ್ನೇ ಹತ್ತದಿರಲಿ. ಬಳಿಕ ಆತನೇ ಎಲ್ಲವನ್ನೂ ತಿಳಿಸಿಕೊಡುತ್ತಾನೆ.

ಭಗವಂತನ ಕೆಲಸಕಾರ್ಯಗಳನ್ನು ಮನುಷ್ಯ ಅರಿಯುವ ಬಗೆ ಹೇಗೆ? ಅವಕ್ಕೆ ಮಿತಿ ಎಂಬುದೇ ಇಲ್ಲ. ಆದ್ದರಿಂದ ಇದನ್ನು ನಾನು ಅರಿತುಕೊಳ್ಳಲು ಸ್ವಲ್ಪವೂ ಪ್ರಯತ್ನ ಮಾಡುವುದಿಲ್ಲ. ಆತನ ಸೃಷ್ಟಿಯಲ್ಲಿ ಎಲ್ಲವೂ ಸಾಧ್ಯ ಎಂಬುದನ್ನು ಕೇಳಿ, ಅದನ್ನು ಹೃದಯದಲ್ಲಿ ಚಿರಮುದ್ರಿತವನ್ನಾಗಿ ಮಾಡಿಕೊಂಡಿದ್ದೇನೆ. ಆದ್ದರಿಂದ ನಾನು ಆತನ ಸೃಷ್ಟಿಯ ಸಂಬಂಧವಾಗಿ ಒಂದು ಸ್ವಲ್ಪವೂ ಚಿಂತಿಸದೆ, ಆತನ ಸಂಬಂಧವಾಗಿಯೇ ಚಿಂತಿಸುತ್ತಿದ್ದೇನೆ. ಒಮ್ಮೆ ಹನುಮಂತನಿಗೆ ಯಾರೋ ಪ್ರಶ್ನೆ ಹಾಕಿದರು: ‘ಈ ದಿನ ಯಾವ ತಿಥಿ?’ ಎಂಬುದಾಗಿ. ಆತ ಹೇಳಿದ: ‘ನನಗೆ ತಿಥಿ, ವಾರ, ನಕ್ಷತ್ರ ಯಾವುದೂ ಗೊತ್ತಿಲ್ಲ; ನಾನು ಕೇವಲ ರಾಮ ಚಿಂತನೆಯನ್ನು ಮಾತ್ರ ಮಾಡುತ್ತಿದ್ದೇನೆ.’

ಭಗವಂತನ ಚೇತನದಿಂದ ಈ ಜಗತ್ತು ಚೇತನಮಯವಾಗಿದೆ. ಒಮ್ಮೊಮ್ಮೆ ಕಾಣಬರುತ್ತದೆ, ಚಿಕ್ಕಪುಟ್ಟ ಮೀನುಗಳಲ್ಲೂ ಅದೇ ಚೇತನ ‘ಕಿಲ ಕಿಲ’ ಅನ್ನುತ್ತಿರುವುದು.

ಎಲ್ಲಿಯವರೆಗೆ ಉಪಾಧಿಯಿರುವುದೋ, ಅಲ್ಲಿಯವರೆಗೆ ನಾನಾತ್ವದ ಬೋಧೆ ಇರುತ್ತದೆ — ಕೇಶವ, ಪ್ರಸನ್ನ, ಅಮೃತ ಇತ್ಯಾದಿಗಳ ಬೋಧೆ. ಪೂರ್ಣಜ್ಞಾನ ದೊರೆತಾಗ ಎಲ್ಲೆಲ್ಲೂ ಒಂದೇ ಚೈತನ್ಯವಿರುವ ಹಾಗೆ ಬೋಧೆಯಾಗುತ್ತದೆ. ಆ ಪೂರ್ಣಜ್ಞಾನವೇ ಮತ್ತೆ ಅನುಭವವನ್ನು ತರುತ್ತದೆ, ಆ ಒಂದು ಚೈತನ್ಯ ವಸ್ತುವೇ ಈ ಜೀವ, ಜಗತ್ತು, ಈ ಚತುರ್ವಿಂಶತಿ ತತ್ತ್ವ ಆಗಿದೆ ಎಂಬುದಾಗಿ. ಶಕ್ತಿವಿಶೇಷತೆಯಿಂದ, ಅದೇ ಎಲ್ಲವೂ ಆಗಿರುವುದೇನೋ ನಿಜ; ಆದರೆ ಕೆಲವದರಲ್ಲಿ ಶಕ್ತಿಯ ಪ್ರಕಾಶ ಹೆಚ್ಚು, ಇನ್ನು ಕೆಲವದರಲ್ಲಿ ಕಡಿಮೆ.

ಭಗವಂತ ಯಾರ ಮೂಲಕ ವಿಶೇಷವಾಗಿ ಕ್ರೀಡಿಸುತ್ತಾನೋ, ಆತನಲ್ಲಿ ಭಗವಂತನ ಶಕ್ತಿ ವಿಶೇಷರೂಪದಲ್ಲಿ ಇರುತ್ತದೆ. ಜಮೀನುದಾರ ತನ್ನ ಎಸ್ಟೇಟಿನಲ್ಲಿ ಎಲ್ಲಿ ಬೇಕಾದರೂ ಇರಬಲ್ಲ. ಆದರೆ ಒಂದು ನಿರ್ದಿಷ್ಟ ಬೈಠಕ್‌ಖಾನೆಯಲ್ಲಿ ಆತ ಪ್ರಾಯಿಕವಾಗಿ ಇರುತ್ತಾನೆ. ಭಕ್ತ ಭಗವಂತನ ಬೈಠಕ್‌ಖಾನೆ, ಭಕ್ತನ ಹೃದಯದಲ್ಲಿ ಕ್ರೀಡಿಸಲು ಆತ ಇಚ್ಛಿಸುತ್ತಾನೆ. ಭಕ್ತನ ಹೃದಯದಲ್ಲಿ ಆತನ ವಿಶೇಷ ಶಕ್ತಿ ಬಂದು ನೆಲೆಸುತ್ತದೆ.

ಯಾರು ಜೀವರಿಗಾಗಿ ಚಂದ್ರ, ಸೂರ್ಯ, ತಂದೆ-ತಾಯಿ, ಹೂವು, ಹಣ್ಣು, ಧಾನ್ಯ ಸೃಷ್ಟಿಸಿದ್ದಾನೋ, ಆ ಭಗವಂತನೇ ಪರರಿಗೆ ಉಪಕಾರ ಮಾಡಲು ಪರರಿಗೆ ಶ್ರೇಯಸ್ಸನ್ನು ತರಲು ಹಕ್ಕುದಾರ. ತಾಯಿ-ತಂದೆಯರಲ್ಲಿ ಕಾಣಬರುವ ಒಲುಮೆ ಅದು ಆತನಿಗೆ ಸೇರಿದುದೆ; ಜೀವರಕ್ಷಣೆಗಾಗಿಯೇ ಆತ ಅದನ್ನು ಅವರಿಗೆ ಕೊಟ್ಟಿದ್ದಾನೆ. ದಯಾಳುವಿನಲ್ಲಿ ಕಾಣಬರುವ ದಯೆ ಆತನದೇ; ನಿಸ್ಸಹಾಯಕ ಜೀವಿಗಳ ರಕ್ಷಣೆಗಾಗಿ ಅವರಿಗೆ ಅದನ್ನು ಕೊಟ್ಟಿದ್ದಾನೆ. ನೀನು ದಯೆ ತೋರು, ಬಿಡು; ಆತ ಒಂದಲ್ಲ ಒಂದು ವಿಧವಾಗಿ ತನ್ನ ಕೆಲಸವನ್ನು ಮಾಡಿಸಿಕೊಂಡು ಬಿಡುತ್ತಾನೆ.

ಶ್ರೀರಾಮಕೃಷ್ಣ ವಚನವೇದದಿಂದ

ಗುರುಕೃಪೆಯೆಂಬ ಕಲ್ಪತರು

ಎಲ್.ಜಿ. ನಾಗೇಶರಾವ್

ಕಲ್ಕತ್ತೆಯ ಕಾಶೀಪುರದ ತೋಟದ ಮನೆಯಲ್ಲಿದ್ದುಕೊಂಡು ಚಿಕಿತ್ಸೆ ಪಡೆಯುತ್ತಿದ್ದ ಶ್ರೀರಾಮಕೃಷ್ಣರು ಕ್ರಿ.ಶ. ೧೮೮೬ರ ಜನವರಿ ೧ರಂದು ಹಲವು ಮಂದಿ ಭಕ್ತರ ಪಾಲಿಗೆ 'ಕಲ್ಪತರು'ವಾಗಿ ವಿಶೇಷ ಅನುಗ್ರಹ ಮಾಡಿದರು. ಈ ಅಸಾಮಾನ್ಯ ಘಟನೆಯು ಶ್ರೀರಾಮಕೃಷ್ಣರ ಅಹೇತುಕ ಕೃಪೆಯನ್ನು ಪ್ರಕಾಶಪಡಿಸುತ್ತದೆ. ಇದರ ನೆನಪಿಗಾಗಿ ಪ್ರತಿವರ್ಷ ಜನವರಿ ೧ ರಂದು **'ಕಲ್ಪತರು ದಿನ'**ವೆಂದು ಶ್ರೀರಾಮಕೃಷ್ಣರನ್ನು ಆರಾಧಿಸಲಾಗುತ್ತಿದೆ. ಈ ಬಗ್ಗೆ ಬರೆದಿರುವ ಲೇಖಕರು ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಸಹಾಯಕ ರಿಜಿಸ್ಟ್ರಾರ್ ಆಗಿ ಸೇವೆ ಸಲ್ಲಿಸಿ, ನಿವೃತ್ತರಾಗಿದ್ದಾರೆ. ಬೆಂಗಳೂರು ಆಶ್ರಮದ ಭಕ್ತರಾದ ಅವರು ಭಾಷಾಂತರವೇ ಮೊದಲಾದ ಹಲವು ಸಾಹಿತ್ಯಿಕ ಚಟುವಟಿಕೆಗಳಲ್ಲಿ ನಿರತರಾಗಿದ್ದಾರೆ.



ಶ್ರೀರಾಮಕೃಷ್ಣರು ತಮ್ಮ ಬಳಿಗೆ ಬಂದವರಿಗೆಲ್ಲ ಉಪದೇಶಾಮೃತವನ್ನು ನೀಡುತ್ತಿದ್ದರು; ದಕ್ಷಿಣೇಶ್ವರಕ್ಕೆ ನೂರಾರು ಭಕ್ತರು ಬರಲಾರಂಭಿಸಿದರು — ಇವು ಅವರ ಮಹಾಸಮಾಧಿಗೆ ಮುನ್ನ ೪ ರಿಂದ ೫ ವರ್ಷಗಳ ಹಿಂದಿನ ಘಟನೆಗಳು. ಅವರ ಸಣ್ಣ ಕೊಠಡಿಯು ಸದಾ ಜನರಿಂದ ತುಂಬಿರುತ್ತಿತ್ತು. ಶ್ರೀರಾಮಕೃಷ್ಣರು ತಮ್ಮ ಅನಾರೋಗ್ಯ ಅಥವಾ ತೊಂದರೆಯನ್ನು ಲೆಕ್ಕಿಸದೆ ಬಂದ ಜನರಿಗೆ ಉಪದೇಶ ನೀಡುತ್ತಿದ್ದರು. ಅವರಿಗೆ ಊಟಕ್ಕೆ ಸ್ವಲ್ಪ ಸಮಯ ದೊರೆಯುವುದೂ, ದೇಹಕ್ಕೆ ಸ್ವಲ್ಪ ವಿರಾಮ ದೊರೆಯುವುದೂ ಕಷ್ಟವಾಗುತ್ತಿತ್ತು. ಎಲ್ಲರ ಕಷ್ಟಗಳಿಗೂ ಅವರ ಹೃದಯ ಸ್ಪಂದಿಸುತ್ತಿತ್ತು. ಕೆಲವು ವೇಳೆ ಅವರು ಭಕ್ತಿಗೀತೆಗಳನ್ನು ಹಾಡಿ ಜನರಲ್ಲಿ ಸ್ಫೂರ್ತಿಯನ್ನು ಉಂಟುಮಾಡುತ್ತಿದ್ದರು. ಕೆಲವೊಮ್ಮೆ ಜ್ಞಾನದಾಯಕ ವಚನಗಳನ್ನು ಹೇಳುತ್ತಿದ್ದರು. ಕೆಲವು ಸಲ ತಮ್ಮ ಆಧ್ಯಾತ್ಮಿಕ ಅನುಭವಗಳನ್ನು ಹೇಳುತ್ತಿದ್ದರು. ಕೆಲವೊಮ್ಮೆ ಭಕ್ತರು ಹಾಡುತ್ತಿದ್ದ ಕೀರ್ತನೆಗಳಿಂದ ಪರಿಸರವು ತುಂಬಿಹೋಗುತ್ತಿತ್ತು. ಯಾರು ಶ್ರೀರಾಮಕೃಷ್ಣರ ನಿಕಟ ಸಂಪರ್ಕಕ್ಕೆ ಬಂದರೂ, ಅವರಿಗೆ ಭಗವಂತನನ್ನು ಕಾಣುವ ತೀವ್ರ ಆಸಕ್ತಿ ಉಂಟಾಗುತ್ತಿತ್ತು. ಹೂವುಗಳು ಅರಳಿದಾಗ ದುಂಬಿಗಳು ತಾವಾಗಿಯೇ ಮಕರಂದಕ್ಕಾಗಿ ಬರುತ್ತವೆ. ಶ್ರೀರಾಮಕೃಷ್ಣರ ವಿಷಯದಲ್ಲೂ ಹಾಗೆಯೇ ಆಯಿತು. ಎಲ್ಲ ರೀತಿಯ ಮತ, ಪಂಥಗಳ ಜನರು ಅವರ ಸುತ್ತ ಸುತ್ತಿಕೊಂಡರು. ಅವರು ಬಾಳಿದ ಐವತ್ತು ವರ್ಷಗಳ ಜೀವನವು ಮಾನವ ಜನಾಂಗದ ಆಧ್ಯಾತ್ಮಿಕ ಚರಿತ್ರೆಯನ್ನು ಭಟ್ಟಿ ಇಳಿಸಿದಂತೆ ಇತ್ತು ಎಂದು ಹೇಳುತ್ತಾರೆ.

ಶ್ರೀರಾಮಕೃಷ್ಣರಿಗೆ ಆಗಾಗ ಉಂಟಾಗುತ್ತಿದ್ದ ಸಮಾಧಿ ಮತ್ತು ನಿರಂತರವಾಗಿ ಅವರು ಶಿಷ್ಯರಿಗೆ ನೀಡುತ್ತಿದ್ದ ಉಪದೇಶಗಳಿಂದಾಗಿ ಅವರ ಆರೋಗ್ಯವು ಕೆಡುತ್ತಾ ಹೋಯಿತು. ಅವರು ಎಳೆಯ ಮಗುವಿನಂತೆ ಜಗನ್ಮಾತೆಯಲ್ಲಿ ಮೊರೆಯಿಟ್ಟರು: ''ತಾಯಿ! ಏಕೆ ಇಂತಹ ಮನುಷ್ಯರನ್ನು ಇಲ್ಲಿಗೆ ಕರೆತರುವೆ? ಒಂದು ಸೇರು ಹಾಲಿಗೆ ಐದು ಸೇರು ನೀರು ಬೆರೆಸಿದ ಜನರು ಅವರು. ಆ ನೀರನ್ನು ಇಂಗಿಸಲು ಒಲೆಯನ್ನು ಊದಿ ಊದಿ ನನ್ನ ಆರೋಗ್ಯವೂ ಹದಗೆಡುತ್ತಿದೆ. ಅದು ನನ್ನ ಶಕ್ತಿಯನ್ನು ಮೀರಿದ್ದಾಗಿದೆ. ಬೇಕಾದರೆ ನೀನೇ ಆ ಕೆಲಸವನ್ನು ಮಾಡು. ಈ ಶರೀರವು ಒಡೆದ ನಗಾರಿಯಂತಾಗಿದೆ. ಅದನ್ನು ಇನ್ನೂ ದಿನನಿತ್ಯ ಬಾರಿಸುತ್ತಾ ಹೋದರೆ, ಅದು ಇನ್ನೆಷ್ಟು ಕಾಲ ಬದುಕೀತು?''


ಶ್ರೀರಾಮಕೃಷ್ಣರಿಗೆ ಅಷ್ಟೊಂದು ಶ್ರಮವಾದರೂ ದಣಿದು ಬಂದ ಜೀವಿಗಳಿಗೆ ಸಾಂತ್ವನ ನೀಡಲು ಅವರು ಸ್ವಲ್ಪವೂ ಹಿಂಜರಿಯುತ್ತಿರಲಿಲ್ಲ. ಅವರು ಭೇಟಿ ಮಾಡದೆ ಯಾರನ್ನೂ ಹಿಂದಕ್ಕೆ

ಕಳುಹಿಸುತ್ತಿರಲಿಲ್ಲ. ದುಃಖದಲ್ಲಿರುವ ಅಜ್ಞಾನಿಗಳ ಮೇಲಿದ್ದ ಅಪಾರ ಕರುಣೆಯು ಅವರ ದೈಹಿಕ ತೊಂದರೆ, ಕಾಯಿಲೆಗಳನ್ನು ಮರೆಸಿಬಿಡುತ್ತಿತ್ತು. 'ಒಬ್ಬ ಜೀವಿಗೆ ಸಹಾಯವಾಗುವುದಾದರೆ ನಾನು ಮತ್ತೆ ಇಪ್ಪತ್ತು ಸಾವಿರ ದೇಹಗಳನ್ನು ಧರಿಸಲೂ ಸಿದ್ಧ' ವೆಂದು ಅವರು ಹೇಳುತ್ತಿದ್ದರು.

ಜನಸಾಮಾನ್ಯರಿಗೆ ಪವಾಡಗಳನ್ನು ಮಾಡುವವರೆಂದರೆ ಹೆಚ್ಚು ಆಸಕ್ತಿ. ಹಾಗೆ ಪವಾಡ ಮಾಡುವ ಬಾಬಾಗಳ ಹತ್ತಿರ ಜನ ಮುಗಿಬೀಳುತ್ತಾರೆ. ಕೆಲವು ವೇಳೆ ಶಿಷ್ಯರು ದಂತಕತೆಗಳನ್ನು ಕಟ್ಟಿ ಪ್ರಚಾರ ಮಾಡುವುದೂ ಉಂಟು. ಪವಾಡಸದೃಶವಾದ, ಆದರೆ ನಿಜವಾದ ಘಟನೆಯನ್ನು ಇಲ್ಲಿ ಹೇಳಲಾಗಿದೆ. ಶ್ರೀರಾಮಕೃಷ್ಣರ ಸೇವೆ ಮಾಡಿಕೊಂಡಿರಲು 'ಲಾಟು' ಎಂಬ ಬಿಹಾರದ ಒಬ್ಬ ಹುಡುಗ ಬಂದಿದ್ದ. ಆತನಿಗೆ ಓದು-ಬರಹ ಬರುತ್ತಿರಲಿಲ್ಲ. ಅತ್ಯಂತ ಶ್ರದ್ಧೆ ಮತ್ತು ಭಕ್ತಿಯಿಂದ ಶ್ರೀರಾಮಕೃಷ್ಣರ ಸೇವೆ ಮಾಡುತ್ತಿದ್ದ. ಅದೊಂದೇ ಅವನಿಗೆ ಗೊತ್ತು. ಆತನಿಗೆ ಗುರುಕೃಪೆ ದೊರೆಯಿತು. ಮುಂದೆ ಆತ ಸ್ವಾಮಿ ಅದ್ಭುತಾನಂದರೆಂಬ ಶಿಷ್ಯ ರಾದರು, ಧನ್ಯತೆಯನ್ನು ಪಡೆದುಕೊಂಡರು. **'ಹರ ಕಾರುಣ್ಯ ವಿರಲಿಕ್ಕೆ ಬಡವಂ ಬಲ್ಲಿದನಾಗನೆ?'** ಎಂಬುದು ಸೋಮೇಶ್ವರ ಶತಕದ ವಚನ. ಇದು ಅದ್ಭುತವೇ ಸರಿ. ಇದು ಎಲ್ಲಾ ಶ್ರದ್ಧಾವಂತ ಸಾಧಕರಿಗೆ ಭರವಸೆಯನ್ನು ನೀಡುವಂತಹ ವಿಚಾರ.

ಕೆಲವು ಪ್ರಾರಂಭದ ಸಾಧಕರು ಯೋಚಿಸಬಹುದು: 'ನಾವು ಅದೃಷ್ಟವಂತರಲ್ಲ. ನಮಗೆ ಗುರುಕೃಪೆ ದೊರೆಯುವುದೆ?' ಆದರೆ ಹಾಗೆ ನಿರಾಶರಾಗಬೇಕಿಲ್ಲ. ಗುರುಕೃಪೆಯೆಂಬುದು ಸೂರ್ಯನ ಕಿರಣಗಳ ಹಾಗೆ; ಎಲ್ಲಾ ಕಡೆ ಒಂದೇ ಸಮನಾಗಿ ಹರವಿಕೊಂಡಿರು ತ್ತದೆ. ಅದನ್ನು ಪಡೆದುಕೊಳ್ಳಲು ಅರ್ಹತೆಯನ್ನು ಹೊಂದಿರ ಬೇಕು. ವ್ಯಾಕುಲತೆ ಇರಬೇಕು. ಆಗ ಗುರು ಕೃಪೆ ದೊರೆಯುವುದು ಖಂಡಿತ.

ಇಂತಹ ಅವ್ಯಾಜ ಕರುಣೆ, ಅನುಕಂಪಗಳನ್ನು ನಾವು ಶ್ರೀ ರಮಣಮಹರ್ಷಿಗಳಲ್ಲಿಯೂ ಕಾಣುತ್ತೇವೆ. ಅವರ ದರ್ಶನ ಕ್ಕಾಗಿ ಜನರು ಹಗಲು ರಾತ್ರಿ ಬರುತ್ತಿದ್ದರು. ಅವರ ಶಿಷ್ಯರು ಸೇರಿ ಒಂದು ನಿಯಮ ಮಾಡಿದರು. ಮಧ್ಯಾಹ್ನ ೧೨ ಗಂಟೆಯಿಂದ ೨ ಗಂಟೆಯವರೆಗೆ ಮಹರ್ಷಿಗಳು ಯಾರನ್ನೂ ಭೇಟಿಯಾಗುವು ದಿಲ್ಲ. ಅದು ಅವರ ವಿಶ್ರಾಂತಿಯ ಸಮಯ ಎಂದು ತೀರ್ಮಾ ನಿಸಿದರು. ಆದರೆ ಅದನ್ನು ಶ್ರೀ ರಮಣರಿಗೆ ತಿಳಿಸಿರಲಿಲ್ಲ. ಆ ನಿಯಮವನ್ನು ಶ್ರೀರಮಣರು ಒಪ್ಪಲಿಲ್ಲ. ಅವರು ಹೇಳಿದರು: ''ಎಷ್ಟೋ ದೂರದಿಂದ ಕಷ್ಟಪಟ್ಟು ನನ್ನನ್ನು ನೋಡುವುದಕ್ಕಾಗಿ ಜನರು ಬರುತ್ತಾರೆ. ಅವರಿಗೆ ಕಾಯಲು ಸಮಯ ಇರುವುದಿಲ್ಲ. ಆದುದರಿಂದ ಈ ನಿರ್ಬಂಧ ಬೇಡ'' ಎಂದು ಹೇಳಿ ಅವರು ಬಂದು ಹಜಾರದಲ್ಲಿ ಕುಳಿತುಬಿಟ್ಟರು. ಇದು ಸದ್ಗುರುಗಳಲ್ಲಿ ಕಾಣಬರುವ ಅಹೇತುಕ ಪ್ರೀತಿ, ಅನುಕಂಪ.



ಜ್ಞಾನಿಗಳೂ, ಮಹಾತ್ಮರೂ ಆದ ಅನೇಕ ಸಂತರು ಭಾರತದಲ್ಲಿ ಆಗಿ ಹೋಗಿದ್ದಾರೆ. ಅವರು ದೀನ, ದುಃಖಿ ಮನುಷ್ಯರಿಗೆ ಅಲ್ಲದೆ ಪಶು - ಪ್ರಾಣಿಗಳಿಗೂ ಅನುಕಂಪವನ್ನು ತೋರಿಸಿದ್ದಾರೆ. ಎಲ್ಲರಲ್ಲಿಯೂ, ಎಲ್ಲೆಲ್ಲಿಯೂ ಪರಮಾತ್ಮನನ್ನು ಕಾಣುವ ಸಂತರು ಸಕಲ ಜೀವ ಗಳಲ್ಲಿ ದಯೆಯನ್ನು ಹೊಂದಿ ದ್ದರು. ಒಂದು ಉದಾಹರಣೆ ಯನ್ನು ನೋಡೋಣ. ಏಕನಾಥ ಮಹಾರಾಜರು ಉತ್ತರ ಭಾರತದ ತೀರ್ಥಯಾತ್ರೆಗೆ ಹೋಗಿದ್ದರು. ಅಲ್ಲಿಂದ ಪವಿತ್ರ ಗಂಗಾಜಲವನ್ನು ಬಿಂದಿಗೆಯಲ್ಲಿ ತುಂಬಿಕೊಂಡು, ಕಾವಡಿಯಲ್ಲಿ (ಅಡ್ಡೆ) ಹೊತ್ತುಕೊಂಡು ಬರುತ್ತಿದ್ದರು. ಅವರ ಜೊತೆಯಲ್ಲಿ ಅವರ ಶಿಷ್ಯನೂ ಬರುತ್ತಿದ್ದ. ಉತ್ತರ ಭಾರತದಿಂದ ಗಂಗಾಜಲ ವನ್ನು ರಾಮೇಶ್ವರಕ್ಕೆ ಕೊಂಡುಹೋಗಿ, ರಾಮೇಶ್ವರ ಲಿಂಗಕ್ಕೆ ಅಭಿಷೇಕ ಮಾಡುವುದು ಸಂಪ್ರದಾಯ. ಆಗಿನ ಕಾಲದಲ್ಲಿ ರೈಲು, ಬಸ್ಸು ಇರಲಿಲ್ಲ. ಬೇಸಿಗೆಯ ಉರಿಬಿಸಿಲು, ಕೆಳಗೆ ನೆಲವೂ ಕಾಯುತ್ತಿದೆ. ಆಗ ದಾರಿಯಲ್ಲಿ ಒಂದು ಕತ್ತೆಯು ಬಾಯಾರಿ, ನೀರು ಸಿಗದೆ ಏದುಸಿರು ಬಿಡುತ್ತಾ ಒದ್ದಾಡುತ್ತಿತ್ತು. ಅದು ಸಾವಿನ ಅಂಚಿನಲ್ಲಿತ್ತು. ಏಕನಾಥ ಮಹಾರಾಜರು ಅಲ್ಲಿ ನಿಂತರು. ಸ್ವಲ್ಪ ಗಂಗಾಜಲವನ್ನು ಆ ಕತ್ತೆಯ ಬಾಯಿಗೆ ಹಾಕಿದರು. ಆ ಕತ್ತೆ ಕಣ್ಣು ಬಿಟ್ಟು ನೋಡಿ ಬಾಯಿ ತೆರೆಯಿತು. ಏಕನಾಥರು ಅದಕ್ಕೆ ಇನ್ನಷ್ಟು ನೀರನ್ನು ಕುಡಿಸಿದರು. ಅದಕ್ಕೆ ಹೋದ ಜೀವ ಬಂದಂತಾಯಿತು. ಅದಕ್ಕೆ ಹೊಟ್ಟೆ ತುಂಬಾ ನೀರು ಕುಡಿಸಿದರು. ಅದು ಮೇಲಕ್ಕೆದ್ದು ನಡೆಯಲಾರಂಭಿಸಿತು. ಆಗ ಅವರ ಶಿಷ್ಯ ಏಕನಾಥರನ್ನು ಕೇಳಿದ: ''ಸ್ವಾಮಿ, ರಾಮೇಶ್ವರನಿಗಾಗಿ ದೂರದಿಂದ ಹೊತ್ತು ತಂದ ನೀರನ್ನು ಕತ್ತೆಗೆ ಕುಡಿಸಿದಿರಲ್ಲಾ! ರಾಮೇಶ್ವರ ಯಾತ್ರೆಯ ಫಲ ವನ್ನು ಕಳೆದುಕೊಂಡಿರಿ.'' ಅದಕ್ಕೆ ಏಕನಾಥರು ಹೇಳಿದರು: ''ಈ ಮೂಕ ಪ್ರಾಣಿಯ ರೂಪದಲ್ಲಿರುವ ಭಗವಂತನು ಸಂತೋಷ ಪಡುವುದರಿಂದ ಸಾವಿರ ಸಲ ಯಾತ್ರೆ ಮಾಡಿದ ಪುಣ್ಯವು ಲಭಿಸಿ ದಂತಾಗುತ್ತದೆ.'' ಜ್ಞಾನಿಗಳ ಹೃದಯವು ಕರುಣೆಯ ಅಮೃತ ಕಲಶವಾಗಿರುತ್ತದೆ. ಅಂತಹ ಗುರುಗಳು ಲೋಕದ ಜನರಿಗೆ ಜ್ಞಾನ ವನ್ನು ಧಾರೆ ಎರೆಯುವುದರಲ್ಲಿ ಏನೂ ಆಶ್ಚರ್ಯವಿಲ್ಲ. ಅವರು ಉಪದೇಶ ಮಾಡದೆ ಇರಲಾರರು.

ನಿಜಗುಣ ಶಿವಯೋಗಿಗಳು ತಮ್ಮ 'ಪರಮಾನುಭವ ಬೋಧೆ'ಯ ನಾಂದಿ ಪದ್ಯದಲ್ಲಿ ಸದ್ಗುರುವನ್ನು ಕುರಿತು ಹೀಗೆ ಪ್ರಾರ್ಥಿಸುತ್ತಾರೆ: **'ಕರುಣಾರಸದ ಕೋಡಿವರೆವ ಕಟಾಕ್ಷದ, ಪರ ತತ್ತ್ವವರುಪುವ ಆಲಾಪದ, ವರಪುಣ್ಯಮಯ ಶರೀರದ ನಿರಾ ಭಾರಿ ಸದ್ಗುರುವಿರಲೆನ್ನ ಮಾನಸದಲ್ಲಿ.'**

ಶ್ರೀರಾಮಕೃಷ್ಣರು ಭಕ್ತರಿಗೆ ಕೃಪೆತೋರಿದ, ಸಂತರ ಇತಿಹಾಸ ದಲ್ಲಿಯೇ ವಿಶಿಷ್ಟವಾದ, ಅನನ್ಯವಾದ ಒಂದು ಘಟನೆಯು ೧೮೮೬ರ ಜನವರಿ ೧ನೆಯ ತಾರೀಖಿನಂದು ನಡೆಯಿತು. ಆಗ ಶ್ರೀರಾಮಕೃಷ್ಣರು ಕಾಶೀಪುರದ ತೋಟದ ಮನೆಯಲ್ಲಿ ಗಂಟಲಿನ ಕಾಯಿಲೆಗೆ ಚಿಕಿತ್ಸೆ ಪಡೆಯುತ್ತಿದ್ದರು. ಅಂದು ಮಧ್ಯಾಹ್ನ ಮೂರು ಗಂಟೆಯ ಸಮಯ. ಅವರಿಗೆ ಏನೋ ಒಂದು ರೀತಿಯ ಉತ್ಸಾಹ ಬಂದು, ಮಹಡಿಯಿಂದ ಕೆಳಗೆ ಇಳಿದು ಬಂದರು. ಕೆಳಗೆ ಹಜಾರ ದಲ್ಲಿದ್ದವರು ಪ್ರಣಾಮ ಮಾಡಿದರು. ಕೆಲವರು ಅಲ್ಲಲ್ಲಿ ಮರಗಳ ಕೆಳಗೆ ಕುಳಿತಿದ್ದರು. ಪರಮಹಂಸರು ಅಲ್ಲಿದ್ದ ಪ್ರತಿಯೊಬ್ಬರ ತಲೆಯ ಮೇಲೂ ತಮ್ಮ ಕೃಪಾಹಸ್ತವನ್ನಿಟ್ಟು ''ನೀವು ಚೈತನ್ಯವಂತ ರಾಗಿ'' ಎಂದು ಆಶೀರ್ವದಿಸಿದರು. ಪ್ರತಿಯೊಬ್ಬರೂ ಆನಂದ ಪರವಶರಾದರು. ಕೆಲವರು ಕುಣಿದಾಡಿದರು. ಕೆಲವರು ಧ್ಯಾನಸ್ಥ ರಾದರು. ಅಂದು ಅಲ್ಲಿದ್ದ ಭಕ್ತರೇ ಭಾಗ್ಯವಂತರು. ಅವರೆಲ್ಲರೂ ಪುನೀತರಾದರು. ಈಗಲೂ ಪ್ರತಿವರ್ಷ ಜನವರಿಯ ೧ನೆಯ ತಾರೀಖಿನ ದಿನವನ್ನು ಎಲ್ಲ ರಾಮಕೃಷ್ಣಾಶ್ರಮಗಳಲ್ಲಿ '**ಕಲ್ಪತರು ದಿವಸ**' ಎಂದು ಆಚರಿಸಲಾಗುತ್ತದೆ. ಇದು ಶ್ರೀರಾಮಕೃಷ್ಣ ಪರಮಹಂಸರ ಅವ್ಯಾಜ ಕರುಣೆಯ ಉದಾಹರಣೆ.

ಸದ್ಗುರುವಿನ ಕೃಪೆ ಹೇಗೆಂದರೆ, 'ಭಜತಾಂ ಕಲ್ಪವೃಕ್ಷಾಯ, ನಮತಾಂ ಕಾಮಧೇನವೇ.'' ಆದರಿಂದಲೆ ಅವರು ಪೂಜ್ಯರು, ಲೋಕಮಾನ್ಯರು.

ಶ್ರೀ ರಮಣಮಹರ್ಷಿಗಳು ಅನೇಕರಿಗೆ ತಮ್ಮ ಕೃಪಾದೃಷ್ಟಿ ಯಿಂದಲೇ ಜ್ಞಾನವನ್ನು ದಯಪಾಲಿಸಿದರು. ಪಾಲ್ ಬ್ರಂಟನ್ ಎಂಬಾತನು ತನ್ನ ಪುಸ್ತಕ 'A Search in Secret India' ದಲ್ಲಿ ತನಗಾದ ಅನುಭವವನ್ನು ಹೇಳಿಕೊಂಡಿದ್ದಾನೆ.[೧] ಬೆಳಗೆರೆ ಕೃಷ್ಣ ಶಾಸ್ತ್ರಿಗಳು ಶ್ರೀರಮಣ ಮಹರ್ಷಿಗಳ ದರ್ಶನಕ್ಕೆ ಹೋಗಿದ್ದರು. ಅವರು ಸ್ವಲ್ಪದೂರದಲ್ಲಿ ನಿಂತಿದ್ದರು. ಏನೂ ಮಾತನಾಡಲಿಲ್ಲ. ಶ್ರೀ ರಮಣರ ದಿವ್ಯಚಕ್ಷುಗಳು ಕೃಷ್ಣಶಾಸ್ತ್ರಿಗಳನ್ನು ಮುಟ್ಟಿದವು. ಅವರ ಹೃದಯವನ್ನು ತಟ್ಟಿದವು. ಅವರಿಗೆ ಅನಿರ್ವಚನೀಯ ಆನಂದವುಂಟಾಯಿತು.[೨] ಇನ್ನೂ ಅನೇಕರಿಗೆ ಈ ರೀತಿಯ ಅನು ಭವವಾಗಿರುವುದರ ಉಲ್ಲೇಖವಿದೆ. ಶ್ರೀರಾಮಕೃಷ್ಣರೂ ಕೇವಲ ಸಂಕಲ್ಪದಿಂದ, ಸ್ಪರ್ಶದಿಂದ ಆಧ್ಯಾತ್ಮಿಕ ಜಾಗೃತಿ ಮಾಡುವಂತಹ ಅಪಾರ ಶಕ್ತಿಯನ್ನೂ, ಕರುಣೆಯನ್ನೂ ಹೊಂದಿದ್ದರು.

ತಮಗೆ ಸಮಾಧಿಯ ಆನಂದವನ್ನು ಮಾಡಿಸಲು ಶ್ರೀರಾಮ ಕೃಷ್ಣರಲ್ಲಿ ಅರಿಕೆ ಮಾಡಿಕೊಳ್ಳಬೇಕೆಂದು ಶ್ರೀಮಾತೆ ಶಾರದಾದೇವಿ ಯವರು ಒಂದು ಸಲ ಯೋಗಿನ್ ಮಾ-ಳನ್ನು ಕೇಳಿದರು. ಯೋಗಿನ್ ಮಾ ಶ್ರೀರಾಮಕೃಷ್ಣರನ್ನು ಕೇಳಿದಳು: ''ಶ್ರೀಮಾತೆ ಯವರಿಗೆ ಸಮಾಧಿಯ ಅನುಭವವನ್ನು ಕರುಣಿಸಿ.'' ಶ್ರೀರಾಮ ಕೃಷ್ಣರು ಏನೂ ಮಾತನಾಡದೆ ಗಂಭೀರವಾಗಿ ಕುಳಿತುಬಿಟ್ಟರು. ಯೋಗೀನ್ ಮಾ ಸುಮ್ಮನೆ ಹಿಂದಿರುಗಿ ಬಂದರು. ಆಗ ಶ್ರೀ ಶಾರದಾದೇವಿಯವರು ಪೂಜೆಯಲ್ಲಿ ನಿರತರಾಗಿದ್ದರು. ಒಮ್ಮೊಮ್ಮೆ ಅಳುತ್ತಲೂ, ಒಮ್ಮೊಮ್ಮೆ ನಗುತ್ತಲೂ ಇದ್ದರು. ಅವರ ಕೆನ್ನೆಯ ಮೇಲೆ ಕಣ್ಣೀರು ಹರಿಯುತ್ತಿತ್ತು. ಆಮೇಲೆ ಅವರು ಧ್ಯಾನದಲ್ಲಿ ಮಗ್ನರಾದರು. ಅನಂತರ ಯೋಗಿನ್ ಮಾ ಕೇಳಿದರು: ''ನಿಮಗೆ ಸಮಾಧಿಯ ಅನುಭವವಾಗಿಲ್ಲವೆಂದು ನೀವೇಕೆ ಹೇಳಿದಿರಿ?'' ಶ್ರೀಶಾರದಾದೇವಿಯವರು ನಕ್ಕು ಸುಮ್ಮನಾದರು.

ಸಾಮಾನ್ಯ ಮನುಷ್ಯರಿಗೂ, ಸಂಶಯಾತ್ಮರಿಗೂ ಇದು ಅರ್ಥ ವಾಗುವುದು ಕಷ್ಟ. ಆದರೆ ಯಾರು ಶ್ರದ್ಧೆ ಮತ್ತು ವಿಶ್ವಾಸದಿಂದ ಸದ್ಗುರುವಿನ ಬಳಿ ಸಾರಿ ಅವರ ಕೃಪೆಯನ್ನು ಅನುಭವಿಸುವರೋ ಅವರೇ ಧನ್ಯರು. ಅಂತಹ ಸದ್ಗುರುಗಳ ಮತ್ತು ಶಿಷ್ಯರ ಉದಾ ಹರಣೆಗಳು ಆಧ್ಯಾತ್ಮಿಕ ಪರಂಪರೆಯಲ್ಲಿ ಹೇರಳವಾಗಿ ದೊರೆಯು ತ್ತವೆ. ಅವು ಸಾಧಕರಿಗೆ ಸ್ಫೂರ್ತಿಯನ್ನು ನೀಡಿ, ನಿಷ್ಠೆಯನ್ನು ಹೆಚ್ಚು ಮಾಡುತ್ತವೆ.

ಶ್ರದ್ಧೆಯುಳ್ಳ ಸಾವಿರಾರು ಭಕ್ತರು ಆ ಸದ್ಗುರುಗಳ ದಿವ್ಯ ಸನ್ನಿಧಿಯನ್ನು ಈಗಲೂ ಅನುಭವಿಸುತ್ತಿದ್ದಾರೆ, ಮತ್ತು ತಮ್ಮ ಜೀವನವನ್ನು ಸಾರ್ಥಕಗೊಳಿಸಿಕೊಳ್ಳುತ್ತಿದ್ದಾರೆ. ಅಂತಹ ಸದ್ಗುರು ಗಳ ಕೃಪೆಯು ಸದಾ ನಮ್ಮ ಮೇಲಿರಲಿ. ನಮ್ಮನ್ನು ಗುರಿಯೆಡೆಗೆ ಕೈ ಹಿಡಿದು ನಡೆಸುತ್ತಿರಲಿ. ಈ ಲೇಖನವನ್ನು ಒಂದು ಸುಂದರ ಗೀತೆಯ ಸಾಲುಗಳಿಂದ ಮುಗಿಸುತ್ತೇನೆ:

ತವ ಕೃಪೆ ಬೆಳಗಲಿ, ಭವಭ್ರಮೆ ಕಳೆಯಲಿ
ಶಿವೆ ಶ್ರೀ ಶಾರದೆ ತವಕದಿ ಮೊರೆಯುವೆ ।
ನಿನ್ನಡಿದಾವರೆ ಎನ್ನಯ ಆಸರೆ
ಮನ್ನಿಸು ದಾಸನ ಬಿನ್ನಹ ಮಾತೆ ॥

''ನೀವು ಪ್ರಾರ್ಥಿಸುವಾಗ ನಿಮ್ಮ ಕೋಣೆಯೊಳಗೆ ಹೋಗಿ ಬಾಗಿಲು ಮುಚ್ಚಿಕೊಂಡು ಭಗವಂತನಿಗೆ ರಹಸ್ಯ ವಾಗಿ ಪ್ರಾರ್ಥನೆ ಸಲ್ಲಿಸಿ. ರಹಸ್ಯದಲ್ಲಿ ನಿಮ್ಮನ್ನು ನೋಡುವ ಭಗವಂತನು ನಿಮಗೆ ಮುಚ್ಚುಮರೆಯಿಲ್ಲದೆ ಪ್ರತಿಫಲ ವನ್ನು ಕರುಣಿಸುತ್ತಾನೆ.

''ಏನು ತಿನ್ನಲಿ, ಏನು ಕುಡಿಯಲಿ, ಏನು ಉಡಲಿ ಎಂದು ಚಿಂತಿಸದಿರಿ. ನಿಮಗೆ ಇವೆಲ್ಲ ಅಗತ್ಯವೆನ್ನುವುದು ಭಗವಂತನಿಗೆ ತಿಳಿದಿದೆ. ಬದಲಾಗಿ, ಭಗವಂತನ ರಾಜ್ಯಕ್ಕೆ, ಆತನ ಅಪೇಕ್ಷೆಗೆ ಮೊದಲ ಸ್ಥಾನವನ್ನು ಕೊಡಿ. ಆತ ಈ ಎಲ್ಲ ಇತರ ವಸ್ತುಗಳನ್ನು ತಾನೇ ನಿಮಗೆ ಒದಗಿಸುತ್ತಾನೆ.''

— ಯೇಸು ಕ್ರಿಸ್ತ

೧ ಪಾಲ್ ಬ್ರಂಟನ್‌ರಿಗೂ ಮಹರ್ಷಿಗಳಿಗೂ ಸಂಭಾಷಣೆ ನಡೆಯಿತು. ಅದರ ದಾಖಲೆ ಆ ಪುಸ್ತಕದಲ್ಲಿದೆ. *(ಕನ್ನಡದಲ್ಲಿ ಈ ಗ್ರಂಥ '**ನಿಗೂಢ ಭಾರತದಲ್ಲೊಂದು ಹುಡುಕಾಟ**' ಎಂದು ಪ್ರಕಟವಾಗಿದೆ.)*

೨ ಕೃಷ್ಣಶಾಸ್ತ್ರಿಗಳು ತಮ್ಮ ಅನುಭವವನ್ನು ಈ ಲೇಖಕನೊಡನೆ ಹಂಚಿಕೊಂಡಿದ್ದರು.

ಸ್ವಾಮಿ ಶಾರದಾನಂದರ ಸ್ಮೃತಿಗಳು

ಸಂಗ್ರಹ: **ಸ್ವರ್ಣಗೌರಿ**

ಶ್ರೀರಾಮಕೃಷ್ಣರ ನೇರ ಶಿಷ್ಯರಲ್ಲಿ ಒಬ್ಬರೂ, ತಮ್ಮ ಗುರುಗಳ ಅತ್ಯದ್ಭುತ ಜೀವನಚರಿತ್ರೆಯಾದ '**ಶ್ರೀರಾಮಕೃಷ್ಣ ಲೀಲಾಪ್ರಸಂಗ**'ದ ಕರ್ತೃಗಳೂ ಆದ ಸ್ವಾಮಿ ಶಾರದಾನಂದರ (೧೮೬೫–೧೯೨೭) ಜಯಂತಿಯನ್ನು ಈ ವರ್ಷ ಡಿಸೆಂಬರ್ ೨೩ ರಂದು ಆಚರಿಸಲಾಗುತ್ತಿದೆ. ಈ ಸಂದರ್ಭದಲ್ಲಿ ಅವರ ಜೀವನದ ಕೆಲವು ಸ್ಮೃತಿಗಳನ್ನು ಇಲ್ಲಿ ನೀಡುತ್ತಿದ್ದೇವೆ. ಸಂಗ್ರಹಕಾರರು ಮೈಸೂರು ಆಶ್ರಮದ ಭಕ್ತರು.

ಕ್ರಿಕೆಟ್ ಪಂದ್ಯ ಅಥವಾ ಸ್ವರ್ಗ ದೊರೆಯುವುದೆ?

ಸ್ವಾಮಿ ವಿವೇಕಾನಂದರ ಪ್ರವಚನಗಳನ್ನು ಶೀಘ್ರಲಿಪಿಯಲ್ಲಿ ಬರೆದುಕೊಳ್ಳುತ್ತಿದ್ದ ಶೀಘ್ರಲಿಪಿಕಾರ ಜೆ.ಜೆ.ಗುಡ್‌ವಿನ್ ಒಮ್ಮೆ ಸ್ವಾಮಿ ಶಾರದಾನಂದರನ್ನು ಕ್ರಿಕೆಟ್ ಪಂದ್ಯ ವೀಕ್ಷಿಸಲು ಕರೆದೊಯ್ದನು. ಸ್ವಾಮಿ ವಿವೇಕಾನಂದರ ತಮ್ಮ ಮಹೇಂದ್ರನಾಥ ದತ್ತನೂ ಅವರೊಡನಿದ್ದನು. ಗುಡ್‌ವಿನ್ ಬಹಳ ಉತ್ಸುಕತೆಯಿಂದ ಕ್ರಿಕೆಟ್ ಪಂದ್ಯವನ್ನು ವೀಕ್ಷಿಸಿ ಆನಂದಿಸಿದನು. ಆದರೆ ಶಾರದಾನಂದರಿಗೆ ಅದು ಸಂತೋಷ ನೀಡಲಿಲ್ಲ. ಹಿಂದಿರುಗುತ್ತಿರುವಾಗ ಗಂಭೀರ ಭಾವದಲ್ಲಿದ್ದ ಸ್ವಾಮಿ ಶಾರದಾನಂದರು, ''ಕ್ರಿಕೆಟ್ ಪಂದ್ಯ ವೀಕ್ಷಿಸುವುದರಿಂದ ನನಗೇನು ಸ್ವರ್ಗ ಸಿಗುತ್ತದೆಯೆ?'' ಎಂದು ಪ್ರಶ್ನಿಸಿದರು. ಮಹೇಂದ್ರನಾಥನು ಕುಚೋದ್ಯದಿಂದ, ''ಸ್ವರ್ಗ ಬೇಕಾದರೆ ಬಸ್‌ನ ಛಾವಣಿಯ ಮೇಲೆ ಕುಳಿತುಕೊಳ್ಳಬೇಕು'' ಎಂದನು (ಅದು ಎರಡಂತಸ್ತಿನ ಬಸ್ ಆಗಿತ್ತು). ಗುಡ್‌ವಿನ್ ಸಹ ಇವರ ಸಂಭಾಷಣೆ ಕೇಳಿ ನಗತೊಡಗಿದನು. ಬಸ್‌ನೊಳಗೆ ಕುಳಿತರೆ ಧೂಮಪಾನ ಮಾಡಲಾಗದೆಂದು ಆ ಅಭ್ಯಾಸವಿರುವವರು ಮೇಲ್ಛಾವಣಿಯಲ್ಲಿ ಕುಳಿತು ಕೊಳ್ಳುವ ಪದ್ಧತಿಯಿತ್ತು ಅಲ್ಲಿ.

ಸ್ವಾಮಿಗಳ ಮನಸ್ಸನ್ನು ಭಗವಂತನೇ ಹೇಗೆ ಸಂಪೂರ್ಣವಾಗಿ ಆವರಿಸಿದ್ದನೆಂದರೆ, ಅಲ್ಲಿ ಪ್ರಪಂಚದ ಉಳಿದ ಯಾವುದಕ್ಕೂ ಸ್ಥಳವೇ ಇರಲಿಲ್ಲವೆಂಬುದು ಈ ಘಟನೆಯಿಂದ ತಿಳಿಯುತ್ತದೆ.

('Saradananda – The Bliss of Knowledge', ಪ್ರವ್ರಾಜಿಕಾ ಪ್ರಬುದ್ಧಪ್ರಾಣಾ, ಶ್ರೀ ಶಾರದಾ ಮಠದ ಪ್ರಕಟಣೆ)

ಭಗವಂತನಿದ್ದಾನೆಯೆ?

ಸ್ವಾಮಿ ಶಾರದಾನಂದರು ಡಿಸೆಂಬರ್ ೧೫, ೧೮೯೬ ರಂದು (ಶ್ರೀರಾಮಕೃಷ್ಣರ ನೇರ ಶಿಷ್ಯರು ಹಾಗೂ ಶ್ರೀರಾಮಕೃಷ್ಣ ಮಹಾಸಂಘದ ಪ್ರಥಮ ಕಾರ್ಯದರ್ಶಿ) ಬಾಸ್ಟನ್ ನಗರದ ಮೆಟಾಫಿಸಿಕಲ್ ಕ್ಲಬ್‌ನಲ್ಲಿ 'ಸಂದೇಹದಿಂದ ನಂಬಿಕೆಯೆಡೆಗೆ' ಎಂಬ ವಿಚಾರವಾಗಿ ಪ್ರವಚನ ನೀಡಿದರು. ಪ್ರವಚನದ ನಂತರ ಇಬ್ಬರು ವಿಜ್ಞಾನಿಗಳು ಅವರ ಬಳಿಗೆ ಬಂದರು. ಅವರಲ್ಲಿ ಒಬ್ಬಾತನು ಸ್ವಾಮಿ ಶಾರದಾನಂದರನ್ನು ಕುರಿತು, ''ಭಗವಂತನಿದ್ದಾನೆಯೆ?'' ಎಂದು ಪ್ರಶ್ನಿಸಿದನು. ಸ್ವಾಮಿಗಳು ದೃಢವಾದ ಸ್ವರದಿಂದ, ''ಇದ್ದಾನೆ'' ಎಂದು ಉತ್ತರಿಸಿದರು.

ವಿಜ್ಞಾನಿ: ಇದ್ದರೆ ಅದಕ್ಕೆ ಪ್ರಮಾಣವೇನು?



ಸ್ವಾಮೀಜಿ: ಋಷಿವಾಕ್ಯ. ಅವರುಗಳು ತಾವೇ ಸ್ವತಃ ಭಗವಂತನ ಇರುವಿಕೆಯನ್ನು ಅನುಭವಿಸಿದ ನಂತರವೇ 'ದೇವರಿದ್ದಾನೆ' ಎಂದು ಘೋಷಿಸಿದ್ದಾರೆ.

ವಿಜ್ಞಾನಿ: ಅವರು ತಪ್ಪು ಮಾಡಿರುವ ಸಾಧ್ಯತೆಗಳಿರಬಹುದಲ್ಲವೆ?

ಸ್ವಾಮೀಜಿ: ಎಲ್ಲ ಋಷಿಗಳೂ ತಪ್ಪು ಮಾಡಲು ಸಾಧ್ಯವೇನು? ಒಂದು ವೇಳೆ ನೀನು ಇಂಗ್ಲೆಂಡ್ ನೋಡೇ ಇಲ್ಲವೆಂದಿಟ್ಟುಕೊಳ್ಳೋಣ. ಯಾರಿಗೆ ಇಂಗ್ಲೆಂಡ್ ಪರಿಚಯವಿದೆಯೋ ಅವರಿಂದ ನೀನು ಅದರ ಬಗ್ಗೆ ತಿಳಿದುಕೊಳ್ಳಬೇಕು. ಹಾಗೆಯೇ ಭಗವಂತನ ದರ್ಶನ ಪಡೆದವರ ವಾಕ್ಯಗಳಲ್ಲಿ ನೀನು ವಿಶ್ವಾಸವಿಡಬೇಕು. ಶ್ರೀರಾಮಕೃಷ್ಣರು, 'ನಾನು ಭಗವಂತನನ್ನು ನೋಡಿದ್ದೇನೆ, ನೀವು ಸಹ ಆಧ್ಯಾತ್ಮಿಕ ಸಾಧನೆ ಹಾಗೂ ವ್ಯಾಕುಲತೆಗಳ ಮೂಲಕ ಆತನ ದರ್ಶನ ಪಡೆಯಬಹುದು' ಎಂದರು. ಒಬ್ಬಾತನ ಹಾದಿಯಲ್ಲಿರುವ ಅಡಚಣೆ ಸಂದೇಹವೇ !

ಈ ಮಾತುಗಳನ್ನು ಆಲಿಸಿದ ಆ ವಿಜ್ಞಾನಿಗಳ ಮನದ ಸಂದೇಹದ ತೆರೆ ಮಾಯವಾಗಿ, ಭಗವಂತನ ಇರುವಿಕೆಯಲ್ಲಿ ವಿಶ್ವಾಸ

ವುಂಟಾಯಿತು. ಹೀಗೆ ಭಗವಂತನ ದರ್ಶನವಾದವರು ತಮ್ಮ ವಾಕ್‌ಶಕ್ತಿಯಿಂದಲೇ ಮತ್ತೊಬ್ಬರಿಗೆ ಆಧ್ಯಾತ್ಮಿಕತೆಯನ್ನು ಧಾರೆ ಯೆರೆಯಬಲ್ಲವರಾಗಿದ್ದರು. *(ಅಲ್ಲೇ, ಪು.೯೫-೯೬)*

ಸಮಚಿತ್ತರು

ಶ್ರೀರಾಮಕೃಷ್ಣರ ಹದಿನಾರು ಜನ ನೇರ ಶಿಷ್ಯರಲ್ಲಿ ಸ್ವಾಮಿ ಶಾರದಾನಂದರು ಸಮಚಿತ್ತರೆಂದು ಜನಪ್ರಿಯರಾಗಿದ್ದರು. ಎಂತಹ ಸಮಯದಲ್ಲೂ ತಮ್ಮ ಮನಸ್ಸಿನ ಪ್ರಶಾಂತತೆಯನ್ನು ಕಳೆದು ಕೊಳ್ಳುತ್ತಿರಲಿಲ್ಲ. ಸ್ವಾಮಿ ವಿವೇಕಾನಂದರೇ ಅವರನ್ನು ಈಲ್ -ಮೀನಿಗೆ (ಒಂದು ಜಾತಿಯ ಮೀನು. ಅದರ ರಕ್ತವೆಂದೂ ಬಿಸಿ ಯಾಗದು) ಹೋಲಿಸಿ ಹಾಸ್ಯಮಾಡುತ್ತಿದ್ದರು. ಅವರು ಕೋಪ ಗೊಂಡದ್ದನ್ನು ಯಾರೂ ಎಂದೂ ನೋಡಿರಲಿಲ್ಲ.

ಸ್ವಾಮಿ ವಿವೇಕಾನಂದರ ಆಣತಿಯ ಮೇರೆಗೆ ೨೯ ವಯಸ್ಸಿನ ಸ್ಫುರದ್ರೂಪಿ ಯುವಕ ಸ್ವಾಮಿ ಶಾರದಾನಂದರು ಪ್ರಥಮ ಬಾರಿ ವೇದಾಂತ ಪ್ರಚಾರ ಕಾರ್ಯದಲ್ಲಿ ಸಹಾಯಹಸ್ತ ನೀಡಲು BISN REWA ಎಂಬ ಹಡಗಿನಲ್ಲಿ ಲಂಡನ್‌ಗೆ ಹೊರಟರು. ಹಡಗು ಭೂಮಧ್ಯ ಸಮುದ್ರಕ್ಕೆ (ಮೆಡಿಟರೇನಿಯನ್ ಸಮುದ್ರ) ಬಂದಾಗ ದೊಡ್ಡ ಬಿರುಗಾಳಿಯೆದ್ದು, ಇನ್ನೇನು ಹಡಗು ಮುಳು ಗಲು ಪ್ರಾರಂಭವಾಯಿತು. ಪ್ರಯಾಣಿಕರೆಲ್ಲಾ ಪ್ರಾಣಭಯ ದಿಂದ ಚೀತ್ಕರಿಸುತ್ತಾ ಆಚೀಚೆ ಓಡತೊಡಗಿದರು; ಕೆಲವರು ಗಡ ಗಡನೆ ನಡುಗಲಾರಂಭಿಸಿದರು. ಒಂದೇ ಕ್ಷಣದಲ್ಲಿ ದೃಶ್ಯವೇ ಬದಲಾಗಿ ಹೋಯಿತು. ಮೃತ್ಯು ತಾಂಡವವಾಡುತ್ತಿರುವ ಭೀಕರ ದೃಶ್ಯ; ಎಂತಹ ಗಂಡೆದೆಯವರಿಗೂ ಝುಲ್ಲೆನಿಸುತ್ತಿರುವಂತೆ ಇತ್ತು. ಅಂತಹ ಸಮಯದಲ್ಲೂ ಸ್ವಾಮಿ ಶಾರದಾನಂದರು ಮಾತ್ರ ದಿಕ್ಸೂಚಿಯಂತೆ ಮನಸ್ಸಿನ ಸಮತ್ವವನ್ನು ಕಳೆದುಕೊಳ್ಳದೆ ನಿಶ್ಚಲ ರಾಗಿ ಕುಳಿತಿದ್ದರು! ಸ್ವಲ್ಪ ಕಾಲದ ನಂತರ ಆಶ್ಚರ್ಯವೆಂಬಂತೆ ಬಿರುಗಾಳಿ ಇಳಿಮುಖವಾಗತೊಡಗಿತು. ಸ್ವಾಮೀಜಿ ಹಿಂದೆ ಹೇಗಿ ದ್ದರೋ, ಈಗಲೂ ಹಾಗೆಯೇ ಕುಳಿತಿದ್ದರು. ಅವರು ಕೇವಲ ಅನುದ್ವೇಗಿಗಳಲ್ಲ; ಜಿತೇಂದ್ರಿಯರೂ ಆಗಿದ್ದರು.

ಮುಂದೊಮ್ಮೆ ಅವರ ಸೇವಕರಾರೋ ಆ ಘಟನೆ ಕುರಿತು ಪ್ರಶ್ನಿಸಿದಾಗ ಸ್ವಾಮೀಜಿ, ''ದಕ್ಷಿಣೇಶ್ವರದಲ್ಲಿ ಶ್ರೀರಾಮಕೃಷ್ಣರ ಸಂಗದಲ್ಲಿ ನಾವೇನು ಸುಮ್ಮನೆ ಕಾಲಹರಣ ಮಾಡಿದೆವೆಂದು ಕೊಂಡೆಯೇನು?'' ಎಂದು ಉತ್ತರಿಸಿದರು! *(ಅಲ್ಲೇ, ಪು.೧೬-೧೭)*

ಇಂತಹ ಸಾಧುಗಳು ಪ್ರಥಮ ಬಾರಿ ಪಾಶ್ಚಾತ್ಯ ದೇಶದಲ್ಲಿ ಪ್ರವಚನ ನೀಡಲು ಹೋದಾಗ ಹೆದರಿ ಕಂಗಾಲಾದರು. ಸಮತ್ವ ವನ್ನು ಕಳೆದುಕೊಂಡ ಮನಸ್ಸು ಪ್ರಕ್ಷುಬ್ಧವಾಯಿತು. ಇದರಿಂದಾಗಿ ಒಂದೂವರೆ ವರ್ಷಗಳ ಹಿಂದೆ ಅನುಭವಿಸಿದ ಮಲೇರಿಯಾ ಜ್ವರ ಮತ್ತೆ ಮರುಕಳಿಸಿತು. ಅಂತಹ ಜ್ವರದಲ್ಲೂ ಪ್ರವಚನದ ಭಯ ದಿಂದ ಕುಗ್ಗಿ, ''ಅಯ್ಯೋ! ನರೇಂದ್ರ ಪ್ರವಚನ ನೀಡದಿದ್ದರೆ ನನ್ನನ್ನು ಸುಮ್ಮನೆ ಬಿಡುವುದಿಲ್ಲ'' ಎಂದು ಬಡಬಡಿಸುತ್ತಿದ್ದು ದನ್ನು ಸ್ವಾಮಿ ವಿವೇಕಾನಂದರ ತಮ್ಮ ಮಹೇಂದ್ರನಾಥನು ಕೇಳಿಸಿ ಕೊಂಡನು. ಆತನೂ ಸಹ ಜ್ವರದಿಂದ ನರಳುತ್ತಿದ್ದನು. ಸ್ವಾಮಿ ಶಾರದಾನಂದರು,''ಮಾನ್ಯರೇ ಮತ್ತು ಮಾನಿನಿಯರೇ'' ಎಂದು ತಾವು ಹೇಳಬೇಕಾಗಿದ್ದ ವಿಷಯ ಗಳನ್ನು ಮಹೇಂದ್ರನಿಗೆ ಒಪ್ಪಿ ಸುತ್ತಾ ಪುನಃ ಪುನಃ ಅಭ್ಯಸಿಸುತ್ತಿದ್ದರು. ಸಂಜೆ ಸುಮಾರು ಐದು ಗಂಟೆಯ ವೇಳೆಗೆ ಬಂದ ಸ್ವಾಮಿ ವಿವೇಕಾನಂದರು, ಪರಿಸ್ಥಿತಿ ನೋಡಿ ಹಾಸ್ಯ ಮಾಡುತ್ತಾ ಬೈಗುಳಗಳ ಸುರಿಮಳೆ ಆರಂಭಿಸಿ ದರು. ಈಗ ಶಾರದಾನಂದರು ಸ್ವಲ್ಪ ಶಾಂತರಾದಂತೆ ಕಂಡಿತು.

ಮಾರನೆಯ ದಿನ ಪುನಃ ಇವರೀರ್ವರನ್ನು ಕಾಣಲು ಬಂದ ಸ್ವಾಮೀಜಿ, ಪರಿಸ್ಥಿತಿ ಸುಧಾರಿಸದಿರುವುದನ್ನು ಕಂಡು, ''ಪ್ರವ ಚನಕ್ಕೆ ಜ್ವರದ ನೆಪ ಹೂಡಿದ್ದೀಯಾ'' ಎಂದು ಲೇವಡಿ ಮಾಡುತ್ತಾ ಪಕ್ಕದ ಕೋಣೆಗೆ ಹೋಗಿ ಗಂಭೀರ ಭಾವದಲ್ಲಿ ಕುಳಿತರು. ಹತ್ತು, ಹದಿನೈದು ನಿಮಿಷಗಳಲ್ಲಿ ತಮ್ಮ ಬಲವಾದ ಇಚ್ಛಾಶಕ್ತಿಯಿಂದ ಇಬ್ಬರ ಕಾಯಿಲೆಯನ್ನೂ ಗುಣಪಡಿಸಿಬಿಟ್ಟರು! ಕೊಠಡಿಗೆ ಬಂದ ಸ್ವಾಮೀಜಿಯವರ ಈ ಅದ್ಭುತ ಶಕ್ತಿಯನ್ನು ಕಂಡು ಬೆರಗಾದ ಸ್ವಾಮಿ ಶಾರದಾನಂದರು ಅವರ ಎರಡೂ ಕಾಲುಗಳನ್ನು ಗಟ್ಟಿ ಯಾಗಿ ಹಿಡಿದುಕೊಂಡು ಮಕ್ಕಳಂತೆ ಅಳುತ್ತಾ, ''ನನ್ನನ್ನು ಈಗ ಗುಣಪಡಿಸಿದ್ದೀಯೆ, ಹಾಗೆಯೇ ನನ್ನ ಮನಸ್ಸನ್ನು ಊರ್ಧ್ವಮುಖ ಗೊಳಿಸು'' ಎಂದು ಪ್ರಾರ್ಥಿಸಿದರು, ದೀನರಾಗಿ. ಸ್ವಾಮೀಜಿ ನಗುತ್ತಾ, ''ಎದ್ದೇಳು obstinate wretch! (ಹಟಮಾರಿ ನೀಚ!) ಪ್ರವಚನದಿಂದ ತಪ್ಪಿಸಿಕೊಳ್ಳಲು ಜ್ವರ ತರಿಸಿಕೊಂಡೆ ಯೇನು? ನೀನು ಪ್ರವಚನ ನೀಡಲೇಬೇಕು, ಇಲ್ಲದಿದ್ದರೆ ನಿನಗೆ ಚೆನ್ನಾಗಿ ಬಾರಿಸುತ್ತೇನೆ, ನಾಲ್ಕು ಅಂತಸ್ತಿನ ಈ ಕಿಟಕಿಯಿಂದ ನಿನ್ನನ್ನು ಒಗೆಯುತ್ತೇನೆ. ಇಲ್ಲವಾದರೆ ಅನಾಥಾಲಯದಲ್ಲಿ ಬಿಸಾಡಿ ಬಿಡುತ್ತೇನೆ! ನಿನ್ನನ್ನು ಇಲ್ಲಿಗೆ ಕರೆತರಲು ಎಷ್ಟು ಹಣವನ್ನು ವ್ಯಯ ಮಾಡಿರುವೆ ಗೊತ್ತಿದೆಯೆ?'' ಎಂದು ಹುಸಿಕೋಪ ಪ್ರದರ್ಶಿಸುತ್ತಾ ಗುಡುಗಿದರು. ಶಾರದಾನಂದರು ಸಹ ಪ್ರತಿಯಾಗಿ ನಗುತ್ತಾ, ''ನಿನ್ನಿಚ್ಛೆ ಬಂದಂತೆ ನನ್ನನ್ನು ಹೊಡಿ, ಬಡಿ, ಬಿಸಾಡು. ಆದರೆ ನನ್ನ ಮನಸ್ಸನ್ನು ಸರಿಪಡಿಸದ ಹೊರತು ನಿನಗೆ ಏಳಲೂ ಬಿಡುವು ದಿಲ್ಲ'' ಎಂದು ತಮ್ಮ ಹಿಡಿತವನ್ನು ಮತ್ತಷ್ಟು ಬಿಗಿಗೊಳಿಸಿದರು. ತಮ್ಮ ಮೇಲೆ ಆ ಸಹೋದರನಿಗಿದ್ದ ಪ್ರೀತಿಯನ್ನು ಕಂಡು ಕರಗಿದ ಸ್ವಾಮೀಜಿ ಸಂತುಷ್ಟರಾಗಿ ಮೃದುಧ್ವನಿಯಲ್ಲಿ , '''ಆಯಿತಾ ಯಿತು, ಏಳು, ಏದ್ದೇಳು'' ಎನ್ನುತ್ತಾ ಹೊರಟರು. ಸ್ವಾಮೀಜಿ ಹೋದ ನಂತರ ಶಾರದಾನಂದರು ಮಹೇಂದ್ರನ ಬಳಿ, ''ಓಹ್! ನನಗೆ ತಿಳಿದಿದ್ದ ಆ ಹಳೆಯ ನರೇಂದ್ರ ಇನ್ನಿಲ್ಲ. ಕೇವಲ ಇಚ್ಛಾಬಲ ದಿಂದ ಅನೇಕ ವರ್ಷಗಳಿಂದ ನರಳುತ್ತಿದ್ದ ಈ ಕಾಯಿಲೆಯನ್ನು ಗುಣಪಡಿಸಿಬಿಟ್ಟ. ಆತನೊಡನೆ ಮಾತನಾಡುವಾಗ ಇನ್ನು ನಾನು ಎಚ್ಚರಿಕೆಯಿಂದ ಇರಬೇಕು'' ಎನ್ನುವಾಗ ಅವರ ಹೃದಯದಲ್ಲಿ ನರೇಂದ್ರನ ಮೇಲಿದ್ದ ಭಯಭಕ್ತಿಗಳು ಇಮ್ಮಡಿಸಿದವು!

(ಅಲ್ಲೇ, ಪು.೨೮-೨೯) ❖

SRI RAMAKRISHNA ADVAITA ASHRAMA

Ashrama Road, Kalady -683574, Dist. Ernakulam, Kerala

Email: kalady@rkmm.org Ph: 0484-2462345/2461071

ಭಕ್ತರು ಹಾಗೂ ಹಿತೈಷಿಗಳಲ್ಲಿ ಒಂದು ವಿಜ್ಞಾಪನೆ



ಕಾಲಡಿಯು ಶಿವನ ಅವತಾರವಾದ, ಮಹಾನ್ ಆಧ್ಯಾತ್ಮಿಕ ವ್ಯಕ್ತಿಯೂ, ಅದ್ವೈತ ವೇದಾಂತದ ಸಂಸ್ಥಾಪಕರೂ ಆದ ಆದಿ ಶಂಕರಾಚಾರ್ಯರ ಜನ್ಮಸ್ಥಳವಾಗಿದೆ. ಆಶ್ರಮವು ಪೂರ್ಣಾನದಿಯ ದಡದಲ್ಲಿದೆ. 1936ರಲ್ಲಿ ಆರಂಭವಾದ ಈ ಆಶ್ರಮವು 1941ರಲ್ಲಿ ಬೇಲೂರು ಮಠದ ರಾಮಕೃಷ್ಣ ಮಠಕ್ಕೆ ಸೇರ್ಪಡೆಗೊಂಡಿತು. ಸ್ವಾಮಿ ಬ್ರಹ್ಮಾನಂದರ ಶಿಷ್ಯರಾಗಿದ್ದ ಸ್ವಾಮಿ ಆಗಮಾನಂದರು ಈ ಆಶ್ರಮದ ಸ್ಥಾಪಕ ಅಧ್ಯಕ್ಷರಾಗಿದ್ದರು. ಆಶ್ರಮವು ಆರಂಭವಾದ ನಂತರ ಅದು ಕೇರಳದಲ್ಲಿ ಆಧ್ಯಾತ್ಮಿಕತೆ, ಸಾಮಾಜಿಕ ಅಭಿವೃದ್ಧಿ ಹಾಗೂ ಸೇವಾಕಾರ್ಯಗಳ ಒಂದು ಮುಖ್ಯ ಕಾರ್ಯಕ್ಷೇತ್ರವೆನಿಸಿದೆ. ಕಳೆದ 77 ವರ್ಷಗಳಿಂದ ನಾವು ಸಮಾಜ ಕಲ್ಯಾಣ ಹಾಗೂ ಶೈಕ್ಷಣಿಕ ಕ್ಷೇತ್ರಗಳಲ್ಲಿ ಅಮೂಲ್ಯ ಸೇವೆಯನ್ನು ಅನವರತ ಸಲ್ಲಿಸುತ್ತಿದ್ದೇವೆ.

ಆಶ್ರಮವು ವಿವಿಧ ಶೈಕ್ಷಣಿಕ ಸಂಸ್ಥೆಗಳ, ವಿದ್ಯಾರ್ಥಿನಿಲಯ, ಸಮಾಜ ಕಲ್ಯಾಣ ಕೇಂದ್ರ, ಕಂಪ್ಯೂಟರ್ ಹಾಗೂ ಬೆರಳಚ್ಚು ತರಬೇತಿ ಕೇಂದ್ರಗಳ ಮೂಲಕ ವೈವಿಧ್ಯಮಯವಾದ ಸಮಾಜಸೇವಾ ಕಾರ್ಯಗಳನ್ನು ನಡೆಸುತ್ತಿದೆ. ಈ ಆಶ್ರಮದ ಆವರಣದಲ್ಲಿ ವಿಶ್ವಭಾವೈಕ್ಯ ಮಂದಿರ, ಸಭಾಂಗಣಗಳು ಹಾಗೂ ಶಾಲೆಗಳಿವೆ. (ಶಾಲೆಯಲ್ಲಿ ಕಿಂಡರ್‌ಗಾರ್ಟನ್ ನಿಂದ +2 ವರೆಗಿನ ವಿದ್ಯಾರ್ಥಿಗಳು ಓದುತ್ತಿದ್ದಾರೆ. ಅವರಿಗೆ ಶಾಲಾವಾಹನ, ಕ್ರೀಡಾಂಗಣ, ಗ್ರಂಥಾಲಯ ಮೊದಲಾದ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ.) 1966ರಿಂದ ಆಶ್ರಮವು ಬುಡಕಟ್ಟು ವಿದ್ಯಾರ್ಥಿನಿಲಯವನ್ನು ನಡೆಸುತ್ತಿದೆ. ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗಾಗಿ ಒಂದು ಕಂಪ್ಯೂಟರ್ ಹಾಗೂ ಬೆರಳಚ್ಚು ತರಬೇತಿ ಕೇಂದ್ರವನ್ನೂ ಆಶ್ರಮ ನಡೆಸುತ್ತಿದ್ದು, ಅದು ಅವರಿಗೆ ಸರ್ಕಾರಿ ಹಾಗೂ ಖಾಸಗಿ ಕಂಪೆನಿಗಳಲ್ಲಿ ಉದ್ಯೋಗ ಪಡೆಯಲು ನೆರವಾಗುತ್ತಿದೆ. ಮುವಾಟ್ಟುಪುಳ ಎಂಬಲ್ಲಿ ಈ ಆಶ್ರಮದ ಉಪಕೇಂದ್ರವೂ ಕಾರ್ಯ ನಿರ್ವಹಿಸುತ್ತಿದೆ.

ಈ ಮೇಲಿನ ಚಟುವಟಿಕೆಗಳನ್ನು ನಡೆಸಿಕೊಂಡು ಬರಲು ಆಶ್ರಮವು ಪ್ರಧಾನವಾಗಿ ನಿಮ್ಮಂತಹ ಭಕ್ತರ ಹಾಗೂ ಹಿತೈಷಿಗಳ ಆರ್ಥಿಕ ನೆರವನ್ನೇ ಆಶ್ರಯಿಸಬೇಕಾಗಿದೆ. ಹಲವು ಬಾರಿ ದಾನ-ದತ್ತಿಗಳ ಕೊರತೆ, ಹಣದುಬ್ಬರ ಮುಂತಾದ ಕಾರಣಗಳಿಂದ ಆರ್ಥಿಕ ಕೊರತೆಯ ಪರಿಸ್ಥಿತಿಯುಂಟಾಗಿದೆ. ಈ ಕಾರಣಗಳಿಂದ ತಾವು ನಮ್ಮ ಉದಾತ್ತ ಸೇವಾಕಾರ್ಯಗಳಿಗೆ ನೆರವಾಗುವಂತೆ, ಉದಾರವಾಗಿ ಧನಸಹಾಯ ಮಾಡಲು ಹಾಗೂ ತಮ್ಮ ಬಂಧು-ಮಿತ್ರರಿಗೂ ಈ ದಿಕ್ಕಿನಲ್ಲಿ ಪ್ರೇರಣೆ ನೀಡಲು ತಮ್ಮನ್ನು ಕಳಕಳಿಯಿಂದ ವಿನಂತಿಸಿಕೊಳ್ಳುತ್ತಿದ್ದೇವೆ.

ಕ್ರ. ಸಂ.	ಚಟುವಟಿಕೆ	ವಾರ್ಷಿಕ ವೆಚ್ಚವನ್ನು ಪೂರೈಕೆ ಮಾಡಲು ತಗಲುವ ಕನಿಷ್ಠ ಧನಸಹಾಯ
1.	ನಿತ್ಯ ಸೇವಾಕಾರ್ಯಗಳು – ಶ್ರೀರಾಮಕೃಷ್ಣರ ಪೂಜೆ, ಜಯಂತಿ ಉತ್ಸವಗಳು, ಆಶ್ರಮ ನಿವಾಸ-ನಿರ್ವಹಣೆ, ನಿತ್ಯ ಅನ್ನದಾನ ಹಾಗೂ ಸಾಧುಸೇವೆ.	10 ಲಕ್ಷ ರೂ.
2.	ಶೈಕ್ಷಣಿಕ – ಶಾಲಾ ಚಟುವಟಿಕೆಗಳ ನಿರ್ವಹಣೆ, ಕಟ್ಟಡಗಳ ನಿರ್ವಹಣೆ, ಶಾಲಾ ಚಟುವಟಿಕೆಗಳ ಆಧುನೀಕರಣ ಹಾಗೂ ಉನ್ನತೀಕರಣ, ಬಡ ವಿದ್ಯಾರ್ಥಿಗಳಿಗೆ ನೆರವು ನೀಡುವ ನಿಧಿ, ಸ್ಕಾಲರ್‌ಶಿಪ್ ಇತ್ಯಾದಿ.	15 ಲಕ್ಷ ರೂ.
3.	ಸಮಾಜ ಅಭಿವೃದ್ಧಿ ಹಾಗೂ ಕಲ್ಯಾಣ ಸೇವಾಕಾರ್ಯಗಳು – ಶ್ರೀರಾಮಕೃಷ್ಣ ಗುರುಕುಲಂ ವಿದ್ಯಾರ್ಥಿನಿಲಯದ ಖರ್ಚುವೆಚ್ಚಗಳು, ಪರಿಶಿಷ್ಟ ವರ್ಗ ಕಲ್ಯಾಣ, ಪರಿಶಿಷ್ಟ ಜಾತಿ ತರಬೇತಿ ಕೇಂದ್ರ, ಕಂಪ್ಯೂಟರ್ ಹಾಗೂ ಬೆರಳಚ್ಚು ತರಬೇತಿ ಕೇಂದ್ರ, ಬಡವರಿಗೆ ಹಾಗೂ ವಿಧವೆಯರಿಗೆ ಆರ್ಥಿಕ ನೆರವು ಇತ್ಯಾದಿ.	25 ಲಕ್ಷ ರೂ.

ತಮ್ಮ ದೇಣಿಗೆಯನ್ನು ನೀವು ಚೆಕ್/ಡಿ.ಡಿ.(''Sri Ramakrishna Advaita Ashrama'' ಹೆಸರಿನಲ್ಲಿ), ಇಲೆಕ್ಟ್ರಾನಿಕ್ ವರ್ಗಾವಣೆ ಮೂಲಕ ಕಳುಹಿಸಬಹುದು. (Canara Bank, Kalady IFSC Code CNRB0002921 Account Number 2921101005444.) ದೇಣಿಗೆಯನ್ನು ಕಳುಹಿಸಿದ ಬಳಿಕ ತಮ್ಮ ಹೆಸರು, ಪೂರ್ಣ ವಿಳಾಸ, ಪ್ಯಾನ್ ನಂಬರ್ ಇವನ್ನು kalady@rkmm.org ಈ ವಿಳಾಸಕ್ಕೆ ಇ-ಮೇಲ್ ಮೂಲಕ ಕಳುಹಿಸಿಕೊಡಬೇಕು. ನೀವು ನೀಡುವ ದೇಣಿಗೆಯು ಆದಾಯ ತೆರಿಗೆ ಕಾಯಿದೆಯ u/s 80G ತೆರಿಗೆ ವಿನಾಯಿತಿ ಪಡೆಯಲು ಅರ್ಹವಾಗಿರುತ್ತದೆ. ರೂ.10,000/- ಕ್ಕೂ ಹೆಚ್ಚಿನ ಮೊತ್ತವನ್ನು ದತ್ತಿಯನ್ನಾಗಿ ಪರಿಗಣಿಸಿ ಸ್ವೀಕರಿಸಲಾಗುವುದು.

ಭಗವಾನ್ ಶ್ರೀರಾಮಕೃಷ್ಣರು ನಿಮ್ಮ ಎಲ್ಲ ಕಾರ್ಯಚಟುವಟಿಕೆಗಳಲ್ಲಿ ತಮ್ಮ ಕೃಪೆಯನ್ನು ಹರಿಸಲಿ ಎಂಬುದೇ ನಮ್ಮ ಹೃತ್ಪೂರ್ವಕ ಪ್ರಾರ್ಥನೆ.

ಭಗವತ್ಸೇವೆಯಲ್ಲಿ ತಮ್ಮ,
ಸ್ವಾಮಿ ಶ್ರೀವಿದ್ಯಾನಂದ
ಅಧ್ಯಕ್ಷರು

ಆಧ್ಯಾತ್ಮಿಕ ಪಥದಲ್ಲಿ ವಿಜ್ಞಾನಿ

ಪ್ರವ್ರಾಜಿಕಾ ಪರಮಪ್ರಾಣಾ

(ಭಾಗ ಎರಡು)

ವಿಜ್ಞಾನಿ ಜಗದೀಶ್‌ಚಂದ್ರ ಬೋಸರನ್ನು (ಜೆ.ಸಿ.ಬೋಸ್) ಬೋಶಿ ತಮ್ಮ ಗುರು ಸದಾನಂದರನ್ನು ಗೌರವಿಸುತ್ತಿದ್ದಂತೆಯೇ ಶ್ರದ್ಧೆಯಿಂದ ಕಾಣುತ್ತಿದ್ದರು. ಡಾ. ಜೆ.ಸಿ ಬೋಸರು ಕೂಡ ಈ ಯುವಕನ ಆಧ್ಯಾತ್ಮಿಕ ಪ್ರವೃತ್ತಿಯನ್ನು ಗುರುತಿಸಿ, ವಿಜ್ಞಾನದ ಶಿಕ್ಷಣದ ಜೊತೆಗೆ ಆತನ ಸ್ವಭಾವ ಚರಿತ್ರೆಗಳ ಉನ್ನತಿಗೂ ಮಾರ್ಗ ದರ್ಶನ ನೀಡುತ್ತಿದ್ದರು. ಜೆ.ಸಿ.ಬೋಸರು ಬೋಶಿಗೆ ಬರೆದ ಒಂದು ಪತ್ರ ಆತನ ಮಾನಸಿಕ ಹಾಗೂ ಬೌದ್ಧಿಕ ಅಭಿವೃದ್ಧಿಗೆ ಅವರು ಕೊಟ್ಟ ಸಲಹೆಗಳಿಂದ ತುಂಬಿದೆ. ಬೋಶಿ ದಿನದ ಬಹು ಭಾಗವನ್ನು ಜೆ.ಸಿ.ಬೋಸರ ಬಳಿ ಕಳೆಯತೊಡಗಿದರು. ''ನಾನು ಅವರ ಕಾರ್ಯದರ್ಶಿಯಾಗಿ, ಸಂಶೋಧನೆಯ ವಿದ್ಯಾರ್ಥಿಯಾಗಿ ಅವರೊಡನೆ ಇರಲಾರಂಭಿಸಿದೆ. ಅವರ ಬಟ್ಟೆಗಳನ್ನು ದೋಬಿಗೆ ಕೊಡುವ ಕೆಲಸವನ್ನೂ ಮಾಡುತ್ತಿದ್ದೆ.'' ಎನ್ನುತ್ತಾರೆ ಬೋಶಿ.

ಡಾ. ಜೆ.ಸಿ.ಬೋಸರ ಪ್ರಯೋಗ ಶಾಲೆಯಿಂದ ಹಿಂದಿರುಗಿ ಮನೆಗೆ ಬಂದ ಮೇಲೆ, ಬೋಶಿ ಬಲರಾಮನ ಮನೆಯಲ್ಲಿದ್ದ ಸ್ವಾಮಿ ಬ್ರಹ್ಮಾನಂದರನ್ನು ಕಾಣಲು ಹೋಗುವುದು ದಿನನಿತ್ಯದ ಅಭ್ಯಾಸವಾಗಿತ್ತು. ಕೆಲವೊಮ್ಮೆ ಮನೆಗೆ ಹಿಂತಿರುಗುವಾಗ ರಾತ್ರಿ ಒಂಬತ್ತು ಅಥವಾ ಹತ್ತು ಗಂಟೆಯಾಗಿ ಬಿಡುತ್ತಿತ್ತು. ಆ ಸಂದರ್ಭಗಳಲ್ಲಿ ಬೋಶಿ ಆಯಾಸದಿಂದ ಹೇಳುತ್ತಿದ್ದರು, '' ಇಂದು ಮಹಾರಾಜರನ್ನು (ಬ್ರಹ್ಮಾನಂದರನ್ನು) ಕಾಣಲು ಹೋಗುವುದಿಲ್ಲ.'' ಆದರೆ ಅವರಿಗೆ ಅರಿವಿಲ್ಲದಂತೆ ಕಾಲುಗಳು ಬಲರಾಮನ ಮನೆಯತ್ತ ಓಡುತ್ತಿದ್ದವು. ಮತ್ತೆ ಮನೆಗೆ ಹಿಂತಿರುಗಿದಾಗ ಮನಸ್ಸು ಹಗುರವಾಗಿ ಆನಂದದಿಂದ ತುಂಬಿರುತ್ತಿತ್ತು. ಮಹಾಪುರುಷರ ಸಾನ್ನಿಧ್ಯದ ಬೆಲೆ ಆ ತರುಣ ವಯಸ್ಸಿನಲ್ಲಿಯೇ ಬೋಶಿಗೆ ಚೆನ್ನಾಗಿ ಅರಿವಾಗಿತ್ತು.

ಬೋಸ್ ಸಂಸ್ಥೆಯ ಅತ್ಯಂತ ದಕ್ಷ ವಿದ್ಯಾರ್ಥಿ ಎಂದು ಬೋಶಿ ಹೆಸರು ಪಡೆದರು. ಜಟಿಲವಾದ ಹಾಗೂ ಅತ್ಯಂತ ಸಹನೆಯಿಂದ ನಡೆಸಬೇಕಾದ ಸಂಶೋಧನೆಗಳನ್ನು ಜೆ.ಸಿ.ಬೋಸ್‌ರು ಬೋಶಿಗೇ ಒಪ್ಪಿಸುತ್ತಿದ್ದರು. ಒಮ್ಮೆ ಡಾ. ಜೆ.ಸಿ.ಬೋಸರು ಸಸ್ಯ ಒಂದರ ಸಣ್ಣ ಎಲೆಯಲ್ಲಿ ಕಂಡುಬರುವ ಜೀವದ ಸ್ಪಂದನವನ್ನು ಅಧ್ಯಯನ ಮಾಡಿ ವರದಿ ಒಪ್ಪಿಸುವಂತೆ ಬೋಶಿಗೆ ಹೇಳಿದರು. ಈ ಪ್ರಯೋಗಕ್ಕಾಗಿ ಜೆ.ಸಿ.ಬೋಸರು ತಾವೇ ಒಂದು ಯಂತ್ರವನ್ನು ಕಂಡುಹಿಡಿದಿದ್ದರು. ಈ ಯಂತ್ರದಲ್ಲಿ ಅಳವಡಿಸಿದ್ದ ಒಂದು ಸೂಕ್ಷ್ಮ ಸೂಜಿ, ಯಂತ್ರದಲ್ಲಿ ಅಳವಡಿಸಿದ್ದ ಹೊಗೆಯಿಂದ ಕಪ್ಪು ಮಾಡಿದ್ದ



(Smoked Glass) ಒಂದು ಗಾಜಿನ ಮೇಲೆ ಸಣ್ಣ ಸಣ್ಣ ಚುಕ್ಕಿಗಳನ್ನು ಇಡುವುದರ ಮೂಲಕ ಸಸ್ಯಗಳಲ್ಲಿ ಉತ್ಪನ್ನವಾಗುತ್ತಿದ್ದ ಸ್ಪಂದನದ ಏರಿಳಿತವನ್ನು ದಾಖಲು ಮಾಡುತ್ತಿತ್ತು. ಒಂದು ಸಣ್ಣ ಎಲೆಯಲ್ಲಿ ಅತ್ಯಂತ ಸೂಕ್ಷ್ಮವಾಗಿ ಏಳುತ್ತಿದ್ದ ಸ್ಪಂದನವನ್ನು ಅಧ್ಯಯನ ಮಾಡಲು ಬೋಶಿಗೆ ಪ್ರತಿ ನಾಲ್ಕು ಗಂಟೆಗಳಿಗೊಮ್ಮೆ Smoked Glass ಬದಲಿಸಬೇಕಾಗಿತ್ತು. ಈ ಪ್ರಯೋಗವನ್ನು ಡಾ. ಜೆ.ಸಿ. ಬೋಸರ ಮನೆಯ ಎರಡನೆಯ ಅಂತಸ್ತಿನಲ್ಲಿರುವ ವಿಶಾಲವಾದ ಕೋಣೆಯಲ್ಲಿ ನಡೆಸಲಾಯಿತು. ಸಾಧಾರಣವಾಗಿ ಕೆಲವೇ ಗಂಟೆಗಳಲ್ಲಿ ಈ ಸಣ್ಣ ಎಲೆಯ ಜೀವದ ತುಡಿತ ನಿಂತು ಹೋಗಬೇಕಾಗಿತ್ತು. ಆದರೆ ಆ ದಿನ ಬೋಶಿಯ ದುರದೃಷ್ಟದಿಂದ ಹಾಗಾಗಲಿಲ್ಲ. ಇಡೀ ರಾತ್ರಿ ಯಾವ ರೀತಿಯ ಏರಿಳಿತಗಳಿಲ್ಲದೆ ಸಮಾನವಾದ ಚುಕ್ಕೆಗಳು ಗಾಜಿನ ಮೇಲೆ ಮೂಡಿಬಂದವು. ಬೆಳಿಗ್ಗೆ ೫ ಗಂಟೆಯ ಹೊತ್ತಿಗೆ ಎಲೆಗಳು ಸ್ವಲ್ಪ ಮುದುರಿದಂತಾದವು. ಆರು ಗಂಟೆಗೆ ಅದರಿಂದ ಹೊರಹೊಮ್ಮುತ್ತಿದ್ದ ಸ್ಪಂದನ ಸಂಪೂರ್ಣವಾಗಿ ನಿಂತುಹೋಯಿತು. ಆ ಸಮಯಕ್ಕೆ ಸರಿಯಾಗಿ ಒಳಗೆ ಬಂದ ಜೆ.ಸಿ. ಬೋಸರು ಗಾಜುಗಳನ್ನು ಪರೀಕ್ಷಿಸಿ ನೋಡಿ ಅತ್ಯಂತ ಆನಂದದಿಂದ ಹೇಳಿದರು: ''ತುಂಬಾ ಚೆನ್ನಾಗಿ ಕೆಲಸ ಮಾಡಿದೆ ಬೋಶಿ, ಈಗ ಮತ್ತೆ ಈ ಎಲೆಗೆ ಜೀವ ತುಂಬಲು ಸಾಧ್ಯವೇ ನೋಡೋಣ.'' ಬೋಶಿ ಕೆಲವು ರಸಾಯನಗಳನ್ನು ಹಾಕಿ ಎಲೆ ಮತ್ತೆ ಜೀವಂತವಾಗುವಂತೆ ಮಾಡಿದರು. ಮೊದಲಿಗಿಂತ ಹೆಚ್ಚಾಗಿ ಎಲೆಯಲ್ಲಿ ಪ್ರಾಣದ ಸ್ಪಂದನ ಕಾಣಿಸಿಕೊಂಡಿತು.

ಈ ರೀತಿ ಸುಮಾರು ೩೬ ಗಂಟೆ ಕಾಲ ಬೋಶಿ ಸೂಕ್ಷ್ಮದರ್ಶನ ಯಂತ್ರದಿಂದ ಆ ಸಸ್ಯವನ್ನು ಪರೀಕ್ಷಿಸಿದರು. ಸಂಜೆಯ ಹೊತ್ತಿಗೆ ಬೋಶಿಗೆ ವಿಶ್ರಾಂತಿ ಕೊಟ್ಟು ಆ ಸಸ್ಯ ಕೊನೆಯುಸಿರೆಳೆಯಿತು.

ಸಸ್ಯಗಳಲ್ಲಿ ಪ್ರಾಣವಿರುವ ಬಗ್ಗೆ ಬೋಸ್‌ರವರು ನಡೆಸಿದ ಸಂಶೋಧನೆಯ ಸತ್ಯತೆಯ ಬಗ್ಗೆ ಪಾಶ್ಚಾತ್ಯ ವಿಜ್ಞಾನಿಗಳು ಸಂದೇಹ ವ್ಯಕ್ತಪಡಿಸಿದ್ದರು. ಇದೆಲ್ಲ ಭಾರತೀಯರ ಕಲ್ಪನೆಯೆಂದೇ ಅನೇಕರ ಅಭಿಪ್ರಾಯವಾಗಿತ್ತು. ೧೯೧೪ರಲ್ಲಿ ಭಾರತದ ಸರ್ಕಾರ ಜೆ.ಸಿ.ಬೋಸರಿಗೆ ಇಂಗ್ಲೆಂಡ್ ಹಾಗೂ ಯೂರೋಪಿಗೆ ಹೋಗಿ, ತಮ್ಮ ಸಂಶೋಧನೆಯನ್ನು ಅಲ್ಲಿಯ ವಿಜ್ಞಾನಿಗಳೆದುರು ಪ್ರಮಾಣ ಮಾಡಿ ತೋರಿಸಲು ಹೇಳಿತು. ಈ ಮಹತ್ವಪೂರ್ಣ ಪ್ರಯಾಣದಲ್ಲಿ ಜೆ.ಸಿ. ಬೋಸ್ ತಮ್ಮ ಎಲ್ಲಾ ವಿದ್ಯಾರ್ಥಿಗಳ ನಡುವೆ ಬೋಶಿಯನ್ನೇ ಸಹಾಯಕರನಗಿ ಆರಿಸಿಕೊಂಡರು. ಪ್ರಯೋಗ ಮಾಡಿ ತೋರಿಸಲು ಆಯಾ ದೇಶಗಳಲ್ಲಿ ಸಿಗುವ ಸಸ್ಯಗಳ ಬದಲು, ತಾವು ಯಾವಾಗಲೂ ಸಂಶೋಧನೆಗೆ ಬಳಸುತ್ತಿದ್ದ ಸಸ್ಯಗಳನ್ನೇ ತೆಗೆದುಕೊಂಡು ಬೋಶಿ ಹೊರಡಲು ಸಿದ್ಧರಾದರು.

ಲಂಡನ್ನಿನ ರಾಯಲ್ ಇನ್‌ಸ್ಟಿಟ್ಯೂಟ್, ಕೇಂಬ್ರಿಡ್ಜ್, ವಿಯನ್ನಾ, ಪ್ಯಾರೀಸ್ ಮುಂತಾದ ಎಲ್ಲಾ ಜಾಗಗಳಲ್ಲಿಯೂ ವಿಜ್ಞಾನಿಗಳಷ್ಟೇ ಅಲ್ಲ , ಸಮಾಜದ ಎಲ್ಲಾ ಸ್ತರದ ವ್ಯಕ್ತಿಗಳು ಇವರನ್ನು ಕಾಣುವ ಹಾಗೂ ಪ್ರಯೋಗಗಳನ್ನು ನೋಡುವ ಕುತೂಹಲದಿಂದ ಬಹು ಸಂಖ್ಯೆಯಲ್ಲಿ ಬಂದಿದ್ದರು. ವಿದ್ಯುತ್ತಿನ ಸ್ಪರ್ಶವಾದಾಗ ಅಥವಾ ಯಾವುದಾದರೂ ರಾಸಾಯನಿಕ ಪದಾರ್ಥ, ಆಲ್ಕೋಹಾಲ್ ಮುಂತಾದವುಗಳನ್ನು ಸುರಿದಾಗ ಸಸ್ಯಗಳಲ್ಲಿ ಉಂಟಾಗುವ ಪ್ರತಿಕ್ರಿಯೆಯನ್ನು ಪರದೆಯ ಮೇಲೆ ಪ್ರೊಜೆಕ್ಟರಿನ ಮೂಲಕ ತೋರಿಸಲಾಗುತ್ತಿತ್ತು. ಸಸ್ಯಗಳು ನೋವಿನಿಂದ ನಲುಗುವುದು, ಸುಸ್ತಾಗಿ ತಮ್ಮ ತೇಜಸ್ಸನ್ನು ಕಳೆದುಕೊಳ್ಳುವುದು ಮುಂತಾದ ಪ್ರತಿಕ್ರಿಯೆಗಳು ಚುಕ್ಕೆಗಳ ಏರು ಪೇರಿನ ಮೂಲಕ ಪರದೆಯ ಮೇಲೆ ಮೂಡಿಬರುತ್ತಿತ್ತು. ಬೋಶಿಗೆ ಲಂಡನ್ನಿನಲ್ಲಿ ಬಹಳ ಜನ ವಿಶಿಷ್ಟ ವ್ಯಕ್ತಿಗಳೊಂದಿಗೆ ಪರಿಚಯವಾಯಿತು. ಒಮ್ಮೆ ಅತ್ಯಂತ ಹೆಸರುವಾಸಿಯಾದ ಸಾಹಿತಿ ಬರ್ನಾರ್ಡ್ ಶಾ ಜೆ.ಸಿ. ಬೋಸರ ಸಭೆಗೆ ಬಂದರು. ತಾವು ಸಸ್ಯಾಹಾರಿ ಎಂದು ಗರ್ವಪಟ್ಟುಕೊಳ್ಳುತ್ತಿದ್ದ ಅವರು, ತಾವು ಹೋದ ಸಭೆ, ಸಮಾರಂಭಗಳಲ್ಲಿ ಮಾಂಸಾಹಾರಿಗಳನ್ನು ಟೀಕಿಸುವ ಅವಕಾಶವನ್ನು ಬಿಡುತ್ತಿರಲಿಲ್ಲ. ಅವರ ಹರಿತವಾದ ಮಾತುಗಳು ಉಳಿದವರ ವಾದ, ಯುಕ್ತಿಗಳು ನೆಲಕಚ್ಚುವಂತೆ ಮಾಡುತ್ತಿತ್ತು. ಇಂಥ ಬರ್ನಾರ್ಡ್ ಶಾರವರು ಡಾ. ಜೆ.ಸಿ.ಬೋಸ್ ಮತ್ತು ಬೋಶಿಯವರು ತೋರಿಸಿದ ಒಂದು ಪ್ರಯೋಗವನ್ನು ಕಂಡು ದಿಗ್ಭ್ರಾಂತರಾದರು. ಯಂತ್ರದಲ್ಲಿ ಇಟ್ಟಿದ್ದ ಎಲೆಕೋಸಿನ ಜೀವಂತವಾಗಿ ನಳನಳಿಸುವ ಎಲೆಯ ಮೇಲೆ ಬೋಶಿ ಬಿಸಿನೀರನ್ನು ಹಾಕಿದಾಗ ಅದು ನೋವಿನಿಂದ ಮುದುರಿ ಹೋದುದು, ಹಾಗೂ ಅದರ ಜೀವದ ಸ್ಪಂದನದಲ್ಲಾದ ಏರುಪೇರುಗಳನ್ನು ಬೋಸರ ಯಂತ್ರದ ಮೂಲಕ ವೀಕ್ಷಿಸಿದ ಬರ್ನಾರ್ಡ್ ಶಾರವರು ತಮ್ಮ ಜೀವನದಲ್ಲಿ ಮೊದಲ ಬಾರಿ ಮಾತಿಲ್ಲದೆ ಸ್ತಂಭಿತರಾಗಿ ಕುಳಿತರು. ಅವರ ಪತ್ನಿ ನಂತರ ಬೋಶಿಗೆ ಹೇಳಿದ್ದರು. ''ಇಷ್ಟು ವರ್ಷಗಳಲ್ಲಿ ಈ ಒಂದೇ ಸಂದರ್ಭದಲ್ಲಿ ಅವರು ಪೆಚ್ಚಾಗಿ, ಮೂಕರಾಗಿ ಕುಳಿತಿದ್ದುದನ್ನು ನೋಡಿದೆ!''

ಈ ಎಲ್ಲಾ ದೇಶಗಳಲ್ಲಿ ಅತ್ಯಂತ ವಿದ್ಯಾವಂತ, ಸುಸಂಸ್ಕೃತ ಪ್ರೇಕ್ಷಕರನ್ನು ಎದುರಿಸಿ ನಿಲ್ಲುವಾಗ ಆರಂಭದಲ್ಲಿ ಬೋಶಿ ಸ್ವಲ್ಪ ಭಯಪಟ್ಟಿದ್ದರು. ತಮ್ಮ ಪ್ರಯೋಗ, ವಿವರಣೆಗಳು ಸರಿಯಾಗಿಯೇ ಇದ್ದರೂ ಈ ದೇಶಗಳ ಹೊಸ ಹವಾಮಾನದಲ್ಲಿ ತಾವು ಭಾರತದಿಂದ ತಂದ ಸಸ್ಯಗಳು ಹೇಗೆ ಪ್ರತಿಕ್ರಿಯೆ ತೋರಿಸಬಲ್ಲವೋ ಎಂಬ ಚಿಂತೆ ಅವರನ್ನು ಕಾಡುತ್ತಿತ್ತು. ಇಂಥ ಸಮಯಗಳಲ್ಲಿ ಭಗವದ್ಗೀತೆಯ '**ಕರ್ಮಣ್ಯೇವಾಧಿಕಾರಸ್ತೇ ಮಾ ಫಲೇಷು ಕದಾಚನ**' (ಕರ್ಮ ಮಾಡಲು ಮಾತ್ರ ನಿನಗೆ ಅಧಿಕಾರ, ಅದರ ಫಲದತ್ತ ಎಂದೂ ಮನಸ್ಸಿಡಬೇಡ) ಎಂಬ ಶ್ಲೋಕವನ್ನು ನೆನಪಿಸಿಕೊಂಡು ಬೋಶಿ ತಮ್ಮ ಮನಸ್ಸನ್ನು ಶಾಂತಗೊಳಿಸುತ್ತಿದ್ದರು.

ತಮ್ಮ ಉದ್ದೇಶವನ್ನು ಸಾಧಿಸಲು ಪ್ರಾಣವನ್ನೂ ಮುಡಿಪಾಗಿಡಲು ಬೋಶಿ ಸಿದ್ಧರಾಗಿದ್ದರೆಂಬುದು ಮತ್ತೊಂದು ಘಟನೆಯಿಂದ ತಿಳಿದು ಬರುತ್ತದೆ. ಪ್ಯಾರಿಸಿನ ಒಂದು ವಿಶ್ವವಿದ್ಯಾಲಯದಲ್ಲಿ ತಮ್ಮ ಸಂಶೋಧನೆಯನ್ನು ತೋರಿಸಲು ಹೋಗಿದ್ದಾಗ ಡಾ. ಜೆ.ಸಿ.ಬೋಸರು ಅಲ್ಲಿ ನೆರೆದ ವಿದ್ಯಾರ್ಥಿಗಳು ಮತ್ತು ಅಧ್ಯಾಪಕರೆದುರಿಗೆ ಹೇಳಿದರು, ''ನಾವೀಗ ಒಂದು ಜೀವಂತ ಸಸ್ಯವನ್ನು ಸೈನೈಡ್ (cynide) ದ್ರಾವಣದಲ್ಲಿ ಹಾಕುತ್ತೇವೆ. ಆಗ ಅದರಲ್ಲಾಗುವ ಪ್ರತಿಕ್ರಿಯೆಯನ್ನು ನೀವು ಪರದೆಯ ಮೇಲೆ ಮೂಡುವ ಚಿಹ್ನೆಗಳ ಏರುಪೇರುಗಳನ್ನು ಗಮನಿಸಿ ತಿಳಿಯಬಹುದು.'' ನಂತರ ಈ ಪ್ರಯೋಗವನ್ನು ಪ್ರೇಕ್ಷಕರೆದುರಿಗೆ ಮಾಡುವಂತೆ ಬೋಶಿಗೆ ಹೇಳಿದರು. ಈ ಪೊಟಾಶಿಯಂ ಸೈನೈಡ್ ಎಂಬ ರಸಾಯನ ಒಂದು ಭಯಾನಕವಾದ ವಿಷ. ಬೋಶಿ ಅದನ್ನು ಆ ಗಿಡದ ಮೇಲೆ ಸುರಿದರು. ಅದುವರೆಗೂ ಆ ಗಿಡವನ್ನಿಟ್ಟಿದ್ದ ಯಂತ್ರ ಪರದೆಯ ಮೇಲೆ ಸಮಾನವಾದ ಚುಕ್ಕೆಗಳನ್ನು ತೋರಿಸುತ್ತಿತ್ತು. ಈಗ ವಿಷದ ಪರಿಣಾಮದಿಂದ ಅದರಲ್ಲಿ ಉಂಟಾಗುವ ಪ್ರತಿಕ್ರಿಯೆ ಚುಕ್ಕೆಗಳ ಏರುಪೇರುಗಳಿಂದ ಕಂಡುಬರಬೇಕಾಗಿತ್ತು. ಆದರೆ ಹಾಗಾಗಲಿಲ್ಲ. ಆ ಗಿಡ ಮೊದಲಿನಂತೆಯೇ ಸಮಾನವಾದ ಪ್ರತಿಕ್ರಿಯೆಯನ್ನು ತೋರಿಸುತ್ತಾ ಬಂದಿತು. ವಿಷದ ಸಂಸ್ಪರ್ಶದಿಂದ ಗಿಡ ಪಡುವ ಕಷ್ಟ ಹಾಗೂ ತನ್ನ ಜೀವಶಕ್ತಿಯನ್ನು ಕಳೆದುಕೊಳ್ಳುವುದನ್ನು ಸೂಚಿಸುವಂತಹ ಯಾವ ಪ್ರತಿಕ್ರಿಯೆಯೂ ಅದರಲ್ಲಿ ಕಂಡುಬರಲಿಲ್ಲ! ಬೋಶಿ ಗಾಬರಿಯಾದರು. ತಮ್ಮ ಕೈಯಲ್ಲಿರುವ ಬಿಳಿಯ ಪುಡಿ ಪೊಟಾಶಿಯಂ ಸೈನೈಡ್ ತಾನೆ?! ಅವರಿಗೆ ಸಂಶಯ ಬಂದಿತು. ಪರೀಕ್ಷಿಸಿ ನೋಡಲು ಸ್ವಲ್ಪ ಪುಡಿಯನ್ನು ನಾಲಿಗೆ ಮೇಲೆ ಹಾಕಿಕೊಂಡರು. ಅದು ಸಕ್ಕರೆಯಂತೆ ಸಿಹಿಯಾಗಿ ನಾಲಿಗೆ ಮೇಲೆ ಕರಗಿಹೋಯಿತು. ಅದೇನಾದರೂ ಸೈನೈಡ್ ಆಗಿ

ದ್ದರೆ ಅದನ್ನು ಹೇಳಲು ಬೋಶಿ ಬದುಕಿರುತ್ತಿರಲಿಲ್ಲ. ಪ್ಯಾರಿಸಿನಲ್ಲಿ ಜೆ.ಸಿ.ಬೋಸ್ ಮತ್ತು ಬೋಶಿ ಇಳಿದುಕೊಂಡಿದ್ದ ಮನೆಯ ಒಬ್ಬಳು ಹುಡುಗಿಗೆ ಸೈನೈಡನ್ನು ಕೊಂಡು ತರುವಂತೆ ಬೋಶಿ ಹೇಳಿದ್ದರು. ಆ ಹುಡುಗಿ ಔಷಧದ ಅಂಗಡಿಗೆ ಹೋಗಿ ಸೈನೈಡ್ ಕೊಡುವಂತೆ ಕೇಳಿದಳು. ಇದೊಂದು ಅಪಾಯಕಾರಿಯಾದ ವಿಷ ವಾದ್ದರಿಂದ ಅಂಗಡಿಯವನು, ಆ ಹುಡುಗಿ ಯಾರನ್ನೋ ಪ್ರೀತಿಸಿ ವಿಫಲಳಾಗಿ ಆತ್ಮಹತ್ಯೆ ಮಾಡಿಕೊಳ್ಳಲು ಹೊರಟಿದ್ದಾಳೆಂದು ಊಹಿಸಿ, ಅವಳಿಗೆ ಸಕ್ಕರೆ ಪುಡಿಯನ್ನು ಪೊಟ್ಟಣ ಕಟ್ಟಿ ಕೊಟ್ಟಿದ್ದನು. ಅಂಗಡಿಯಲ್ಲಿ ವಸ್ತು ಅದಲು ಬದಲಾಗಿ, ಸಕ್ಕರೆ ಪೊಟ್ಟಣ ತಮಗೆ ಸಿಕ್ಕಿರಬೇಕೆಂದು ಊಹಿಸಿದ ಬೋಶಿ, ಕೂಡಲೇ ತಮ್ಮ ಬುದ್ಧಿ ಯನ್ನು ಓಡಿಸಿ ಆಲ್ಕೋಹಾಲನ್ನು ಸುರಿದು, ಸಸ್ಯವು ಸಾಯುವಂತೆ ಮಾಡಿ, ತಮ್ಮ ಪ್ರಯೋಗವನ್ನು ಸಫಲಗೊಳಿಸಿದರು.

ಜೆ.ಸಿ.ಬೋಸ್ ಮತ್ತು ಬೋಶಿ ಇವರ ಇಂಗ್ಲೆಂಡ್ ಹಾಗೂ ಯೂರೋಪಿನ ಪ್ರಯಾಣ ಯಶಸ್ವಿಯಾಗಿ ಮುಕ್ತಾಯ ಗೊಂಡಿತು.

೧೯೧೭ರಲ್ಲಿ ಜೆ.ಸಿ.ಬೋಸ್‌ರ ವೈಜ್ಞಾನಿಕ ಸಂಶೋಧನೆಯ ಸಂಸ್ಥೆ ಸ್ಥಾಪಿತವಾಯಿತು. ಭಾರತದಲ್ಲಿ ಆಗ ಬ್ರಿಟಿಷರ ಆಡಳಿತ; ಮೇಧಾವಿಗಳೂ, ಪರಿಶ್ರಮಿಗಳೂ ಆದ ಭಾರತೀಯ ವಿಜ್ಞಾನಿ ಗಳು ಅವಹೇಳನಕ್ಕೆ ಗುರಿಯಾಗಿದ್ದರು. ಇಂಥ ಸಂದರ್ಭದಲ್ಲಿ ಸೋದರಿ ನಿವೇದಿತಾ (ಮಾರ್ಗರೆಟ್ ನೊಬಲ್) ಪರಿಪೂರ್ಣ ವಾಗಿ ಜೆ.ಸಿ.ಬೋಸರಿಗೆ ಬೆಂಬಲಿಗರಾಗಿ ನಿಂತಿದ್ದರು. ಡಾ. ಜೆ.ಸಿ. ಬೋಸರ ವೈಜ್ಞಾನಿಕ ಪ್ರತಿಭೆ ನಿವೇದಿತಾರನ್ನು ಮಂತ್ರಮುಗ್ಧ ರನ್ನಾಗಿ ಮಾಡಿತ್ತು. ಪಾಶ್ಚಾತ್ಯ ವಿಜ್ಞಾನಿಗಳೂ ನಾನಾ ರೀತಿಯ ಪ್ರಯೋಗಗಳ ಮೂಲಕ ಹೊಸ ತತ್ತ್ವಗಳನ್ನು ಅನ್ವೇಷಿಸಿ ಪ್ರತಿ ಪಾದಿಸುತ್ತಿದ್ದಾರೆ ನಿಜ. ಆದರೆ ಡಾ. ಜೆ.ಸಿ.ಬೋಸ್‌ರ ವೈಜ್ಞಾನಿಕ ದೃಷ್ಟಿಕೋನ ಇದಕ್ಕಿಂತ ಹೊಸದಾದದ್ದು; ಭಾರತದ ಸನಾತನ ಆಧ್ಯಾತ್ಮಿಕ ತತ್ತ್ವದ ತಳಪಾಯದ ಮೇಲೆ ಪ್ರತಿಷ್ಠಿತವಾದದ್ದು ಎಂದು ಸಿಸ್ಟರ್ ನಿವೇದಿತಾರಿಗೆ ಗೋಚರವಾಗಿತ್ತು. ಈ ಚರಾಚರ ವಿಶ್ವಬ್ರಹ್ಮಾಂಡ ಚೈತನ್ಯಮಯವಾದದ್ದು. ಪ್ರಕೃತಿಯಲ್ಲಿ ನಮ್ಮ ಕಣ್ಣೆದುರಿಗಿರುವ ಎಲ್ಲಾ ರೀತಿಯ ಜೀವಂತ ಅಥವಾ ಜಡ ವಸ್ತು ಗಳೂ ಒಂದೇ ಪ್ರಾಣದ ಶಕ್ತಿಯಿಂದ ತುಂಬಿವೆ. '**ಯದಿದಂ ಕಿಂಚ ಜಗತ್ ಸರ್ವಂ ಪ್ರಾಣ ಏಜತಿ ನಿಃಸೃತಂ**' ಈ ತತ್ತ್ವದ ಮೇಲೆ ಬೋಸರ ವೈಜ್ಞಾನಿಕ ತತ್ತ್ವ ಪ್ರತಿಷ್ಠಿತವಾಗಿದೆ. ವೈಜ್ಞಾನಿಕ ಸಂಶೋ ಧನೆಯ ಕ್ಷೇತ್ರದಲ್ಲಿ ಡಾ. ಬೋಸ್ ಪ್ರತಿ ಹೆಜ್ಜೆಗೂ ಬಾಧೆ, ವಿಘ್ನ ಗಳನ್ನು ಎದುರಿಸಬೇಕಾಯಿತು. ಇದನ್ನು ಕಂಡ ನಿವೇದಿತಾಳಲ್ಲಿ ದುಃಖ, ಕ್ರೋಧಗಳ ಪ್ರತಿಕ್ರಿಯೆ ಎದ್ದಿತು. ಭಾರತ ಸ್ವಾತಂತ್ರ್ಯ ವನ್ನು ಪಡೆಯದಿದ್ದರೆ ಇಲ್ಲಿಯ ಮೇಧಾವಿಗಳೂ, ವಿಜ್ಞಾನಿಗಳೂ ಯಾವುದೇ ರೀತಿಯಲ್ಲಿಯೂ ಮುಂದುವರೆಯಲು ಸಾಧ್ಯವಿಲ್ಲ ಎನ್ನುವುದು ಅವರಿಗೆ ಮತ್ತೂ ಸ್ಪಷ್ಟವಾಯಿತು. ಭಾರತದ ಅದ್ವೈತ ತತ್ತ್ವವು ವಿಜ್ಞಾನದ ಮೂಲಕವಾಗಿ ಮತ್ತೆ ಪ್ರಮಾಣಿತವಾಗಿ ಪ್ರತಿಷ್ಠೆಯನ್ನು ಪಡೆಯುತ್ತದೆ. ಈಗ ಹಿಂದೆ ಬಿದ್ದಿರುವ ಭಾರತ ವಿಜ್ಞಾನದ ಅಧ್ಯಯನದ ಮೂಲಕವೇ ಮೇಲಕ್ಕೆ ಬರಬೇಕು ಎನ್ನು ವುದು ಸಿಸ್ಟರ್ ನಿವೇದಿತಾರ ದೃಢವಾದ ಅಭಿಪ್ರಾಯವಾಗಿತ್ತು. ಡಾ. ಜೆ.ಸಿ. ಬೋಸ್ ಬರೆದ – 'Living and Nonliving', 'Plant Response', 'Comparative Electro Physio logy' ಹಾಗೂ 'Irritability of Plants' ಇತ್ಯಾದಿ ಪುಸ್ತಕ ಹಾಗೂ ಪ್ರಬಂಧಗಳನ್ನು ತಿದ್ದಿ ಪ್ರಕಟಣೆ ಮಾಡುವ ಕೆಲಸಕ್ಕೆ ನಿವೇ ದಿತಾ ಸಹಾಯ ಮಾಡಿದ್ದರು. ಆ ಸಮಯದಲ್ಲಿ ಡಾ. ಜೆ.ಸಿ. ಬೋಸ್ ಪ್ರತಿದಿನ ಬಾಗ್‌ಬಜಾರಿನ ನಿವೇದಿತಾ ಶಾಲೆಗೆ ಭೇಟಿ ಕೊಡುತ್ತಿದ್ದರು. ಮುಂದೆ ತರುಣ ಬೋಶಿಯಲ್ಲಿ ಪ್ರಖರವಾದ ವೈಜ್ಞಾನಿಕ ಬುದ್ಧಿಯನ್ನು ಗುರುತಿಸಿದ ನಿವೇದಿತಾ ಆತನಿಗೂ ಬೆಂಬಲಿಗರಾಗಿ ನಿಂತರು. ಸೋದರಿ ನಿವೇದಿತಾ ೧೯೧೧ ರಲ್ಲಿ ದಾರ್ಜಿಲಿಂಗಿನಲ್ಲಿ ತೀರಿಕೊಂಡರು. ಡಾ. ಜೆ.ಸಿ. ಬೋಸರ ಇಚ್ಛೆ ಯಂತೆ ಬೋಶಿ ನಿವೇದಿತಾರ ಅಸ್ಥಿಯ ಸಣ್ಣ ಅಂಶವನ್ನು ತಂದು ಕೊಟ್ಟರು. ಇದನ್ನು ಮುಂದೆ ಬೋಸ್ ಇನ್‌ಸ್ಟಿಟ್ಯೂಟಿನ ಹೊಸ ಕಟ್ಟಡದಲ್ಲಿ ಸಂರಕ್ಷಿಸಿ ಇಡಲಾಯಿತು.

ಒಮ್ಮೆ ಸ್ವಾಮಿ ಬ್ರಹ್ಮಾನಂದರು ಬೋಸ್ ಇನ್‌ಸ್ಟಿಟ್ಯೂಟಿಗೆ ಭೇಟಿ ನೀಡಿದರು. ತುಂಬ ಆಸಕ್ತಿಯಿಂದ ಪ್ರಯೋಗಗಳನ್ನು ನೋಡಿದರು. ಆ ದಿನ ಸಂಜೆ ಬೋಶಿ ಅವರನ್ನು ಕಾಣಲು ಹೋಗಿ ದ್ದಾಗ, ಅಲ್ಲಿ ನೆರೆದ ಇತರ ಜನರೆದುರಿಗೆ ಸ್ವಾಮಿ ಬ್ರಹ್ಮಾನಂದರು ಅಂದು ತಾವು ಬೋಸ್ ವೈಜ್ಞಾನಿಕ ಸಂಸ್ಥೆಗೆ ಭೇಟಿ ನೀಡಿದ ವಿಚಾರ ವನ್ನು ತಿಳಿಸುತ್ತಾ ಹೇಳಿದರು, ''ಶ್ರೀರಾಮಕೃಷ್ಣರಿಗೊಮ್ಮೆ ಎಂಥ ಅವಸ್ಥೆ ಬಂದಿತ್ತೆಂದರೆ, ಹುಲ್ಲಿನ ಮೇಲೆ ಕಾಲಿಟ್ಟು ನಡೆಯಲು ಅವರಿಗೆ ಆಗುತ್ತಿರಲಿಲ್ಲ. ಹಾರಿ ಹಾರಿ ಹುಲ್ಲಿಲ್ಲದ ಜಾಗದಲ್ಲಿ ಕಾಲಿಟ್ಟು ನಡೆಯುತ್ತಿದ್ದರು. ಹುಲ್ಲಿನಲ್ಲಿಯೂ ಜೀವವಿರಬೇಕೆಂಬ ಅರಿವೇ ನಮಗೆ ಇರಲಿಲ್ಲ. ಈ ದಿನ ಬೆಳಿಗ್ಗೆ ಜೆ.ಸಿ. ಬೋಸ್‌ರ ಪ್ರಯೋಗಗಳನ್ನು ಕಂಡ ಮೇಲೆ ಶ್ರೀರಾಮಕೃಷ್ಣರ ಗ್ರಹಣಶಕ್ತಿ ಎಂಥ ಸೂಕ್ಷ್ಮವಾಗಿತ್ತೆಂದು ನನಗೆ ಅರ್ಥವಾಯಿತು'' ಎಂದು ಅವರು ಬೋಶಿಯತ್ತ ತಿರುಗಿ ಹೇಳಿದರು, ''ಬೋಶಿ ವಿಜ್ಞಾನ ವನ್ನು ಬಿಡಬೇಡ, ಇನ್ನೂ ಮುಂದುವರಿ.'' ನಂತರ ಮತ್ತೆ ಅವ ನನ್ನು ಕೇಳಿದರು, ''ಬೋಶಿ, ಸತ್ತ ಮೇಲೆ ಏನಾಗುತ್ತದೆ?'' ಬೋಶಿ ಹೇಳಿದರು ''ಈ ಪ್ರಶ್ನೆಗೆ ನೀವೇ ಉತ್ತರ ಕೊಡಬೇಕು ಮಹಾರಾಜ್. ನಮ್ಮ ವಿಜ್ಞಾನದಲ್ಲಿ ಇದಕ್ಕೆ ಉತ್ತರವಿಲ್ಲ..''

ಬಿಡುಗಡೆ

ಸ್ವಾಮಿ ವಿವೇಕಾನಂದರ ಆದರ್ಶಕ್ಕೆ ಅನುಗುಣವಾಗಿ ತಮ್ಮ ಜೀವನವನ್ನು, ಕೆಲಸಗಳನ್ನು ರೂಪಿಸಿಕೊಳ್ಳುವ ತಮ್ಮ ಯೋಜನೆ ಗಳನ್ನು ಕಾರ್ಯರೂಪಕ್ಕೆ ತರಲು ಬೋಶಿ ವ್ಯಾಕುಲರಾದರು. ವಿದೇಶಗಳಿಂದ ಹಿಂತಿರುಗಿದ ಮೇಲೆ ಈ ವಿಚಾರವಾಗಿ ಚರ್ಚಿ ಸಲು ಅವರು ಜೆ.ಸಿ.ಬೋಸ್‌ರ ಬಳಿ ಹೋದರು. ಜೆ.ಸಿ. ಬೋಸ್ ಈ ತರುಣ ವಿಜ್ಞಾನಿಯ ಮಾತುಗಳಿಗೆ ಹೆಚ್ಚು ಮಹತ್ವ ನೀಡಲಿಲ್ಲ.

ಅವರ ಕೈಕೆಳಗೆ ಇದ್ದುಕೊಂಡೇ ಸಸ್ಯವಿಜ್ಞಾನದಲ್ಲಿ ಕೃಷಿಯ ಅಭಿವೃದ್ಧಿಗೋಸ್ಕರ ಸಂಶೋಧನೆ ನಡೆಸುವ ಬೋಶಿಯ ಇಚ್ಛೆಯನ್ನು ಅವರು ತಿರಸ್ಕರಿಸಿದರು. ಈ ಹಿಂದೆ ಇನ್ನೂ ಕೆಲವು ಸಂದರ್ಭಗಳಲ್ಲಿ ಅವರು ತಮ್ಮ ಈ ಮೇಧಾವಿ ವಿದ್ಯಾರ್ಥಿಯ ನಮ್ರತೆ ಮತ್ತು ಬುದ್ಧಿಮತ್ತೆಗಳಿಗೆ ಬೆಲೆಕೊಡದೆ ನಡೆದುಕೊಂಡಿದ್ದರು. ತಮ್ಮ ಸಂಶೋಧನೆಗೆ ಸಂಬಂಧಿಸಿದ ಕೆಲವು ಪ್ರಬಂಧಗಳನ್ನು ಜೆ.ಸಿ. ಬೋಸ್ ಇಂಗ್ಲೆಂಡಿನ ರಾಯಲ್ ಸೊಸೈಟಿಗೆ ಕಳಿಸಲು ಸಿದ್ಧಪಡಿಸುವಂತೆ ಬೋಶಿಗೆ ಹೇಳಿದರು. ಇವನ್ನು ತಯಾರು ಮಾಡಲು ಬೋಶಿ ತಮ್ಮ ದಿನನಿತ್ಯದ ಕೆಲಸದ ನಡುವೆ ಒಂದು ನಿಮಿಷವನ್ನೂ ನಷ್ಟಮಾಡದೆ ಅವಿಶ್ರಾಂತವಾಗಿ ಒಂದು ವರ್ಷವೆಲ್ಲಾ ದುಡಿದಿದ್ದರು. ಈ ಸಂಶೋಧನೆಯ ವಿಚಾರ ಪತ್ರಿಕೆಯಲ್ಲಿ ಅಚ್ಚಾಗಿ ಬಂದಾಗ ಬೋಶಿಗೆ ಆಶ್ಚರ್ಯ ಕಾದಿತ್ತು. ಡಾ. ಜೆ.ಸಿ. ಬೋಸ್ ತಮ್ಮ ಹೆಸರಿನ ಜೊತೆ ಈ ಸಂಶೋಧನೆಗೆ ಯಾವ ರೀತಿಯ ಸಹಾಯವನ್ನೂ ಮಾಡದ ಮತ್ತೊಬ್ಬ ವಿದ್ಯಾರ್ಥಿಯ ಹೆಸರನ್ನು ಕೊಟ್ಟಿದ್ದರು. ಬೋಶಿಯ ಹೆಸರು ಎಲ್ಲೂ ಉಲ್ಲೇಖವಾಗಿರಲಿಲ್ಲ. ಬೋಶಿ ಮತ್ತೆ ಮತ್ತೆ ನೆನಪಿಸಿಕೊಂಡರು ಗೀತೆಯ ಆ ಶ್ಲೋಕವನ್ನು : 'ಕರ್ಮಣ್ಯೇವಾಧಿಕಾರಸ್ತೇ...' ಜೀವನದ ಇಂಥ ಪರೀಕ್ಷೆಗಳಲ್ಲಿ ಅವರಿಗೆ ಶಾಂತಿ ನೀಡುತ್ತಿದ್ದ ಉಪದೇಶವಿದು. ಈ ಎಲ್ಲಾ ವಿಚಾರಗಳನ್ನು ಕುರಿತು ಮುಂದೊಮ್ಮೆ ಮಾತನಾಡುವಾಗ ಬೋಶಿ ಹೇಳಿದ್ದರು, ''ಜೆ.ಸಿ. ಬೋಸ್‌ರವರು ಸ್ವಾಮಿ ವಿವೇಕಾನಂದರಲ್ಲವಲ್ಲಾ, ಹಾಗಾಗಿ ಅವರಿಂದ ಇನ್ನೇನನ್ನು ನಿರೀಕ್ಷಿಸುವುದು?''

ಜೆ.ಸಿ. ಬೋಸರಿಂದ ದೂರವಾಗಿ ಸ್ವತಂತ್ರರಾಗಲು ಬೋಶಿ ಸೇನ್ ಚಿಂತಿಸಲಾರಂಭಿಸಿದರು. ಅವರೊಂದಿಗಿನ ತಮ್ಮ ಹನ್ನೆರಡು ವರ್ಷಗಳ ಸಂಶೋಧನೆಯ ಜೀವನವನ್ನು ಕೊನೆಗೊಳಿಸುವ ತೀರ್ಮಾನಕ್ಕೆ ಬಂದಾಗ ಬೋಶಿಯ ಮನಸ್ಸು ದ್ವಂದ್ವಕ್ಕೆ ಒಳಗಾಯಿತು. 'ಕೈಯಲ್ಲಿ ಸರಿಯಾಗಿ ನಗದು ಹಣವಿಲ್ಲದೆ ಏನು ಸಂಶೋಧನೆ ಮಾಡುವೆ?' ಎಂದು ಸ್ನೇಹಿತರೂ ಹೇಳಲಾರಂಭಿಸಿದ್ದರು. ಕೊನೆಗೊಮ್ಮೆ ದೃಢ ನಿರ್ಧಾರಮಾಡಿ, ಬೋಶಿ ಈ ಮಹಾನ್ ವಿಜ್ಞಾನಿಯ ಹಿಡಿತದಿಂದ ಮುಕ್ತರಾಗಿ ಹೊರಬಂದರು.

ಅಡುಗೆ ಕೋಣೆಯ ಲ್ಯಾಬ್: ಬೋಶಿಯ ಮನಸ್ಸು ಉದ್ವೇಗದಿಂದ ತುಂಬಿತ್ತು. ಕೈಯಲ್ಲಿ ಹಣವಿರಲಿಲ್ಲ, ತನ್ನದೇ ಎನ್ನುವ ಜಾಗವಿರಲಿಲ್ಲ. ಇದುವರೆಗೂ ತನ್ನನ್ನು ಆವರಿಸಿಕೊಂಡಿದ್ದ ದೊಡ್ಡ ಆಶ್ರಯದಿಂದ ಹೊರಬಂದು ಬಯಲಲ್ಲಿ ನಿಂತಂತಾಯಿತು. ಜೀವನದ ಈ ರಣರಂಗದಲ್ಲಿ ಒಬ್ಬನೇ ನಿಂತು ಯುದ್ಧಮಾಡಬೇಕಾದ ಪರಿಸ್ಥಿತಿ. ಇಲ್ಲ, ಜೊತೆಗೆ ಇನ್ನೊಬ್ಬರಿದ್ದಾರೆ, — ಸ್ವಾಮಿ ವಿವೇಕಾನಂದರು. ತಮ್ಮ ಜೀವನದ ಇಂಥ ಸಂಕಟದ ಮುಹೂರ್ತಗಳಲ್ಲಿ ಬೋಶಿ ಪ್ರಾರ್ಥಿಸುತ್ತಿದ್ದುದ್ದು ಸ್ವಾಮಿ ವಿವೇಕಾನಂದರನ್ನು. ೪ನೇ ಜುಲೈ ೧೯೨೪ರಲ್ಲಿ ಬೋಶಿ ತಮ್ಮದೇ ಆದ ಸಣ್ಣ ಲ್ಯಾಬೊರೇಟರಿಯನ್ನು ಆರಂಭಿಸಿ ಅದಕ್ಕೆ '**ವಿವೇಕಾನಂದ ಲ್ಯಾಬೊರೇಟರಿ**' ಎಂದು ಹೆಸರಿಟ್ಟರು. ಆಗಸ್ಟ್ ೧೯೭೧ರಲ್ಲಿ ಬೋಶಿಯ ಶರೀರತ್ಯಾಗದ ನಂತರ ಅವರ ಕಾಗದ ಪತ್ರಗಳ ನಡುವೆ ಒಂದು ಪತ್ರ ಸಿಕ್ಕಿತು. ವಿವೇಕಾನಂದ ಲ್ಯಾಬನ್ನು ಆರಂಭಿಸುವ ಸಮಯದಲ್ಲಿ ತಮ್ಮ ಮನಸ್ಸಿನ ಹೋರಾಟವನ್ನು ತೋರಿಸಿ ಕೊಳ್ಳುತ್ತಾ ಶಕ್ತಿಗಾಗಿ ಧೈರ್ಯಕ್ಕಾಗಿ ಸ್ವಾಮೀಜಿಯ ಬಳಿ ಅವರು ಮಾಡಿದ ವ್ಯಾಕುಲ ಪ್ರಾರ್ಥನೆ ಇದು. ಅವರು ಬರೆಯುತ್ತಾರೆ: ''ಸ್ವಾಮೀಜಿ ಮಹಾರಾಜ್, ನಿಮ್ಮ ಹೆಸರಿನಿಂದಲೇ ಈ ಲ್ಯಾಬೊರೇಟರಿಯನ್ನು ಆರಂಭಿಸುವ ಸಾಹಸ ಮಾಡುತ್ತಿದ್ದೇನೆ. ನನ್ನಲ್ಲಿ ಎಷ್ಟು ಶಕ್ತಿ ಇದೆ ಎಂದು ನಿಮಗೆ ಗೊತ್ತು. ಗುರು ಸದಾನಂದರ ದಾರಿದೀಪ ನೀವು. ನಿಮ್ಮಲ್ಲಿ ನನ್ನ ಒಂದೇ ಪ್ರಾರ್ಥನೆ: ನಿಮ್ಮ ಆದರ್ಶವನ್ನು



ವಿವೇಕಾನಂದ ಲ್ಯಾಬೊರೇಟರಿ, ಆಲ್ಮೋರಾ

ಮುಂದಿಟ್ಟುಕೊಂಡು ಆರಂಭಿಸಿರುವ ಈ ಕೆಲಸ ಸಾರ್ಥಕವಾಗುವಂತೆ ಮಾಡಿ. ನನ್ನ ಯಾವುದೇ ಆಚರಣೆ ನಿಮ್ಮ ಹೆಸರಿಗೆ ಕಳಂಕವನ್ನುಂಟುಮಾಡದಿರಲು ನನ್ನ ಕೈಹಿಡಿದು ನಡೆಸಿ. ನಿಮ್ಮಲ್ಲಿ, ನಿಮ್ಮ ಎಲ್ಲದರಲ್ಲಿ ನನ್ನಲ್ಲಿ ಪ್ರೀತಿ ವಿಶ್ವಾಸ ಕೊಡಿ...'' ಇತಿ ಬೋಶಿ.

ಬಾಗ್‌ಬಜಾರಿನಲ್ಲಿ ನಂ. ೮, ಬೋಸ್‌ಪಾರಾ ಲೇನ್‌ನಲ್ಲಿರುವ ತಮ್ಮ ಆ ಹಳೆಯ ಬಾಡಿಗೆ ಮನೆಯ ಅಡಿಗೆ ಕೋಣೆಯಲ್ಲಿಯೇ ಬೋಶಿ ವಿವೇಕಾನಂದ ಲ್ಯಾಬೊರೇಟರಿಯನ್ನು ಆರಂಭಿಸಿದರು. ತಮ್ಮ ಅದಮ್ಯ ಸಾಹಸ ಮತ್ತು ವಿವೇಕಾನಂದರ ಕೃಪೆಯ ಮೇಲಿನ ಅಗಾಧ ವಿಶ್ವಾಸದಿಂದ ಬೋಶಿ ಅದನ್ನು ಆರಂಭಿಸಿದರು. ಅವರ ಗೆಳೆಯರು ಸ್ವಲ್ಪ ಆಶ್ಚರ್ಯದಿಂದಲೇ ಬೋಶಿಯನ್ನು ಗಮನಿಸುತ್ತಿದ್ದರು. ಅವರ ಸ್ನೇಹಪರಾಯಣತೆ, ನಕ್ಕುನಗಿಸುವ ಪ್ರವೃತ್ತಿ, ತೀಕ್ಷ್ಣ ವೈಜ್ಞಾನಿಕ ಬುದ್ಧಿಗಳು ಭಾರತ ಮತ್ತು ಪಾಶ್ಚಾತ್ಯ ದೇಶಗಳಲ್ಲಿ ಬಹಳ ಮಂದಿ ಸ್ನೇಹಿತರನ್ನು ಅವರತ್ತ ಆಕರ್ಷಿಸಿದ್ದವು. ತಮಗೆ ಸಣ್ಣಪುಟ್ಟ ಸಹಾಯ ಮಾಡಿದ ಜನರನ್ನೂ ಅವರು ಜೀವನವಿಡೀ ನೆನಪಿಟ್ಟುಕೊಂಡಿದ್ದರು. ಅವರಲ್ಲಿ ರಷ್ಯಾದ ಕಲಾವಿದ ನಿಕೋಲಾಸ್ ರೋರಿಚ್ಚರೂ ಒಬ್ಬರು. ಸ್ವಾಮಿ ವಿವೇಕಾನಂದರ ಅನುಯಾಯಿಗಳಾದ ಜೋಸಫಿನ್ ಮ್ಯಾಕ್ಲೌಡ್ ಮುಂತಾದವರು ಕೊನೆಯವರೆಗೂ ಬೋಶಿಯ ಬೆಂಬಲಿಗರಾಗಿ ನಿಂತರು. ಇಂಗ್ಲೆಂಡಿನ ರಾಯಲ್ ಸೊಸೈಟಿಯೂ ಬೋಶಿಗೆ ಹಣವನ್ನು ಕಳುಹಿಸಿತು. ಈ ಎಲ್ಲದರ ನಡುವೆ ಬೋಶಿ ಸ್ವಾಮೀಜಿಯ ಕೃಪಾಸ್ಪರ್ಶವನ್ನು

ಪ್ರತ್ಯಕ್ಷವಾಗಿ ಅನುಭವಿಸುತ್ತಾ ಧನ್ಯರಾದರು. ಆರಂಭದಲ್ಲಿ ಆ ಸಣ್ಣಮನೆಯಲ್ಲಿ ಹೇಗೋ ಗುದ್ದಾಡಿಕೊಂಡೇ ತಮ್ಮ ಕೆಲಸವನ್ನು ನಡೆಸಿಕೊಂಡು ಹೋಗಬೇಕಾಯಿತು. ಸಸ್ಯಗಳ ಸಂರಕ್ಷಣೆಗೆ ವಿಶಾಲವಾದ ಜಾಗ ಮತ್ತು ಬೆಳಕಿನ ಅಗತ್ಯವಿತ್ತು. ಪ್ರಯೋಗ ಮಾಡಲು ಅನುಕೂಲವಾದ ಮೇಜು, ಕುರ್ಚಿಗಳೂ ಇರಲಿಲ್ಲ. ಮೇಜಿನಂತೆ ಉಪಯೋಗಿಸಲು ಚಕ್ರಗಳಿರುವ ಎರಡು ದೊಡ್ಡ ಮರದ ಡಬ್ಬಿಗಳನ್ನು ಮಾಡಿಸಿದರು. ರಾತ್ರಿ ಸಂಶೋಧನೆಯ ಉಪಕರಣಗಳು ಡಬ್ಬಿಯ ಒಳಗೆ ಸೇರಿಕೊಳ್ಳುತ್ತಿದ್ದವು. ಡಬ್ಬಿ ಮಂಚವಾಗಿ ಮಾರ್ಪಾಡಾಗುತ್ತಿತ್ತು. ಮನೆಯ ಸಿಮೆಂಟಿನ ಅಂಗಳದಲ್ಲಿ ಬೇಕಾದ ಸಸ್ಯಗಳನ್ನು ಇಡುತ್ತಿದ್ದರು.

ಅಮೆರಿಕಾದಲ್ಲಿ ಪರಿಚಿತರಾದ ಕೃಷಿ ವಿಶ್ವವಿದ್ಯಾಲಯದ ಎಮ್‌ಹರ್ಸ್ಟ್ ಮತ್ತು ಆತನ ಶ್ರೀಮಂತ ಪತ್ನಿ ಡೊರೊಥಿ ಬೋಶಿಗೆ ಒಂದು ವರ್ಷ ಎಲ್ಲ ರೀತಿಯ ಸಹಾಯವನ್ನು ಮಾಡುವುದಕ್ಕೆ ಮುಂದೆ ಬಂದರು. ವಿವೇಕಾನಂದ ಲ್ಯಾಬೊರೇಟರಿಯ ಅಭ್ಯುದಯಕ್ಕೆ ಸಹಾಯಕರಾದವರಲ್ಲಿ ಮೊದಲಿಗರು ಈ ದಂಪತಿ. ಈ ಎಲ್ಲಾ ಸಹಾಯಗಳ ಬಲದಿಂದ ಬೋಶಿ ಸಸ್ಯಗಳ ಕೋಶಗಳ ಬೆಳವಣಿಗೆಯ ಮೇಲಿನ ತಮ್ಮ ಸಂಶೋಧನೆಯನ್ನು ಮುಂದುವರೆಸಿದರು. ಕ್ರಮೇಣ ಈ ಲ್ಯಾಬೊರೇಟರಿಯ ಹೆಸರು ಸುತ್ತಮುತ್ತಲೂ ಹರಡಿತು. ಬೋಶಿಯ ಬಳಿ ಕೆಲವು ಸಂಶೋಧನೆಯ ವಿದ್ಯಾರ್ಥಿಗಳೂ ಬಂದು ಸೇರಿದರು. ಇವರಲ್ಲಿ ಎಸ್.ಎಂ. ಸಿರ್‌ಕಾರ್ ಎನ್ನುವವರಿಗೆ ತಿಂಗಳಿಗೆ ೧೫೦ ರೂ ಸಂಬಳವನ್ನು ಕೊಟ್ಟು ಬೋಶಿ ತಮ್ಮ ಬಳಿಯೇ ಕೆಲಸಕ್ಕೆ ಇರಿಸಿಕೊಂಡರು. ಈ ಸಿರ್‌ಕಾರ್ ಬಹುಮುಂದೆ ಡಾ. ಜೆ.ಸಿ. ಬೋಸರ ಸಂಸ್ಥೆಯ ಡೈರೆಕ್ಟರ್ ಪದವಿಯನ್ನು ಪಡೆದಿದ್ದರು. ಈ ಆರಂಭದ ದಿನಗಳಲ್ಲಿ ನಡೆದ ಒಂದು ಘಟನೆಯನ್ನು ಬೋಶಿ ತುಂಬ ಮಜವಾಗಿ ಹೇಳುತ್ತಿದ್ದರು. ಒಂದು ದಿನ ಬೆಳಿಗ್ಗೆ ಅವರು ಅಡುಗೆ ಕೋಣೆಯ ಲ್ಯಾಬನ್ನು ತೆರೆದು ಕೆಲಸವನ್ನು ಆರಂಭಿಸಿದಾಗ ಒಬ್ಬ ವ್ಯಕ್ತಿ ಒಂದು ಪತ್ರವನ್ನು ಹಿಡಿದುಕೊಂಡು ಅವರ ಬಳಿಗೆ ಬಂದರು. ಪತ್ರವನ್ನು ಓದಿ ಬೋಶಿ ಗಾಬರಿಯಾದರು. ಆಗಿನ ಬ್ರಿಟಿಷ್ ಗವರ್ನರ್ ಆಗಿದ್ದ ಲಾರ್ಡ್ ಲಿಟ್ಟನ್ ಬೋಶಿಯ ಸಂಶೋಧನೆಗಳನ್ನು ತಿಳಿಯುವ ಇಚ್ಛೆಯನ್ನು ವ್ಯಕ್ತಪಡಿಸಿ ಪತ್ರವನ್ನು ಕಳಿಸಿದ್ದರು. ಬೋಶಿ ಕೆಲವು ಕ್ಷಣ ಬೆಪ್ಪಾಗಿ ಕುಳಿತರು. ಏನು ಹೇಳುವುದೆಂದು ತೋರಲಿಲ್ಲ. 'ಇದೊಂದು ಚಿಕ್ಕ ಅಡುಗೆ ಕೋಣೆ, ಗವರ್ನರ್ ಬಂದರೆ ಎಲ್ಲಿ ಕೂಡಿಸಲಿ? ಒಂದೇ ಒಂದು ಕುರ್ಚಿಯೂ ಇಲ್ಲ. ನನ್ನ ಸ್ಟೂಲನ್ನೇ ಅವರಿಗೆ ಕೊಟ್ಟು ಟ್ರಂಕಿನ ಮೇಲೆ ನಾನು ಕುಳಿತುಕೊಳ್ಳುತ್ತೇನೆ... ನಾನೇನು ಅವರನ್ನು ಕರೆಯಲು ಹೋಗುತ್ತಿಲ್ಲ; ಅವರೇ ಬರುತ್ತೇನೆ ಎನ್ನುತ್ತಿದ್ದಾರೆ. ಬಂದರೆ ಬರಲಿ, ಏನು ಇದೆಯೋ ಅದನ್ನೇ ಕೊಡುತ್ತೇನೆ..' ನಂತರ ತಮ್ಮನ್ನು ನಿಗ್ರಹಿಸಿಕೊಂಡು ಗವರ್ನರ್‌ಗೆ ಒಂದು ಪತ್ರ ಬರೆದರು: ''..ದಯವಿಟ್ಟು ಸಣ್ಣ ಕಾರಿನಲ್ಲಿ ಬನ್ನಿ. ನನ್ನ ಮನೆ ಒಂದು ಗಲ್ಲಿಯ ರಸ್ತೆಯಲ್ಲಿದೆ. ದೊಡ್ಡ ಕಾರು ಒಳ ಬರಲು ಜಾಗವಿಲ್ಲ'' ಎಂದು ಸೂಚಿಸುವುದನ್ನು ಮರೆಯಲಿಲ್ಲ. ಗವರ್ನರ್ ಬರುವ ಮೊದಲು ಕೆಲವರು ಪೋಲೀಸರು ಬೋಶಿಯ ಮನೆಯಲ್ಲಿ ಹಾಜರಾದರು. ಮನೆಯ ಒಳಹೊರಗನ್ನು ಪರೀಕ್ಷಿಸಿದ ನಂತರ ಅವರು ಬೋಶಿಯನ್ನು ಕೇಳಿದರು, ''ಈ ಸಣ್ಣ ಲ್ಯಾಬೊರೇಟರಿಯಲ್ಲಿ ಏನನ್ನು ನೋಡಲು ಗವರ್ನರ್ ಬರುತ್ತಿದ್ದಾರೆ?'' ಅದಕ್ಕೆ ಬೋಶಿ, ''ಈ ಪ್ರಶ್ನೆಯನ್ನು ನೀವು ಗವರ್ನರ್‌ಗೆ ಹಾಕಿದರೇ ಒಳ್ಳೆಯದು'' ಎಂದರು.

ಗೊತ್ತು ಮಾಡಿದ ದಿನದಲ್ಲಿ ಗವರ್ನರ್ ಬಂದು, ಬೋಶಿಯೊಡನೆ ಒಂದು ಗಂಟೆ ಕುಳಿತು ಅವರ ಸಂಶೋಧನೆಯನ್ನು ಕುರಿತು ಮಾತನಾಡಿದರು. ''ನನ್ನ ದೇಶದ ಜನರಿಗೆ ಬೇಕಾಗಿರುವುದು ಅನ್ನ. ಮೊದಲು ಅವರ ಹೊಟ್ಟೆ ತುಂಬಲಿ. ನಂತರ ಧರ್ಮವನ್ನು ಬೋಧಿಸಿ'' ಎಂಬ ಸ್ವಾಮಿ ವಿವೇಕಾನಂದರ ಮಾತುಗಳಿಂದ ಪ್ರಭಾವಿತರಾದ ಬೋಶಿ, ಕೃಷಿಯ ಅಭಿವೃದ್ಧಿಗೆ ಸಸ್ಯವಿಜ್ಞಾನವನ್ನು ಹೇಗೆ ಉಪಯೋಗಿಸಿಕೊಳ್ಳಬಹುದೆಂದು ಅಧ್ಯಯನ ಮಾಡುತ್ತಿದ್ದರು. ಹೊರಡುವ ಮೊದಲು ಲಾರ್ಡ್ ಲಿಟ್ಟನ್ ಸರ್ಕಾರದಿಂದ ಹಣದ ಸಹಾಯ ಮಾಡುವುದಾಗಿ ಅವರಿಗೆ ಹೇಳಿದರು. ''ಸರ್ಕಾರದ ಎದುರು ಕೈ ಚಾಚಲೆ?'' ಎಂದು ಬೋಶಿ ಯೋಚಿಸಿದರು. ಆದರೆ ಮರುಕ್ಷಣವೇ ಅನ್ನಿಸಿತು, ''ಇಲ್ಲ, ನಾನು ಆರಂಭದಲ್ಲಿಯೇ ವಿವೇಕಾನಂದರಿಗೆ ಹೇಳಿಬಿಟ್ಟಿದ್ದೇನೆ, ಅವರ ಕೃಪೆಯೇ ನನ್ನ ಸಹಾಯವೆಂದು...'' ಬೋಶಿ ವಿನಯದಿಂದ ಗವರ್ನರಿಗೆ ಧನ್ಯವಾದಗಳನ್ನು ತಿಳಿಸಿ ಹೇಳಿದರು, ''ಇಲ್ಲ, ತತ್ಕಾಲಕ್ಕೆ ನನಗೆ ಹಣಕಾಸಿನ ಅಗತ್ಯವಿಲ್ಲ...''

ಲಾರ್ಡ್ ಲಿಟ್ಟನ್ ಬೋಶಿಯ ಅತ್ಯಂತ ಆತ್ಮೀಯ ಸ್ನೇಹಿತರಾದರು. ಬೋಶಿ ಇಂಗ್ಲೆಂಡಿಗೆ ಹೋಗಿದ್ದಾಗ ಲಿಟ್ಟನ್ ಅವರನ್ನು ತಮ್ಮ ಮನೆಗೆ ಆಮಂತ್ರಿಸಿದರು. ಆ ದಿನ ಮಾತನಾಡುವಾಗ ಲಿಟ್ಟನ್ ಭಾವಾವೇಶದಿಂದ ಹೇಳಿದರು ''ನಿನಗೆ ನೆನಪಿದೆಯೆ? ಮೊದಲ ಬಾರಿ ನಾವಿಬ್ಬರೂ ಭೇಟಿಯಾದ ದಿನ?... ಭಾರತದಲ್ಲಿ ಅದೇ ಮೊದಲ ಬಾರಿ ಒಬ್ಬ ಮನುಷ್ಯ ಮತ್ತೊಬ್ಬ ಮನುಷ್ಯನಿಂದ ಪಡೆಯುವ ಆತ್ಮೀಯತೆಯನ್ನು ನಾನು ಅನುಭವಿಸಿದೆ.''

ಆಲ್ಮೋರಾ

ಸಿಸ್ಟರ್ ಕ್ರಿಸ್ಟೀನ್ ಸ್ವಾಮಿ ವಿವೇಕಾನಂದರ ಶಿಷ್ಯೆ. ವಯಸ್ಸಾಗಿ ದುರ್ಬಲರಾಗಿದ್ದ ಅವರನ್ನು ಬೋಶಿ ತಮ್ಮ ಮನೆಗೆ ಕರೆತಂದು ನೋಡಿಕೊಳ್ಳುತ್ತಿದ್ದರು. ಕಲ್ಕತ್ತದ ಸುಡು ಬೇಸಿಗೆಯಲ್ಲಿ ಕ್ರಿಸ್ಟೀನ್ ತುಂಬ ಕಷ್ಟಪಡುತ್ತಿದ್ದುದನ್ನು ಕಂಡು ಜೋಸಿಫಿನ್ ಮ್ಯಾಕ್ಲೌಡ್ ಹಿಮಾಲಯದ ಆಲ್ಮೋರಾದಲ್ಲಿ ಒಂದು ಮನೆಯನ್ನು ನೋಡುವಂತೆ ಬೋಶಿಗೆ ಹೇಳಿದರು. ಲ್ಯಾಬೊರೇಟರಿ ಕೆಲಸ ದಿನದಿನಕ್ಕೆ ವೃದ್ಧಿಯಾಗುತ್ತಿತ್ತು. ಆಲ್ಮೋರಾ ಅದಕ್ಕೆ ಅತ್ಯಂತ ಉಪಯುಕ್ತ ಸ್ಥಳ. ಒಳ್ಳೆಯ ಹವಾಮಾನದಲ್ಲಿ ಸಸ್ಯಗಳನ್ನು ಬೆಳೆಸಿ ಸಂರಕ್ಷಿಸಲು ಜಾಗವೊಂದರ ಅಗತ್ಯವಿತ್ತು. ಸ್ವಾಮಿ ವಿವೇಕಾನಂದರ ಈ ಅನು



ಕುಂದನ್ ಹೌಸ್, ಆಲ್ಮೋರಾ

ಯಾಯಿಗಳ ಸಹಾಯದಿಂದಲೇ ಬೋಶಿ ಆಲ್ಮೋರಾದಲ್ಲಿ ಕುಂದನ್ ಹೌಸ್ ಎಂಬ ಮನೆಯನ್ನು ಬಾಡಿಗೆ ತೆಗೆದುಕೊಂಡರು. ದೊಡ್ಡ ಮನೆ ಹಾಗೂ ಸುತ್ತಲೂ ತೋಟವಿದ್ದು ಈ ಜಾಗ ಅತ್ಯಂತ ಮನೋಹರವಾಗಿತ್ತು. ೧೯೨೬ರಲ್ಲಿ ಕಲ್ಕತ್ತದ ಬಾಗ್‌ಬಜಾರಿನ ಮನೆಯಿಂದ ಲ್ಯಾಬೊರೇಟರಿಯನ್ನು ಸಂಪೂರ್ಣ ವಾಗಿ ಕುಂದನ್ ಹೌಸ್‌ಗೆ ಸ್ಥಳಾಂತರಿಸಲಾಯಿತು. ಸಿಸ್ಟರ್ ಕ್ರಿಸ್ಟೀನ್ ಆಲ್ಮೋರಾದ ಶಾಂತ ವಾತಾವರಣದಲ್ಲಿ ಪ್ರಫುಲ್ಲವಾಗಿ ಇರುತ್ತಿದ್ದರು. ಅವರ ಮನಸ್ಸು ಯಾವಾಗಲೂ ಧ್ಯಾನಮಗ್ನವಾಗಿರಲು ತವಕಿಸುತ್ತಿತ್ತು. ಈ ಸಮಯದಲ್ಲಿ ಬೋಶಿಗೆ ಗೆಟ್ರೂರ್ಡ್ ಎಮರ್‌ಸನ್ ಎಂಬ ಅಮೆರಿಕಾದ ಮಹಿಳೆಯೊಂದಿಗೆ ಪರಿಚಯವಾಯಿತು. ಈಕೆ ಭಾರತಪ್ರೇಮಿ. ಸಾಧು-ಸಂತರ ಬಗ್ಗೆ ಅಪಾರ ಗೌರವ ಉಳ್ಳವಳಾಗಿದ್ದಳು. ಚಿಕಾಗೋ ವಿಶ್ವವಿದ್ಯಾಲಯದಿಂದ ಡಿಗ್ರಿ ಪಡೆದಿದ್ದು, ಏಶಿಯಾ ಎಂಬ ಪತ್ರಿಕೆಯ ಸಂಪಾದಕರಾಗಿದ್ದರು. ಬಹುಬಾರಿ ಭಾರತಕ್ಕೆ ಬಂದ ಗೆಟ್ರೂರ್ಡ್, ತನ್ನ ಪತ್ರಿಕೆಯಲ್ಲಿ ಭಾರತದಲ್ಲಿ ವಿಭಿನ್ನ ಸಂಪ್ರದಾಯದ ಜನಗಳನ್ನು ಕುರಿತು ಲೇಖನಗಳನ್ನು ಬರೆಯುತ್ತಿದ್ದಳು. ಬೋಶಿ ಸಂನ್ಯಾಸಿಯಾಗುತ್ತಾರೆಂದು ಆಶಿಸಿದ್ದ ಸಿಸ್ಟರ್ ಕ್ರಿಸ್ಟೀನ್ ಮೊದಮೊದಲು ಅವರಿಬ್ಬರ ನಡುವಿನ ಒಡನಾಟವನ್ನು ಕಂಡು ರೇಗಿಕೊಂಡರೂ ಗೆಟ್ರೂರ್ಡಳಲ್ಲಿದ್ದ ಆಧ್ಯಾತ್ಮಿಕ ಒಲವನ್ನು, ನಮ್ರತೆಯನ್ನು ಗುರುತಿಸಿದ ಮೇಲೆ ಅವರ ಮನಸ್ಸು ನಿಧಾನವಾಗಿ ಕರಗಿತು. ಆಲ್ಮೋರಾದ ರಾಮಕೃಷ್ಣ ಕುಟೀರದ ಹಿರಿಯ ಸಂನ್ಯಾಸಿಗಳನೇಕರು ಆಗಾಗ ಕುಂದನ್ ಹೌಸ್‌ಗೆ ಬಂದು ಕ್ರಿಸ್ಟೀನ್ ಮತ್ತು ಬೋಶಿಯೊಡನೆ ಟೀ ಕುಡಿದು ಹೋಗುತ್ತಿದ್ದರು. ೧೯೨೮ರಲ್ಲಿ ಆರೋಗ್ಯ ತೀರ ಹಾಳಾಗಿದ್ದುದರಿಂದ ಕ್ರಿಸ್ಟೀನ್ ಅಮೆರಿಕಾಗೆ ಹಿಂದಿರುಗಿದರು. ೧೯೩೦ರ ಮಾರ್ಚ್ ೨೬ರಂದು ಅವರು ಅಲ್ಲೇ ತೀರಿಕೊಂಡರು. ೧೯೩೨ರ ನವೆಂಬರ್ ೨ರಂದು ಬೋಶಿ ಸೇನ್ ಗೆಟ್ರೂರ್ಡ್ ಎಮರ್‌ಸನ್‌ಳನ್ನು ವಿವಾಹವಾದರು. ರಾಮಕೃಷ್ಣ ಮಠದ ಅನೇಕ ಸಂನ್ಯಾಸಿಗಳು ಈ ಬಗ್ಗೆ ಅಸಮ್ಮತಿ ಮತ್ತು ವಿಸ್ಮಯಗಳನ್ನು ವ್ಯಕ್ತಪಡಿಸಿದರೂ, ಪ್ರಾಚೀನ ಋಷಿಗಳಂತೆ ಮನೋಭಾವವಿದ್ದ ಈ ದಂಪತಿಗಳನ್ನು ಕೊನೆಗೂ ಮೆಚ್ಚದೆ ಇರಲಾಗಲಿಲ್ಲ. *(ಮುಂದುವರಿಯುವುದು)*

ಆಧ್ಯಾತ್ಮಿಕ ಜೀವನದಲ್ಲಿ ಪ್ರಾಮಾಣಿಕತೆ



(ಸ್ವಾಮಿ ಶಿವಾನಂದರ ಉಪದೇಶಗಳು)

ಶಿಷ್ಯ : ''ಧ್ಯಾನ ಮಾಡುವಾಗ ಕೆಲವೊಮ್ಮೆ ಸುಲಭವಾಗಿ ಮನಸ್ಸು ಸ್ಥಿರವಾಗುವುದು. ಇತರ ದಿನಗಳಲ್ಲಿ ಅದು ಸಾವಿರ ವಿಷಯಗಳತ್ತ ಹರಿದು, ಅತ್ಯಂತ ಚಂಚಲವಾಗುವುದು. ಅಂಥ ವೇಳೆ ಏನು ಮಾಡಿದರೂ ಮನಸ್ಸನ್ನು ಹತೋಟಿಗೆ ತರಲಾಗುವುದಿಲ್ಲ. ಹೀಗೇಕಾಗುತ್ತದೆ, ಮಹಾರಾಜ್?''


ಸ್ವಾಮೀಜಿ: ''ಆರಂಭದಲ್ಲಿ ಎಲ್ಲರಿಗೂ ಹೀಗಾಗುತ್ತದೆ. ಅದಕ್ಕಾಗಿ ಕೊರಗಬೇಕಿಲ್ಲ. ನೀನು ಗೀತೆಯಲ್ಲಿ ಓದಿಲ್ಲವೆ? ಅರ್ಜುನನು ಕೃಷ್ಣನಿಗೆ ಕೇಳುತ್ತಾನೆ, 'ಮನಸ್ಸು ಚಂಚಲವೂ ಅಸ್ಥಿರವೂ ಆಗಿರುವಾಗ ಅದನ್ನು ನಿಗ್ರಹಿಸುವುದು ವಾಯುವಿನಂತೆ ಅತ್ಯಂತ ಕಠಿಣವಾಗಿದೆಯಲ್ಲ?' ಎಂದು. ಅದಕ್ಕೆ ಕೃಷ್ಣನ ಉತ್ತರ: 'ನಿಸ್ಸಂದೇಹವಾಗಿಯೂ ಅದು ಕಠಿಣ, ಓ ಅರ್ಜುನ! ಅಂಥ ಮನಸ್ಸನ್ನು ಅಭ್ಯಾಸದಿಂದಲೂ ವೈರಾಗ್ಯದಿಂದಲೂ ನಿಗ್ರಹಿಸಬೇಕು.' ಮನಸ್ಸು ಸ್ಥಿರವಾಗದಿದ್ದರೂ ಸರಿ, ಜಪ-ಧ್ಯಾನಗಳಲ್ಲಿ ನಿರಾಸಕ್ತಿಯುಂಟಾದರೂ ಸರಿ, ಅವುಗಳನ್ನು ನಿಲ್ಲಿಸಬೇಡ. ಅದಕ್ಕೆ ಬದಲಾಗಿ ನಿನ್ನ ಪ್ರಯತ್ನವನ್ನು ಹೆಚ್ಚಿಸು, ಬಿಟ್ಟುಕೊಡಬೇಡ. ನಿನ್ನ ಮನಸ್ಸು ಎಲ್ಲಿಗೆ ಅಲೆದಾಡುತ್ತಿದೆ ಎಂದು ಗಮನಿಸು. ಚಂಚಲವಾದ ಮನಸ್ಸು ವಿಷಯ-ವಸ್ತುಗಳ ಆಲೋಚನೆಗಳಲ್ಲಿ ಮೈಮರೆಯದ ಹಾಗಿ ಎಚ್ಚರ ವಹಿಸು. ಮತ್ತೆ ಮತ್ತೆ ಮನಸ್ಸನ್ನು ಎಳೆದು ತಂದು ಧ್ಯಾನ ಮಾಡುವ ವಸ್ತುವಿನ ಕಡೆಗೆ ಹರಿಸು. ನಿನ್ನ ಪ್ರಯತ್ನದಿಂದಲೇ ನಿನಗಿದು ಸಾಧ್ಯವಾಗದೆ ಹೋದರೆ, ಶ್ರೀರಾಮಕೃಷ್ಣರ ಮುಂದೆ ಹೋಗಿ ಅತ್ತು, ಕರೆದು ಪ್ರಾರ್ಥಿಸು. ಶ್ರೀರಾಮಕೃಷ್ಣರು ನನಗೆ ಒಂದು ಸಲ ಹೇಳಿದರು, 'ದೇವರ ಮುಂದೆ ಅತ್ತುಬಿಟ್ಟರೆ, ಆಗ ನಿನ್ನ ಮನಸ್ಸಿನ ಮಲಿನತೆಯೆಲ್ಲವೂ ತೊಳೆದು ಹೋಗುವುದು' ಎಂದು. ಅದನ್ನು ಕೇಳಿದ ನಂತರ ನಾನು ಪಂಚವಟಿಗೆ ಧ್ಯಾನ ಮಾಡಲು ಹೋದಾಗ ನನಗೆ ಜೋರಾಗಿ ಅಳು ಬಂತು. ಶ್ರೀರಾಮಕೃಷ್ಣರ ಮಾತುಗಳು ಬರೀ ಮಾತುಗಳಲ್ಲ, ಅವು ನಮ್ಮ ಆತ್ಮವನ್ನೇ ಎಚ್ಚರಿಸಿಬಿಡುತ್ತವೆ. ನಮ್ಮ ಗುರು ಮಹಾರಾಜರು 'ಅತ್ಯಂತ ಪರಿಶುದ್ಧರು, ಸ್ವಲ್ಪವೂ ಮಾಲಿನ್ಯದ ಸ್ಪರ್ಶವಾಗದವರು.' ಅವರನ್ನು ಕುರಿತು ಧ್ಯಾನಿಸುವುದೇ ಮನಸ್ಸನ್ನು ಹತೋಟಿಗೆ ತರಲು ಅತ್ಯುತ್ತಮವಾದ ಮಾರ್ಗ.''

*('**InThe Divine Realm**' ಗ್ರಂಥದಿಂದ, ಪು.೧೯೩-೯೪)*

ಶ್ರೀಮಾತೆ

ಮೂಲ ಬಂಗಾಳಿ : **ಆಶುತೋಷ್ ಮಿತ್ರ** ಅನುವಾದ : **ಸ್ವಾಮಿ ಜ್ಞಾನಯೋಗಾನಂದ**

ಭಾಗ ೧೨



ಶ್ರೀಮಾತೆ ಎಲ್ಲ ಭಕ್ತರ ಮನದಾಸೆಯನ್ನು ಪೂರೈಸಿದರು, ಯಾರೊಬ್ಬರನ್ನೂ ದೂರವಿಡಲಿಲ್ಲ. ಆದರೆ ಅವರು ಮಣ್ಣಿನ ವಿಗ್ರಹವಲ್ಲ; ಮಾನವ ದೇಹವನ್ನು ಧರಿಸಿದ್ದಾರೆ. ಹಾಗಾಗಿ ಮಾನವ ದೇಹದ ನಿಯಮಗಳನ್ನು ಅವರು ಪಾಲಿಸಲೇಬೇಕಲ್ಲ. ಮೊದಲನೆಯದಾಗಿ, ಜಯರಾಮಬಾಟಿಯಲ್ಲಿದ್ದಾಗಲೇ ಅವರ ದೇಹಾರೋಗ್ಯ ಚೆನ್ನಾಗಿರಲಿಲ್ಲ. ಈಗ ಸಪ್ತಮಿಯ ರಾತ್ರಿಯ ಬಳಿಕ ಅದು ಇನ್ನಷ್ಟು ಹದಗೆಟ್ಟಿತು.

ಇನ್ನೀಗ ಮಹಾಷ್ಟಮಿ. ಸಂಪ್ರದಾಯದ ಪ್ರಕಾರ ಅಂದು ದುರ್ಗಾಪೂಜೆಯ ಅತ್ಯಂತ ಶ್ರೇಷ್ಠ ದಿನ. ಬೆಳಗಿನ ಜಾವ ಬಹಳ ಮೊದಲಿನಿಂದಲೇ ಭಕ್ತರು ಬಲರಾಮ ಬಾಬುವಿನ ಮನೆಯಲ್ಲಿದ್ದ ಶ್ರೀಮಾತೆಯವರ ಬಳಿಗೆ ಬರಲಾರಂಭಿಸಿದರು. ಸ್ತ್ರೀ ಭಕ್ತೆಯರು, ಪುರುಷ ಭಕ್ತರು, ತ್ಯಾಗೀ ಭಕ್ತರು, ಗೃಹಸ್ಥ ಭಕ್ತರು — ಹೀಗೆ ಬಿಡುವಿಲ್ಲದೆ ಬರುತ್ತಿದ್ದರು. ಹೂವನ್ನು ದುಂಬಿಗಳು ಮುತ್ತುವಂತೆ ಅವರೆಲ್ಲ ಶ್ರೀಮಾತೆಯನ್ನು ಮುತ್ತುತ್ತಿದ್ದರು. ಅವರ ಚರಣ ಕಮಲಗಳಲ್ಲಿ ತಮ್ಮ ಭಕ್ತಿ-ಅರ್ಘ್ಯಗಳನ್ನರ್ಪಿಸಿ, ಅದರ ಸವಿ ಮಕರಂದನ್ನು ಸಂಗ್ರಹಿಸಿ ಕುಡಿಯಬೇಕೆಂಬುದೇ ಎಲ್ಲರ ಆಸೆ. ಗಿರೀಶ ಭವನದಲ್ಲೂ ಅದೇ ರೀತಿ ನಡೆಯಿತು. ಶ್ರೀಮಾತೆ ಅನಾರೋಗ್ಯದಿಂದಿದ್ದರೂ, ಅವರು ಸ್ವಲ್ಪವೂ ವ್ಯಥೆಪಡಲಿಲ್ಲ; ಭಕ್ತರ ಇಚ್ಛೆಯನ್ನು ಪೂರೈಸಲು ದೇಹವನ್ನೆಲ್ಲ ಬಟ್ಟೆಯಿಂದ ಹೊದ್ದುಕೊಂಡು ಅಚಲವಾಗಿ ನಿಂತು ಅವರ ಪೂಜೆಯನ್ನು ಸ್ವೀಕರಿಸಿದರು. ಹೀಗೆ ಇಡೀ ದಿನ ಶ್ರಮಪಟ್ಟದ್ದರಿಂದಾಗಿ ಅವರಿಗೆ ಜ್ವರ ಕಾಣಿಸಿಕೊಂಡು, ಅವರು ಮಲಗಿಬಿಟ್ಟರು. ಈಗಾಗಲೇ ಶಿಥಿಲಗೊಂಡಿರುವ ದೇಹ, ಅದರ ಮೇಲಿನಿಂದ ಅಷ್ಟೊಂದು ಶ್ರಮ — ಸಂಧಿಪೂಜೆಯ ಸಮಯದಲ್ಲಿ ಅವರು ಭಾಗವಹಿಸುವುದು ಸಾಧ್ಯವಿಲ್ಲವೆಂದು ನಿಶ್ಚಯವಾಯಿತು. ಗಿರೀಶ ಹಾಗೂ ಅವನ ಅಕ್ಕನಿಗೆ ಈ ವಿಷಯವನ್ನು ಹೇಳಿ ಕಳುಹಿಸಲಾಯಿತು. ಅವರಿಬ್ಬರೂ ಆತಂಕದಿಂದ ಶ್ರೀಮಾತೆಯವರನ್ನು ಪ್ರಾರ್ಥಿಸತೊಡಗಿದರು.

ಆ ವರ್ಷದ ಸಂಧಿಪೂಜೆ, ಮಧ್ಯರಾತ್ರಿ ಹೊತ್ತು ಬೇರೆ. ನಾವು ನಿದ್ರಿಸುತ್ತಿದ್ದೆವು. ಗೋಲಾಪ್ ಮಾ ನಿದ್ದೆ ಬಿಟ್ಟೆದ್ದು ಹೇಳಿದಳು, ''ಶ್ರೀಮಾತೆಯವರನ್ನು ಕರೆದುಕೊಂಡು ಹೋಗಬೇಕು. ಶ್ರೀಮಾತೆ ಹೋಗುತ್ತಾರಂತೆ — ಈಗ ಅವರ ಪರಿಸ್ಥಿತಿ ಸುಧಾರಿಸಿದೆ.''

ಬಲರಾಮ ಬಾಬುವಿನ ಮನೆಯ ಪಶ್ಚಿಮ ಭಾಗದಲ್ಲಿದ್ದ ಚಿಕ್ಕ ಬೀದಿಯ ಮೂಲಕ ಶ್ರೀಮಾತೆ ಹಾಗೂ ಅವರ ಬಳಗದವರನ್ನು ಕರೆದುಕೊಂಡು ಹೋದೆ. ಶ್ರೀಮಾತೆಯವರ ದೇಹದಲ್ಲಿ ತ್ರಾಣವಿಲ್ಲದಿದ್ದರೂ, ಅವರು ಗಿರೀಶನಿಗೋಸ್ಕರ ಅಲ್ಲಿಗೆ ಹೋಗಲು ದೃಢಸಂಕಲ್ಪ ಮಾಡಿದ್ದರು ಎಂಬುದಾಗಿ ದಾರಿಯಲ್ಲಿ ಕೇಳಿ ತಿಳಿದೆ. ಅವರ ದೇಹದಲ್ಲಿ ಚಲಿಸುವ ಶಕ್ತಿಯಿರಲಿಲ್ಲ, ಆದರೂ ಅವರು ಬಲವಂತವಾಗಿ ಅದನ್ನು ಚಲಿಸುವಂತೆ ಮಾಡುತ್ತಿದ್ದರು. ಶ್ರೀರಾಮಕೃಷ್ಣರ ವೀರಭಕ್ತನಾದ ಗಿರೀಶಚಂದ್ರನ ಮರ್ಯಾದೆಯನ್ನು ಕಾಪಾಡುವುದಕ್ಕಾಗಿ ಶ್ರೀಮಾತೆ ಬಹಳ ಕಷ್ಟದಿಂದ ಓಡಾಡಿದರು. ಗಿರೀಶ ಭವನದಲ್ಲಿ ಬಾಗಿಲು, ಕಿಟಕಿಗಳನ್ನೆಲ್ಲ ಹಾಕಿದ್ದರು. ಅವರನ್ನು ಬೇಡಿಕೊಂಡು, ಕಿಟಕಿಬಾಗಿಲುಗಳನ್ನು ತೆರೆಯುವ ಸಲುವಾಗಿ ನಾನು ಪ್ರಧಾನದ್ವಾರದ ಮೂಲಕ ಒಳಹೋಕ್ಕು ನೋಡು ವಷ್ಟರಲ್ಲಿ ಶ್ರೀಮಾತೆ ಬಾಗಿಲ ಬಳಿ ನಿಂತು ಜೋರಾಗಿ ಹೇಳಿದರು, ''ನಾನು ಬಂದುಬಿಟ್ಟೆ!'' ಎಂಬುದಾಗಿ. ಗಿರೀಶ ಉತ್ಕಂಠೆಯಿಂದ ಬಾಗಿಲು ತೆರೆದುಕೊಟ್ಟ, ಅದರೊಂದಿಗೆ ಮನೆಯಲ್ಲೆಲ್ಲ ಗದ್ದಲವೆದ್ದಿತು, 'ಶ್ರೀಮಾತೆ ಬಂದುಬಿಟ್ಟರು, ಶ್ರೀಮಾತೆ ಬಂದುಬಿಟ್ಟರು!' ಎಂದು. ಗಿರೀಶಚಂದ್ರ ಆನಂದದಿಂದ ಭಾವವಿಹ್ವಲನಾದ. ಅಂದು ರಾತ್ರಿ ಕೂಡ ಭಕ್ತರ ಪೂಜೆ, ಪ್ರಣಾಮಗಳಿಗೆ ಕೊನೆಯಿರಲಿಲ್ಲ. ಹೀಗೆ ನವಮಿ, ದಶಮಿ ಕಳೆದವು. ಮಹಾಪೂಜೆ ಈ ರೀತಿ ಸಾಂಗವಾಗಿ ನೆರವೇರಿತು. ಇತ್ತ ಭಕ್ತವತ್ಸಲೆಯಾದ ಶ್ರೀಮಾತೆಯವರ ದೇಹ ಭಕ್ತಜನರಿಗೋಸ್ಕರ

ಸ್ವಲ್ಪಸ್ವಲ್ಪವೇ ಕ್ಷಯಿಸತೊಡಗಿತು. ಈ ರೀತಿ ಭಕ್ತರ ಗದ್ದಲದಲ್ಲಿ ಓಡಾಡಿ ಅವರಿಗೆ ಅಭ್ಯಾಸವಿರಲಿಲ್ಲ. ಅವರು ಕಲ್ಕತ್ತೆಯಿಂದ ಮರಳಿ ಹೋಗುವ ಬಯಕೆಯನ್ನು ವ್ಯಕ್ತ ಪಡಿಸಿದರು. ಆದರೆ ಅವರು ಬಯಸಿದ ಮಾತ್ರಕ್ಕೇ ಕೆಲಸ ಕೈಗೂಡ ದಲ್ಲ. ಅವರು ಭಕ್ತರಿಗೆ ಸೇರಿದವರು. ಭಕ್ತರ ಸಮ್ಮತಿಯೂ ಬೇಕು. ಭಕ್ತರ ಸಮ್ಮತಿ ಪಡೆಯಲು ಕೆಲವು ದಿನ ಬೇಕಾಯಿತು.

ಕಾಳೀಪೂಜೆಯ ನಂತರವೇ ಹೊರಡಲು ಅವರಿಗೆ ಸಾಧ್ಯ ವಾಯಿತು. ಶ್ರೀಮಾತೆಯವರು ಹೊರಡುವ ದಿನ ನಿಶ್ಚಯವಾದ ಕೂಡಲೇ ಕಾಳೀಮಾವನಿಗೆ ಒಂದರ ಮೇಲೆ ಇನ್ನೊಂದು ಪತ್ರ ಬರೆಯಲಾಯಿತು. ಶ್ರೀಮಾತೆ ಮರಳುವ ದಿನದಂದು ಊರಿನ ಜನರನ್ನು ಹಾಗೂ ಪಲ್ಲಕ್ಕಿ ಸಿಕ್ಕಿದರೆ ಪಲ್ಲಕ್ಕಿಯೊಂದಿಗೆ, ದೇಶಡಾ ಗ್ರಾಮದಲ್ಲಿ ಮೊದಲೇ ಅವರು ತಯಾರಿರಬೇಕೆಂದು ಆ ಪತ್ರ ದಲ್ಲಿ ನಿರ್ದೇಶಿಸಲಾಯಿತು. ಶ್ರೀಮಾತೆ ಸುಲಭವಾಗಿ ಹೋಗಿ ತಲುಪುವಂತೆ, ಯಾವುದೇ ತೊಂದರೆಯಾಗದಂತೆ ವ್ಯವಸ್ಥೆ ಮಾಡಲು ಬರೆದು ತಿಳಿಸಲಾಗಿತ್ತು. ಒಂದೇ ವಿಷಯವಿರುವ ಎರಡು ಪತ್ರಗಳನ್ನು ಎರಡು ದಿನಗಳಲ್ಲಿ ಕಳುಹಿಸಿದ್ದೇಕೆಂದರೆ, ಕಾಳೀಮಾವನಿಗೆ ಕಳುಹಿಸಿದ ಪತ್ರ ಏನೋ ಕಾರಣದಿಂದ ತಲು ಪದೆ ಹೋದರೆ, ಇನ್ನೊಂದಾದರೂ ತಲುಪಬಹುದಲ್ಲ— ಎಂದು.

ಇರಲಿ; ಯಥಾಸಮಯಕ್ಕೆ ಹೊರಟು , ವಿಷ್ಣುಪುರ ಹಾಗೂ ಕೊತುಲ್‌ಪುರ ಮೂಲಕ ದೇಶಡಾ ಗ್ರಾಮವನ್ನು ದಾಟಿ, ಬಯ ಲಿಗೆ ಬಂದಾಗ ಸೂರ್ಯಾಸ್ತವಾಗಿತ್ತು. ಮೊದಲನೆಯದಾಗಿ, ಶ್ರೀಮಾತೆಯವರ ಆರೋಗ್ಯ ಅತ್ಯಂತ ಕೆಟ್ಟುಹೋಗಿತ್ತು; ಇನ್ನು ತಮ್ಮಂದಿರ ಸಂಸಾರದ ನಡುವೆ ಇದ್ದುಬಿಟ್ಟರೆ ಅವರಿಗೆ ಇನ್ನಷ್ಟು ಪರಿಶ್ರಮವುಂಟಾಗುವುದು. ಈ ಕಾರಣಗಳಿಂದ ಅವರ ಸೇವೆಗಾಗಿ ಈ ಬಾರಿ ಗೋಲಾಪ್ ಮಾ ಹಾಗೂ ಕುಸುಮ ಬಂದಿದ್ದರು. ವಿಷ್ಣುಪುರದಿಂದ ಎತ್ತಿನ ಗಾಡಿಯಲ್ಲೇ ಎಲ್ಲರೂ ದೇಶಡಾದ ವರೆಗೆ ಹೋಗಿದ್ದೆವು.

ದೇಶಡಾದ ಬಯಲಿಗೆ ಹೋಗಿ ನೋಡಿದಾಗ, ‘ಕಾಕಸ್ಯ ಪರಿ ವೇದನಾ’ ಎಂಬಂತಾಯಿತು. ಪಲ್ಲಕ್ಕಿಯ ವಿಷಯ ಹಾಗಿರಲಿ, ಕಾಳೀಮಾವನೂ ಕಾಣಿಸಲಿಲ್ಲ; ಹೆಚ್ಚಿನ ಆಳುಗಳೂ (ಸೇವಾ ಕಾರ್ಯ ಮಾಡುವವರು) ಕಾಣಸಿಗಲಿಲ್ಲ. ತೋಟದ ದಪ್ಪದ ಆರು ಮಂದಿಯಲ್ಲಿ ಒಬ್ಬನೂ ಇರಲಿಲ್ಲ. ಅಲ್ಲಿಂದ ಎತ್ತಿನ ಗಾಡಿ ಯಲ್ಲೇ ಹೋಗಬೇಕಿದ್ದರೆ ಸಿಹೋರ್ ಮೂಲಕ ಸುತ್ತಿ ಬಳಸಿ ಹೋಗಬೇಕಿತ್ತು. ರಸ್ತೆಯಾದರೋ ತುಂಬಾ ಕೆಟ್ಟುಹೋಗಿತ್ತು. ಜೋರಾಗಿ ಅಲುಗಾಟ ಅನಿವಾರ್ಯ. ಅದರ ಮೂಲಕ ಶ್ರೀಮಾತೆ ಯವರನ್ನು ಕರೆದುಕೊಂಡು ಹೋಗುವುದಂತೂ ಉಚಿತವಲ್ಲ. ಅವರಿಗೆ ತುಂಬಾ ಕಷ್ಟವಾಗುವುದು. ಅವರೂ ಅದಕ್ಕೆ ಒಪ್ಪಲಿಲ್ಲ. ಕೊನೆಗೆ ಎಲ್ಲರಿಗೂ ಒಪ್ಪಿಗೆಯಾದದ್ದು ಏನೆಂದರೆ, ಗಾಡಿಗಳನ್ನು ಗೋಲಾಪ್ ಮಾ ಹಾಗೂ ಇವರ ಜೊತೆಗೆ, ಉಳಿದೆಲ್ಲ ಸಾಮಾನು ಗಳೊಂದಿಗೆ ಸಿಹೋರ್ ಮೂಲಕ ಕಳುಹಿಸುವುದು; ನಾವು ಮನೆಗೆ ಹೋಗಿ ಕೆಲಸದವರನ್ನು ಕಳುಹಿಸಿಕೊಡುವುದು. ಅವರು ಸಿಹೋರ್‌ಗೆ ಹೋಗಿ ಗಾಡಿಗಳೊಂದಿಗೆ ಮರಳುವುದು ಎಂದು ನಿರ್ಧಾರವಾಯಿತು. ದೇಶಡಾದ ಬಯಲನ್ನು ಹಾಗೂ ನದಿ ಯಾಚೆಗೆ ಜಯರಾಮಬಾಟಿಯ ಸಣ್ಣ ಬಯಲನ್ನು ಶ್ರೀಮಾತೆ ಕಾಲುನಡಿಗೆಯ ಮೂಲಕವೇ ದಾಟಬಹುದು. ಶ್ರೀಮಾತೆಯವರ ಠಾಕೂರರಿಗೋಸ್ಕರ (ಅವರ ಭಾವಚಿತ್ರ) ಒಂದು ಕಪ್ಪುಬಣ್ಣದ, ಸಣ್ಣ ಟಿನ್ನಿನ ಬಾಕ್ಸ್ ಇತ್ತು. ಎಲ್ಲಾದರೂ ಪ್ರಯಾಣ ಮಾಡುವ ಸಂದರ್ಭದಲ್ಲಿ ಅದರೊಳಗೆ ಠಾಕೂರ್, ಗೋಪಾಲ, ಸಿಂಹ ವಾಹಿನಿಯ ಮಣ್ಣಿನ ಪೊಟ್ಟಣ, ಜಪದ ಮಾಲೆ ಇತ್ಯಾದಿಗಳನ್ನು ಇಟ್ಟು, ಆಟಿಕೆಯ ಮಂಚದಂತೆ ಒಂದು ಸಣ್ಣ ಮಂಚ – ಅದರಲ್ಲಿ ಠಾಕೂರರ ಹಾಸಿಗೆ ಇವನ್ನೆಲ್ಲ ಒಯ್ಯುತ್ತಿದ್ದರು.

ಗಾಡಿಗಳನ್ನು ಮೊದಲೇ ಹೇಳಿದಂತೆ ಕಳುಹಿಸಿಕೊಟ್ಟು, ಶ್ರೀಮಾತೆಯವರ ಆದೇಶದಂತೆ ಠಾಕೂರ್ ಹಾಗೂ ರಾಧು ಇವರನ್ನು ನಾನು ಹೊತ್ತುಕೊಂಡು ಹೊರಟೆ. ಶ್ರೀಮಾತೆ ಒಬ್ಬರೇ ನಡೆಯುತ್ತ ಹೋಗಬಲ್ಲರು ಎಂದು ಭಾವಿಸಿಕೊಂಡು, ರಾಧು ವನ್ನು ಹೆಗಲಲ್ಲಿ ಹೊತ್ತುಕೊಂಡು, ಠಾಕೂರರ ಬಾಕ್ಸ್ ಹಾಗೂ ಮಂಚವನ್ನು ಇನ್ನೊಂದು ಕೈಯಲ್ಲಿಟ್ಟುಕೊಂಡು, ಮತ್ತೊಂದು ಕೈಯಲ್ಲಿ ಶ್ರೀಮಾತೆಯವರನ್ನು ಆಧರಿಸಿ ಹಿಡಿದುಕೊಂಡು ನಾನು ಹೊರಟೆ. ಸಣ್ಣತ್ತೆ ಹಿಂದಿನಿಂದ ನಡೆಯತೊಡಗಿದರು. ರಸ್ತೆ ಎಲ್ಲ ರಿಗೂ ಚೆನ್ನಾಗಿ ಗೊತ್ತಿತ್ತು, ವಿಶೇಷವಾಗಿ ಸಣ್ಣತ್ತೆಗೆ. ಸ್ವಲ್ಪ ದೂರ ಹೋಗುವಷ್ಟರಲ್ಲೇ ಆಕೆ, ''ಈ ದಾರಿ ಎಲ್ಲಿಗೆ ಹೋಗುತ್ತದೆ? ಈ ದಾರಿಯಲ್ಲೇ ಬಾ'' ಎನ್ನತೊಡಗಿದಳು. ಮಾವ ಬಾರದೆ ಇದ್ದು ದಕ್ಕೆ ಅಥವಾ ಜನರನ್ನು ಕಳುಹಿಸದೆ ಇದ್ದುದಕ್ಕೆ ಶ್ರೀಮಾತೆ ತುಂಬಾ ಕೋಪಿಸಿಕೊಂಡಿದ್ದರು. ಅದರಿಂದ ಅವರು ಅನ್ಯಮನಸ್ಕರಾಗಿ ದ್ದರು. ಅವರೆಂದರು, ''ನಿಜ, ಆ ಕಡೆಗೇ ಹೋಗು. ಸಣ್ಣತ್ತೆಗೆ ಈ ದಾರಿ ಎಲ್ಲ ಗೊತ್ತು. ಅವಳಂತೂ ಬಯಲೆಲ್ಲ ಓಡಾಡುತ್ತಿರು ತ್ತಾಳೆ.'' ಆ ದಾರಿ ನನಗೂ ಚೆನ್ನಾಗಿ ಗೊತ್ತಿತ್ತು. ಆದರೂ ಆಗ ನನ್ನ ಬುದ್ಧಿ ಕೆಲಸ ಮಾಡದೆ, ಅವರು ತೋರಿಸಿಕೊಟ್ಟ ದಾರಿಯಲ್ಲೇ ನಡೆದೆ. ಪರಿಣಾಮವಾಗಿ, ನದೀತೀರದ ಘಾಟ್ ಇಲ್ಲದಲ್ಲಿ , ಇಳಿಯಲಾಗದ ಜಾಗಕ್ಕೆ ಬಂದು ತಲುಪಿದೆವು. ಆಗ ಬೆಳಕೂ ಇರಲಿಲ್ಲ, ಕತ್ತಲಲ್ಲಿ ಎಲ್ಲಿಗೆ ಬಂದುಬಿಟ್ಟೆವು ಎಂದೂ ತಿಳಿಯಲಿಲ್ಲ.

ಶ್ರೀಮಾತೆ ಕೋಪಗೊಂಡು ಬಯ್ಯತೊಡಗಿದರು. ಆಗ ನಾನಂದೆ, ''ನೀವು ಇಲ್ಲೇ ಸ್ವಲ್ಪ ಇರಿ, ನಾನು ನದಿಯ ದಂಡೆ ಯಲ್ಲೇ ಹೋಗಿ ಘಾಟ್ ಎಲ್ಲಿದೆ ಎಂದು ನೋಡಿ ಬರುತ್ತೇನೆ. ಆಮೇಲೆ ನಿಮ್ಮನ್ನು ಕರೆದುಕೊಂಡು ಹೋಗುತ್ತೇನೆ.'' ಅದಕ್ಕೆ ಒಪ್ಪದೆ ಶ್ರೀಮಾತೆ, ''ಗೊತ್ತುಗುರಿಯಿಲ್ಲದ ಬಯಲಲ್ಲಿ ನಾವು ಹೇಗೆ ನಿಲ್ಲಬೇಕು? ನೀನು ಹೋಗಬೇಡ'' ಎಂದರು. ಅನಂತರ ಅವರು ಇನ್ನಿಲ್ಲದಂತೆ ಬಯ್ಯತೊಡಗಿದರು. ಮನೆ ತಲುಪುವ ವರೆಗೂ ಬಯ್ಯುತ್ತಲೇ ಇದ್ದರು. ಅಷ್ಟು ದೀರ್ಘಕಾಲ ಅವರು ಬೈದದ್ದನ್ನು ನಾನೆಂದೂ ನೋಡಿಲ್ಲ.

ಇರಲಿ, ಆ ಜಾಗದಲ್ಲೇ ನದಿಯನ್ನು ದಾಟಿದೆವು. ನದಿಯಲ್ಲಿ ನೀರಿರಲಿಲ್ಲ ಎಂದರೂ ಸರಿಯೆ. ನದಿ ದಾಟಿ ನಡೆಯತೊಡಗಿದೆವು. ಆದರೆ ನಾವು ಜಯರಾಮಬಾಟಿಯ ಕಡೆಗೆ ಹೋಗುತ್ತಿದ್ದೆವೋ, ಅಥವಾ ಶಿಹೋರ್ ಕಡೆಗೋ ಎಂದು ಗೊತ್ತಾಗಲಿಲ್ಲ. ಶ್ರೀಮಾತೆಯವರಿಗೆ ನಡೆಯುವುದು ಕಷ್ಟವಾಗುತ್ತಿತ್ತು. ನಡೆಯುತ್ತಾ ನಾನು ಎಷ್ಟೊಂದು ಬೈಗುಳ ತಿಂದೆ!

''ನೀನೇಕೆ ಗಂಡು ಹುಡುಗನಾಗಿ ಹುಟ್ಟಿದೆ? ನಮ್ಮ ಮಾತನ್ನೇಕೆ ಕೇಳಿದೆ? ನೀನು ಹುಡುಗಿಯಾಗಿದ್ದರೇ ಚೆನ್ನಾಗಿತ್ತು'' ಇತ್ಯಾದಿ. ಶ್ರೀಮಾತೆಯವರ ಬೈಗುಳದಿಂದ ಶಿಷ್ಯಂದಿರಿಗೆ ಏನೂ ಹಾನಿಯಾಗದು. ಅದು ಅವರ ಪಾಲಿಗೆ ಮಂಗಳಕರವೇ. ಅವರ ಮನಸ್ಸು ಬೈಗುಳದತ್ತ ಇರುತ್ತಿರಲೇ ಇಲ್ಲ, ತಮ್ಮ ಕಷ್ಟದ ಕಡೆಗೆ ಇತ್ತು.

ಹೀಗೆ ಮುಂದುವರಿಯುತ್ತಿರುವಾಗ ದೂರದಲ್ಲೊಂದು ಬೆಳಕಿನ ರೇಖೆ ಕಾಣಿಸಿಕೊಂಡಿತು. ಎಲ್ಲರೂ ಕೂಗಿ ಕರೆಯತೊಡಗಿದೆವು: ''ಯಾರದು ಬೆಳಕು ಬೀರುತ್ತಿದ್ದೀರಿ? ಇಲ್ಲಿ ನಮ್ಮ ಕಡೆಗೆ ತುಸು ತೋರಿಸಿ — ನಮಗೆ ದಾರಿ ತಪ್ಪಿದೆ!'' ಬೆಳಕು ನಮ್ಮ ಕಡೆಗೇ ಬಂತು. ಶ್ರೀಮಾತೆ ಕೇಳಿದರು, ''ಯಾರು ನೀನು?'' ದೀಪವನ್ನು ಕೈಯಲ್ಲಿ ಹಿಡಿದಿದ್ದ ಹೆಂಗಸು ಶ್ರೀಮಾತೆಯವರನ್ನು ಗುರುತಿಸಿ, ''ಯಾರು, ಶಾರು (ಶಾರದೆ) ಅಲ್ಲವೆ?''ಎಂದು ಕೇಳಿದಳು. ಶ್ರೀಮಾತೆ, ''ಯಾರು ಆಶುವಿನ ತಾಯಿಯೆ?'' ಎಂದು ಕೇಳಿದರು. ಆಶುವಿನ ತಾಯಿ ಶ್ರೀಮಾತೆಗೆ ಪ್ರಣಾಮ ಮಾಡಿ, ''ನೀವು ಮಕ್ಕಳು ಸರಿಯಾದ ದಾರಿಯಲ್ಲೇ ಬಂದಿದ್ದೀರಿ. ಆದರೆ ಸ್ವಲ್ಪ ಸುತ್ತಿಕೊಂಡು ಬಂದಿದ್ದೀರಿ ಅಷ್ಟೆ. ಅದಕ್ಕೇ ಊರ ಹೊರಗೆ ಬಂದು ತಲುಪಿಬಿಟ್ಟಿರಿ'' ಎಂದಳು. ಅವಳು ದೀಪವನ್ನು ಕೈಯಲ್ಲಿ ಹಿಡಿದು, ದಾರಿ ತೋರಿಸಿಕೊಟ್ಟು ಹೋದಳು. ಎರಡು ಮೂರು ನಿಮಿಷಗಳೊಳಗಾಗಿ ಊರನ್ನು ಸೇರಿದೆವು.

ಮನೆ ತಲುಪಿದ ಕೂಡಲೇ ಶ್ರೀಮಾತೆ ತಮ್ಮನ ಮಕ್ಕಳ ಬಳಿ ನೀರು ಕೇಳಿದರು. ಹೊರಜಗಲಿಯಲ್ಲಿ ಕುಳಿತು ಒಂದು ಲೋಟ ನೀರು ಕುಡಿದರು. ಗಾಡಿಗಳನ್ನು ಕರೆತರಲು ಕೆಲಸದವರನ್ನು ಕಳುಹಿಸಿ, ಕಾಳೀಮಾವನನ್ನು ಬಯ್ಯಲಾರಂಭಿಸಿದರು. ಕಾಳೀಮಾವ ಪತ್ರ ತಲುಪಿದ್ದಾಗಿ ಒಪ್ಪಿಕೊಂಡರು; ಕೆಲಸದವರನ್ನು ಕಳುಹಿಸದೆ ಇದ್ದುದಕ್ಕೆ ಏನೇನೋ ನೆಪ ಹೇಳಿದರು. ಪಲ್ಲಕ್ಕಿ ಸಿಗಲಿಲ್ಲವೆಂದರು. ಒಂದು ಗಂಟೆಯೊಳಗಾಗಿ ಕೆಲಸದವರು ಗಾಡಿಗಳನ್ನು ಕರೆದುಕೊಂಡು ಬಂದರು. ಅಷ್ಟರಲ್ಲಿ ಶ್ರೀಮಾತೆ ತುಸು ಸುಧಾರಿಸಿಕೊಂಡು, 'ಶಿಷ್ಯನಿಗೆ ಬೈದುಬಿಟ್ಟೆನಲ್ಲಾ' ಎಂದು ಭಾವಿಸಿ, ನನ್ನ ತಲೆಯ ಮೇಲೆ ಕೈಯಾಡಿಸತೊಡಗಿದರು. ನಾನು ಅವರ ಪಾದ ಧೂಳಿಯನ್ನು ಹಣೆಯಲ್ಲಿ ಧರಿಸಿಕೊಂಡೆ.

ಒಂದು ದಿನ ಗೋಲಾಪ್ ಮಾ ಶ್ರೀಮಾತೆಯವರ ಬಳಿ ಕುಳಿತುಕೊಂಡು ಶಾರದಾ ಮಹಾರಾಜರ ವಿಷಯವಾಗಿ ಕತೆ ಹೇಳುತ್ತಿದ್ದರು: ''ಯೋಗಿನ್ (ಯೋಗಿನ್ ಮಾ) ಒಂದು ಸಲ 'ಉದ್ಬೋಧನ'ಕ್ಕಾಗಿ ತುಂಬ ಖಾರವಿರುವ ಮೆಣಸಿನಕಾಯಿ ತರಲು ಶಾರದನಿಗೆ ಹೇಳಿದಳು. ಅವನು ಬಾಗ್‌ಬಜಾರಿನಿಂದ ಆರಂಭಿಸಿ, ಎಲ್ಲ ಅಂಗಡಿಗಳಿಗೂ ಹೋಗಿ ಮೆಣಸು ತಿಂದು ರುಚಿ ನೋಡತೊಡಗಿದ — ಖಾರವಿದೆಯೇ ಇಲ್ಲವೇ ಅಂತ. ಹೀಗೆ ತಿಂದು ತಿಂದು ಖಾರವಾದ ಮೆಣಸಿನಕಾಯಿ ಸಿಗದಿದ್ದಾಗ ಬಡೋಬಜಾರಿಗೆ ಹೋದ. ಅಲ್ಲಿ ಖಾರವಾದ ಮೆಣಸು ಸಿಕ್ಕಿತು, ಎರಡಾಣೆಗೆ ಅದನ್ನು ಕೊಂಡು ತಂದ. ಕೂಡಲೇ ಅವನ ನಾಲಿಗೆಯಲ್ಲಿ ಗುಳ್ಳೆಯೆದ್ದಿತು. ಅಬ್ಬಾ, ಏನು ಗುರುಭಕ್ತಿ! ''

ಒಂದು ದಿನ ಶ್ರೀಮಾತೆ ಸ್ನಾನ ಮುಗಿಸಿ, ಕೊಡದಲ್ಲಿ ನೀರು ತುಂಬಿ ತಮ್ಮ ಮನೆಯ ಹೊರಜಗುಲಿಯಲ್ಲಿಟ್ಟರು. ಅದೇಕೆಂದು ಕೇಳಿದಾಗ ತಿಳಿಯಿತು, ಇತರ ಹುಡುಗಿಯರಂತೆ ಅವರೂ ಚಿಕ್ಕ ವಯಸ್ಸಿನಲ್ಲಿ ಕೊಡವನ್ನು ಹಿಡಿದುಕೊಂಡು ಈಜಾಡುವುದನ್ನು ಕಲಿತಿದ್ದರಂತೆ.

ವೃಂದಾವನದಿಂದ ಶ್ರೀಮಾತೆ ಹಿತ್ತಾಳೆಯ ಒಂದು ಗೋಪಾಲನ ವಿಗ್ರಹವನ್ನು ತಂದಿದ್ದರು. ನಾವು ಈ ವಿಗ್ರಹವನ್ನು ಶ್ರೀಮಾತೆಯವರ ಠಾಕೂರರ ಚಿತ್ರವಿಟ್ಟಿರುತ್ತಿದ್ದ ಸಿಂಹಾಸನದಲ್ಲಿ ಪ್ರತಿನಿತ್ಯವೂ ನೋಡುತ್ತಿದ್ದೆವು. ಒಂದು ದಿನ ಈ ಗೋಪಾಲನ ವಿಷಯವಾಗಿ ಏನು ಹೇಳಿದರೋ ಅದನ್ನಿಲ್ಲಿ ನೀಡುತ್ತಿದ್ದೇನೆ: ''ಮೊದಲು ಅದನ್ನು ಹಾಗೇ ಇಟ್ಟುಬಿಟ್ಟಿದ್ದೆ. ಒಂದು ದಿನ ಮಲಗಿದ್ದೆ, ನೋಡುತ್ತಿದ್ದಂತೆ ಗೋಪಾಲ ತೆವಳುತ್ತ ಮಂಚದ ಬಳಿಗೆ ಬಂದು, 'ನನ್ನನ್ನು ಕರೆದುಕೊಂಡು ಬಂದೆ, ಹಾಗೇ ಬಿಸಾಡಿ ಬಿಟ್ಟಿದ್ದೀಯೆ, ನನಗೆ ಹಸಿವಾಗದೆ? ತಿನ್ನಲು ಕೊಡಲಾರೆಯಾ?' ಎಂದು ಹೇಳಿದ. ಅದನ್ನು ಕೇಳಿ ನಾನೆಂದೆ, 'ಇಲ್ಲ ಮಗೂ, ತಿನ್ನಲು ಕೊಡುತ್ತೇನೆ, ಇಲ್ಲವೆ ಮತ್ತೆ?' ಆ ಬಳಿಕ ಅವನಿಗೂ ತಿನ್ನಲು ಕೊಡಬೇಕಾಗಿ ಬಂತು.''

ಸ್ವಾಮೀಜಿಯವರ ಮೂರು ಜನ ವಿದೇಶೀ ಮಹಿಳೆಯರು ಶ್ರೀಮಾತೆಗೆ ಅಮೆರಿಕಾದಿಂದ ಪತ್ರ ಬರೆಯುತ್ತಿದ್ದರು. ಕವರಿನ ಮೇಲೆ ನನ್ನ ಈಗಿನ ಹೆಸರು ಹಾಗೂ ವಿಳಾಸ ಬರೆದು, ಒಳಗೆ ಶ್ರೀಮಾತೆಯವರನ್ನು ಸಂಬೋಧಿಸಿ ಪತ್ರ ಬರೆಯುತ್ತಿದ್ದರು. ನಾನು ಅದನ್ನು ಅನುವಾದ ಮಾಡಿ ಶ್ರೀಮಾತೆ ಜಯರಾಮಬಾಟಿಯಲ್ಲಿದ್ದರೆ ಅಲ್ಲಿಗೆ ಕಳುಹಿಸುತ್ತಿದ್ದೆ; ಕಲ್ಕತ್ತೆಯಲ್ಲಿದ್ದರೆ ಅವರಿಗೆ ಓದಿ ಹೇಳುತ್ತಿದ್ದೆ. ಶ್ರೀಮಾತೆ ಹೇಗೆ ಉತ್ತರ ಬರೆಯಲು ಹೇಳುತ್ತಿದ್ದರೋ ಹಾಗೆ ಉತ್ತರ ಬರೆಯುತ್ತಿದ್ದೆ.

ಶ್ರೀಮಾತೆಯವರ ಇಂಥ ಒಂದು ಪತ್ರದ ಮಾದರಿಯನ್ನು ಇಲ್ಲಿ ಉದ್ಧರಿಸುತ್ತಿದ್ದೇನೆ. ಇದನ್ನು ಹೇಳುವುದರ ಉದ್ದೇಶವೇನೆಂದರೆ, ಶ್ರೀಮಾತೆ ಆಗ ಜಯರಾಮಬಾಟಿಯಲ್ಲಿದ್ದರು; ನಾನು ಕಲ್ಕತ್ತೆಯಲ್ಲಿದ್ದೆ:

''ಮಗೂ ಆಶು, ನೀನು ದೇವಮಾತಾಗೆ (ವಿದೇಶಿ ಮಹಿಳೆ)[೧] ನನ್ನ ಆಶೀರ್ವಾದವನ್ನು ತಿಳಿಸು. ಹಾಗೇ ನನಗೆ ಶ್ರೀಗಂಧದ ಬಾಕ್ಸನ್ನು ಕೊಟ್ಟಿದ್ದ (ವಿದೇಶಿ ಮಹಿಳೆ) ಆಕೆಗೂ[೨] ನನ್ನ ಆಶೀರ್ವಾದ ತಿಳಿಸು. ತಾಯಿ ನಿಮ್ಮನ್ನೆಲ್ಲ ಆಶೀರ್ವದಿಸಿದ್ದಾರೆ ಅಂತ ಹೇಳು. ದೇವಮಾತಾ ಹಾಗೂ ಜಯಾಗೆ, ಹಾಗೂ ಬಾಕ್ಸ್ ಕೊಟ್ಟವಳಿಗೆ ಏನೇನು ಬರೆಯಬೇಕೋ ಅದನ್ನು ನನ್ನ ಹೆಸರಿನಲ್ಲಿ ನೀನೇ ಬರೆ.

ಇತಿ, ತಾರೀಖು ೧ನೇ ಮಾಘ ೧೩೧೬ (ಕ್ರಿ.ಶ. ೧೯೦೯)

ಆಶೀರ್ವಾದಗಳೊಂದಿಗೆ,

ನಿನ್ನ ತಾಯಿ.''

ಶ್ರೀಮಾತೆಯವರು ವಾತದಿಂದಾಗಿ ನಡುನಡುವೆ ತುಂಬಾ ಕಷ್ಟಕ್ಕೊಳಗಾಗುತ್ತಿದ್ದರು. ಯಾರು ಏನೇ ಔಷಧವನ್ನು ಹೇಳಲಿ, ಮಾಡಿಬಿಡುತ್ತಿದ್ದರು. ಔಷಧವಿರಲಿ, ದೈವಿಕವಾದ ಆಚರಣೆಯಿರಲಿ ಯಾವುದನ್ನೂ ಬಿಡಲಿಲ್ಲ. ಕೆಳಗಿನ ಪತ್ರವೇ ಇದಕ್ಕೆ ನಿದರ್ಶನ. ಶ್ರೀಮಾತೆ ವಾತದಿಂದ ಅತ್ಯಂತ ಕಷ್ಟಪಡುತ್ತಿದ್ದಾರೆ ಎಂದು ತಿಳಿದ ನಾನು ಅವರನ್ನು ಜಯರಾಮಬಾಟಿಯಿಂದ ಕಲ್ಕತ್ತೆಗೆ ಕರೆದುಕೊಂಡು ಬರಲು ಅಲ್ಲಿಗೆ ಹೋಗುವುದಾಗಿ ಪತ್ರ ಬರೆದಿದ್ದೆ. ಉತ್ತರವಾಗಿ ಶ್ರೀಮಾತೆ ಬರೆದಿದ್ದರು:

''ನನ್ನ ಕಾಲಿನ ವಾತ ಸ್ವಲ್ಪ ವಾಸಿಯಾದಂತೆ ಅನ್ನಿಸುತ್ತದೆ. ಆದ ಕಾರಣ ಸತ್ಯನಾರಾಯಣನ ಔಷಧವನ್ನು ಹಚ್ಚಿಕೊಂಡಿದ್ದೇನೆ. ಆದ ಕಾರಣ ಅದೇ ವಿಶೇಷವೆಂದು ಅನ್ನಿಸುತ್ತಿದೆ.''

ಇದೇ ರೀತಿ ಒಂದು ಸಲ ಅವರ ವಾತ ಹೆಚ್ಚಾದಾಗ ಶರತ್ ಮಹಾರಾಜರು ಕಲ್ಕತ್ತೆಯಿಂದ ನನಗೆ ಪತ್ರ ಬರೆದಿದ್ದರು. ಆಗ ನಾನು ಜಯರಾಮಬಾಟಿಯಲ್ಲಿದ್ದೆ:

''...ಶ್ರೀಮಾತೆಯವರ ವಾತದ ವಿಷಯವನ್ನು ಕೇಳಿ ನನಗೆ ಚಿಂತೆಯಾಗಿದೆ. ಕಡಿಮೆಯಾಗಿದೆಯೇ ಇಲ್ಲವೇ ಎಂದು ಬರೆದು ತಿಳಿಸುವ ಮೂಲಕ ನೆಮ್ಮದಿ ನೀಡು. ಇನ್ನೊಂದು ಸಣ್ಣ ಸೀಸೆಯಲ್ಲಿ ಹುಲಿಯ ಕೊಬ್ಬಿನ ಎಣ್ಣೆಯನ್ನು ತುಂಬಿ ಕೂಡಲೇ ಕಳುಹಿಸಿಕೊಡುತ್ತೇನೆ. ಅದು ವಾತಕ್ಕೆ ಬಹಳ ಒಳ್ಳೆಯದು ಅಂತ ಕೇಳಿದ್ದೇನೆ. ಮಾಲಿಶ್ ಮಾಡಬೇಕಾದೀತು. ಅವರು ಇಲ್ಲಿಂದ ಹೋದ ಮೇಲೆ ಎಲ್ಲವೂ ಶೂನ್ಯವಾಗಿದೆ. ಫಾಲ್ಗುಣ ಮಾಸದಲ್ಲಿ ಅವರನ್ನು ಕರೆದುಕೊಂಡು ಬರಬಹುದಾದರೆ ತುಂಬ ಒಳ್ಳೆಯದು. ಈಗಲೇ ವಾತ ಹೆಚ್ಚಾಗಿದೆ — ಚಳಿಗಾಲದಲ್ಲಿ ಏನಾದೀತೋ ಗೊತ್ತಿಲ್ಲ , ತುಂಬ ಕಷ್ಟವಾಗಬಹುದೇನೋ!

ಕಲ್ಕತ್ತಾ, ೨೭-೧೧-೧೯೦೯''

ನನ್ನ ಇಬ್ಬರು ಸ್ನೇಹಿತರಾದ ಡಾಕ್ಟರ್ ಕಂಜೀಲಾಲ್ ಹಾಗೂ ಲಲಿತ ಇಬ್ಬರನ್ನೂ ಶ್ರೀಮಾತೆಯವರು ವಿಶೇಷವಾಗಿ ಪ್ರೀತಿಸುತ್ತಿದ್ದರು ಎಂಬ ಸೂಚನೆಯನ್ನು ಈ ಹಿಂದೆಯೇ ನೀಡಲಾಗಿದೆ.

ನಿಜವಾಗಿಯೂ ಅವರಿಬ್ಬರೂ ಶ್ರೀಮಾತೆಯವರ ಪ್ರೀತಿಯ ಶಿಷ್ಯರಾಗಿದ್ದರು. ಲಲಿತನಿಗೆ ಅನಾರೋಗ್ಯವುಂಟಾದ ವಾರ್ತೆಯನ್ನು ಕೇಳಿ ಶ್ರೀಮಾತೆ ಯಾವ ರೀತಿ ವಿಹ್ವಲಗೊಳ್ಳುತ್ತಿದ್ದರು ಎಂಬುದನ್ನು ನಾನು ಈ ಕೆಲವು ಪತ್ರಗಳ ಮೂಲಕ ತಿಳಿಸುತ್ತೇನೆ:

೧) ''ಲಲಿತನ ಅನಾರೋಗ್ಯದ ವಿಚಾರವನ್ನು ಕೇಳಿ ನನಗೆ ಎಷ್ಟೊಂದು ಸಂಕಟವಾಯಿತು ಎಂಬುದನ್ನು ಬರೆದು ತಿಳಿಸಲು ಸಾಧ್ಯವಿಲ್ಲ. ನಾನು ಇಲ್ಲಿಂದಲೇ ಅವನಿಗಾಗಿ ಠಾಕೂರರ ಬಳಿ ಪ್ರಾರ್ಥನೆ ಮಾಡುತ್ತೇನೆ, ಬೇಗನೆ ಅವನು ಆರೋಗ್ಯವಂತನಾಗಿ ಚೇತರಿಸಿಕೊಳ್ಳಲಿ ಎಂಬುದಾಗಿ. ಇದೇ ನನ್ನ ಪ್ರಾರ್ಥನೆ.''

ದಿನಾಂಕ: ೬ನೇ ಪೌಷ, ೧೩೧೬ (ಕ್ರಿ.ಶ.೧೯೦೯)

೨)''ಅಂತೆಯೇ, ಲಲಿತ ಹೇಗಿದ್ದಾನೆಂದು ಬರೆದು ತಿಳಿಸು.''

ದಿನಾಂಕ: ೫ನೇ ಮಾಘ ೧೩೧೬ (ಕ್ರಿ.ಶ.೧೯೦೯)

ಸ್ನೇಹಿತ ಡಾಕ್ಟರ್ ಕಂಜೀಲಾಲನ ಜೊತೆಗೆ ನಾನೊಮ್ಮೆ ಜಯರಾಮಬಾಟಿಗೆ ಹೋಗಬೇಕಾಗಿ ಬಂತು. ಇತರ ಸಾಮಾನುಗಳೊಂದಿಗೆ ಶ್ರೀಮಾತೆಯವರಿಗೆ ಅನಾನುಕೂಲತೆ ಹಾಗೂ ಚಿಂತೆ ಕಡಿಮೆ ಮಾಡುವ ಉದ್ದೇಶದಿಂದ ಡಾಕ್ಟರಿಗೋಸ್ಕರ ಚಹಾ, ವಿದೇಶೀ ಹಾಲು, ಸಕ್ಕರೆ, ಮೈದಾ, ತುಪ್ಪ, ರವೆ ಇವನ್ನೆಲ್ಲ ತೆಗೆದುಕೊಂಡು ಹೋಗಿದ್ದೆ. ಹಳ್ಳಿಯ ಜನರ ಚಿಕಿತ್ಸೆಗಾಗಿ ಡಾಕ್ಟರ್ ಕೆಲವು ಔಷಧಗಳನ್ನೂ ಒಯ್ದಿದ್ದರು.

ಡಾಕ್ಟರ್‌ನನ್ನು ನೋಡಿ ಶ್ರೀಮಾತೆಯವರಿಗಾದ ಆನಂದ ಹೇಳತೀರದು. ಕಲ್ಕತ್ತೆಯ ಮೆಡಿಕಲ್ ಕಾಲೇಜಿನ ಡಾಕ್ಟರ್ ಬಂದಿದ್ದಾರೆ ಎಂದು ಜನರ ನಡುವೆ ಸುದ್ದಿ ಹರಡಿ, ದೂರದೂರದ ಊರುಗಳಿಂದ ಅನೇಕ ಮಂದಿ ಜನ ಬರುತ್ತಿದ್ದರು. ಆಗ ಶ್ರೀಮಾತೆ ಹೇಳುತ್ತಿದ್ದರು, 'ನನ್ನ ಗುಣವಂತನಾದ ಮಗ ಬಂದಿದ್ದಾನೆ — ಜನ ಬರಲಾರರೆ?' ಎಂದು. ಅವರಿಂದ ಹಲವು ಮಂದಿ ಜನರಿಗೆ ಉಪಕಾರವಾಯಿತು. ಒಬ್ಬ ಸದ್ಗೋಪ ಕುಲದ ರೋಗಿಗೆ ಶಸ್ತ್ರಚಿಕಿತ್ಸೆ ಮಾಡಿಸಿ ಅವನು ಬದುಕಿ ಉಳಿದ. ಗುರುನಿವಾಸದಲ್ಲಿ ಸಂತೋಷವಾಗಿ ಕೆಲವು ದಿನಗಳನ್ನು ಕಳೆದ ಡಾಕ್ಟರ್, ಕಲ್ಕತ್ತೆಗೆ ಹಿಂದಿರುಗಿದರು. ಹೋಗುವಾಗ ಕೆಲವು ವಿದೇಶಿ ಪೇಟೆಂಟ್ ಔಷಧಿಗಳ ಮಾದರಿಯನ್ನು ಅಲ್ಲೇ ಇಟ್ಟುಹೋದರು. ಅದರಿಂದ ಜನರಿಗೆ ಉಪಕಾರವಾದೀತು ಎಂದು. ಅವರನ್ನು ಬೀಳ್ಕೊಡುವಾಗ ಶ್ರೀಮಾತೆ ಅವರೊಂದಿಗೆ ಗ್ರಾಮದ ಹೊರಭಾಗದವರೆಗೂ ಹೋಗಿ ಬಿಟ್ಟು ಬಂದರು. *(ಮುಂದುವರಿಯುವುದು)*

ಭಗವಂತ ನಮ್ಮವನೇ. ಅವನೊಂದಿಗೆ ನಮ್ಮದು ಶಾಶ್ವತವಾದ ಸಂಬಂಧ. ಅವನು ಎಲ್ಲರಿಗೂ ಸೇರಿದವನು. ವ್ಯಕ್ತಿಯು ತನ್ನ ಹಂಬಲಕ್ಕೆ ತಕ್ಕಂತೆ ಅವನನ್ನು ಸಾಕ್ಷಾತ್ಕಾರ ಮಾಡಿಕೊಳ್ಳುತ್ತಾನೆ.

— ಶ್ರೀಮಾತೆ ಶಾರದಾದೇವಿ

---

೧ ಮಿಸ್. ಲೌರಾ ಎಫ್. ಗ್ಲೆನ್ *(-ಸಂ.)*

೨ ಮಿಸ್. ಜೊಸೆಫಿನ್ ಮ್ಯಾಕ್ಲೌಡ್. ಶ್ರೀಮಾತೆ ಅವಳನ್ನು 'ಜಯಾ' ಎಂದು ಕರೆಯುತ್ತಿದ್ದರು. *(-ಸಂ.)*

ಶ್ರೀಮಾತೆಯವರ ಪತ್ರಗಳು - ೭

ಅನುವಾದ: ಪ್ರವ್ರಾಜಿಕಾ ಧರ್ಮಪ್ರಾಣಾ



ಪತ್ರ -೨೮

ಬುಧವಾರ - ಓಂ ರಾಮಕೃಷ್ಣ ಜಯತಿ

೨೬.೧೧.೧೯೦೭

೧೧ನೇ ಆಗ್ರಹಾಯಣ

ಮಗು,

ನೀನು ಕಳುಹಿಸಿರುವ ಕೆಂಪು ಕರೆಯ ರೇಷ್ಮೆ ಸೀರೆ ನನಗೆ ಸಿಕ್ಕಿತು. ಈ ಒಳ್ಳೆಯ ಸೀರೆಯನ್ನು ನಾನು ಉಪಯೋಗಿಸುವೆ. ನಾನು ನಿನಗೆ ಈ ಮೂಲಕ ಆಶೀರ್ವಾದವನ್ನು ನೀಡಿದ್ದೇನೆ. ಅದೇನೆಂದರೆ, ನಿನಗೆ ಶ್ರೀ ಶ್ರೀ ಠಾಕೂರರಲ್ಲಿ ಅಸೀಮ ಭಕ್ತಿಯುಂಟಾಗಲಿ. ನಿಮಗೆಲ್ಲರಿಗೂ ಭಕ್ತಿ ಉಂಟಾಗಲಿ ಎಂದು ಹೇಳುತ್ತಿದ್ದೇನೆ. ಸದ್ಯ ನಾನು ಚೆನ್ನಾಗಿದ್ದೇನೆ. ನಿಮ್ಮೆಲ್ಲರ ಕ್ಷೇಮ ಸಮಾಚಾರಗಳೊಂದಿಗೆ ಮಧ್ಯೆ ಮಧ್ಯೆ ಎರಡು ವಾಕ್ಯ ಬರೆದು ತಿಳಿಸು. ಮಾಸ್ಟರ್ ಮಹಾಶಯ, ಮತ್ತು ಗಿರೀಶ್ ಬಾಬುವಿಗೆ ಪ್ರಸಾದ ಕೊಟ್ಟಿರುವೆ ಎಂದು ಕೇಳಿ ನಾನು ಸಂತೋಷಪಟ್ಟೆ.

ಇತಿ, ನನ್ನ ಆಶೀರ್ವಾದ ನಿನಗೆ.

ನಿಮ್ಮೆಲ್ಲರ ತಾಯಿ

ಪತ್ರ ಪಡೆದವರ ಹೆಸರು ಮತ್ತು ವಿಳಾಸ

ಪರಮ ಪ್ರೀತಿಯ

ಶ್ರೀಯುತ ಬಾಬು ನಿರ್ಮಲಚಂದ್ರ ಘೋಷ್

ಕಲ್ಕತ್ತಾ ಶ್ರೀ ಕುಮಾರ್ ಕುಮಾರಕೃಷ್ಣ ಬಹಾದುರರ

ಮನೆ ನಂ. ೧೦೭

ಪೊ: ಗ್ರೇಟ್ ಸ್ಟ್ರೀಟ್ (ಗ್ರೇ ಸ್ಟ್ರೀಟ್) ಕಲ್ಕತ್ತಾ

Calcutta

ಪತ್ರ-೨೯

೨೭-೧೧-೧೯೦೭

ಓಂ ರಾಮಕೃಷ್ಣ ಜಯತಿ

ಶರಣಂ

ಮಗು ಶಶಿ,

ಇಂದು ನಿನ್ನ ಪತ್ರ ನೋಡಿ ನಾನು ಎಷ್ಟೊಂದು ಆನಂದಪಟ್ಟೆ ಎಂದರೆ ಅದನ್ನು ನಾನು ವಿವರಿಸಲು ಸಾಧ್ಯವೇ ಇಲ್ಲ. ನಾನು ನಿಮಗೆಲ್ಲರಿಗೂ ಆಶೀರ್ವಾದವನ್ನು ಮಾಡುತ್ತಿರುವೆ: ನಿಮಗೆಲ್ಲರಿಗೂ ಭಗವಂತನಲ್ಲಿ ಅಪಾರ ಭಕ್ತಿ ಇರಲಿ - ಇದುವೇ ನನ್ನ ಪ್ರಾರ್ಥನೆ. ಬಡಜನರಿಗೆ ಅಕ್ಕಿ ಮತ್ತು ಹಣ ದಾನ ಮಾಡಿರುವೆ ಎಂದು ಕೇಳಿ ತುಂಬಾ ಸಂತೋಷವಾಯಿತು. ಸಭ್ಯ ಗೃಹಸ್ಥರಿಗೆ ತುಂಬಾ ಆದರದಿಂದ ಔತಣ ಹಾಕಿಸಿದೆ. ಇದು ತುಂಬಾ ಸಂತೋಷದ ವಿಷಯ. ನಿಮಗೆಲ್ಲರಿಗೂ ಭಗವಂತನು ದಯೆ ತೋರಿಸಲಿ. ಸದ್ಯ ನಾನು ಚೆನ್ನಾಗಿದ್ದೇನೆ ಮತ್ತು ಮನೆಯವರೆಲ್ಲರೂ ಚೆನ್ನಾಗಿದ್ದಾರೆ. ನಿನಗೆ ನನ್ನ ಆಶೀರ್ವಾದ ಮತ್ತು ಎಲ್ಲರಿಗೂ ಇದನ್ನು ತಿಳಿಸು.

ಇತಿ, ೧೩೧೪ನೇ ವರ್ಷ

ದಿನಾಂಕ: ೧೧ನೇ ಆಗ್ರಹಾಯಣ

ನಿಮ್ಮೆಲ್ಲರ ಶುಭಾಕಾಂಕ್ಷಿ, ಮಾತೆ

ಪತ್ರ ಪಡೆದವರ ಹೆಸರು

ಸ್ವಾಮಿ ರಾಮಕೃಷ್ಣಾನಂದ

ಪತ್ರ - ೩೦

ಓಂ ರಾಮಕೃಷ್ಣ ಜಯತಿ

೧೩೧೪ನೇ ವರ್ಷ

ದಿನಾಂಕ ೨೬ ಮಾಘ, ರವಿವಾರ

೧೧.೨.೧೯೦೮

ಪ್ರೀತಿಯ ಮಗೂ, ನಿನ್ನ ಪತ್ರ ಸಿಕ್ಕಿ, ನಾನು ಎಲ್ಲಿಲ್ಲದ ಆನಂದವನ್ನು ಪಡೆದೆ. ನಾನು ಸದ್ಯ ಚೆನ್ನಾಗಿದ್ದೇನೆಂದು ತಿಳಿ. ಮನೆಯವರೆಲ್ಲರೂ ಒಂದೇ ರೀತಿ ಚೆನ್ನಾಗಿದ್ದಾರೆ. ನಿನಗೆ ನನ್ನ ಆಶೀರ್ವಾದ ಮತ್ತು ಇದನ್ನು ಎಲ್ಲರಿಗೂ ತಿಳಿಸು.

ಇತಿ ನಿನ್ನ ,

ಮಾತಾದೇವಿ.

ಪತ್ರ ಪಡೆದವರ ಹೆಸರು ಮತ್ತು ವಿಳಾಸ

ಶ್ರೀಮಾನ್ ಯತೀಶ್ ಚಂದ್ರ ಸೇನ್ ಗುಪ್ತ

ಜಾತೀಯ ಭಂಡಾರ್ , ಬರಿಸಾಲ್ Barisal

ಪತ್ರ -೩೧

ಓಂ ರಾಮಕೃಷ್ಣ ಜಯತಿ
ಶರಣಂ

೨೫.೨.೧೯೦೮

ಪ್ರೀತಿಯ ಮಗೂ, ನಿನ್ನ ಪತ್ರ ಸಿಕ್ಕಿ (ನಾನು) ತುಂಬಾ ಆನಂದಗೊಂಡೆ. ನಿನಗೆ ನನ್ನ ಆಶೀರ್ವಾದ ಮತ್ತು ಎಲ್ಲರಿಗೂ ನನ್ನ ಆಶೀರ್ವಾದವನ್ನು ತಿಳಿಸು. ನಾನು ಚೆನ್ನಾಗಿದ್ದೇನೆ ಮತ್ತು ಮನೆಯವರೆಲ್ಲರೂ ಚೆನ್ನಾಗಿದ್ದಾರೆಂದು ತಿಳಿ.

ಇತಿ, ಮಾತಾದೇವಿ.
೧೩೧೪ನೇ ವರ್ಷ
ದಿನಾಂಕ: ೧೧ನೇ ಫಾಲ್ಗುಣ, ರವಿವಾರ

ಪತ್ರ ಪಡೆದವರ ಹೆಸರು ಮತ್ತು ವಿಳಾಸ
ಯತೀಶ್ ಚಂದ್ರ ಸೇನ್ ಗುಪ್ತ
ಜಾತೀಯ ಭಂಡಾರ್, ಬರಿಸಾಲ್ Barisal

ಪತ್ರ -೩೨

ಓಂ ರಾಮಕೃಷ್ಣ ಜಯತಿ ಶರಣಂ

೨೭.೨.೧೯೦೮


ಪ್ರೀತಿಯ ಮಗೂ,

ಇವತ್ತು ಸರಿಯಾದ ಸಮಯಕ್ಕೆ ನಿನ್ನ ಪತ್ರ ಸಿಕ್ಕಿತು. ಅಲ್ಲದೆ ಕವರ್ ಮತ್ತು ಪೋಸ್ಟ್ ಕಾರ್ಡ್ ಸಿಕ್ಕಿತು. ಪ್ರೀತಿಯ ಮಗೂ, ನಾನು ನಿನಗೆ ಆಶೀರ್ವಾದ ಮಾಡುತ್ತಿದ್ದೇನೆ. ನಿನಗೆ ಶ್ರೀ ಶ್ರೀ ಠಾಕೂರರಲ್ಲಿ ಭಕ್ತಿ ಉಂಟಾಗಲಿ — ಎಂಬುದೇ ನನ್ನ ಪ್ರಾರ್ಥನೆ. ಇನ್ನು ನಿನ್ನ ಎದೆ ಡಬ್ ಡಬ್ ಅನ್ನುವುದಿಲ್ಲ. ನೀನು ಶುದ್ಧ ಮನಸ್ಸಿನಿಂದ ಭಗವಂತನನ್ನು ಪ್ರಾರ್ಥಿಸು. ಅದರಿಂದ ನಿನಗೆ ಯಾವ ಕಷ್ಟವೂ ಆಗುವುದಿಲ್ಲ — ನಾನು ಹೇಳುತ್ತಿದ್ದೇನೆ. ಸದ್ಯ ನಾನು ಚೆನ್ನಾಗಿದ್ದೇನೆ. ಆದರೆ ಮನೆಯಲ್ಲಿ ಎಲ್ಲರಿಗೂ ಅನಾರೋಗ್ಯ ಇದೆ.


ಇತಿ, ದಿನಾಂಕ ೧೪ನೇ ಫಾಲ್ಗುಣ,
ಬುಧವಾರ

ನಿನ್ನ ಮಂಗಳಮಯಿ ಮಾತಾದೇವಿ.

ಪತ್ರ ಪಡೆದವರ ಹೆಸರು
ಶ್ರೀಯುತ ಬಾಬು ನಿರ್ಮಲ ಚಂದ್ರ ದಾಸ್ ಘೋಷ್
ಕಲ್ಕತ್ತಾ ಶ್ರೀ ಕುಮಾರಕೃಷ್ಣ ಬಾಹಾದುರರ
ಮನೆ ನಂ. ೧೦೭, ಗ್ರೇ ಸ್ಟ್ರೀಟ್ ಅಂಚೆ,
ಕಲ್ಕತ್ತಾ .



ಕಳೆದ ದಿನಗಳ ನೆನಪುಗಳು



(ಸ್ವಾಮಿ ವಿರಜಾನಂದರ ಜೀವನ ಹಾಗೂ ಕೆಲವು ಸಮಕಾಲೀನ ಘಟನೆಗಳು)

ಮೂಲ ಬಂಗಾಳಿ: ಸ್ವಾಮಿ ಶ್ರದ್ಧಾನಂದ

ಅನುವಾದ: ಪ್ರವ್ರಾಜಿಕಾ ಯೋಗಾತ್ಮಪ್ರಾಣಾ

ಭಾಗ ೧೩


ಒಂದು ಅನಿರ್ವಚನೀಯ ಶಾಂತಿ ಸ್ವಾಮಿ ವಿರಜಾನಂದರ ಹೃದಯ, ಮನಸ್ಸುಗಳನ್ನು ಆವರಿಸಿತು. ಕೆಲಸ, ಕಾರ್ಯದ ಬಗ್ಗೆ ಅವರಿಗಿದ್ದ ಅಲ್ಪ ಸ್ವಲ್ಪ ಉದಾಸೀನ, ದ್ವಂದ್ವ, ಸಂಕೋಚಗಳು ಸ್ವಾಮೀಜಿಯವರ ಅಮೋಘವಾದ ಆಶೀರ್ವಾದದ ಬಲದಿಂದ ಎಲ್ಲಿಗೋ ಹಾರಿಹೋದವು.

ಅಂದು ಮಠದ ಕೊಳದಲ್ಲಿ ಅಕಸ್ಮಾತ್ತಾಗಿ ದೊರಕಿದ ಅಪರೂಪದ ಸಣ್ಣ 'ಇಲಿಷ್' ಮೀನಿನಿಂದ ಅಡಿಗೆ ಮಾಡಿ, ಶ್ರೀರಾಮಕೃಷ್ಣರಿಗೆ ಅದನ್ನು ನಿವೇದಿಸಿದ ನಂತರ ಸ್ವಾಮೀಜಿ ಅದನ್ನು ಕಾಳೀಕೃಷ್ಣರಿಗೆ ತಿನ್ನಲು ಕೊಟ್ಟು, ''ಇದು ಶಕ್ತಿಯ ಪ್ರತೀಕ, ಸೇವಿಸು'' ಎಂದರು. ಸ್ವಾಮೀಜಿಯವರ ಹೃತ್ಪೂರ್ವಕ ಆಶೀರ್ವಾದಗಳನ್ನು ಪಡೆದು ಸ್ವಾಮಿ ವಿರಜಾನಂದ, ಪ್ರಕಾಶಾನಂದರಿಬ್ಬರೂ ಫೆಬ್ರವರಿ ೪ ರಂದು ಢಾಕಾಗೆ ಹೊರಟರು. ಅಲ್ಲಿಗೆ ತಲುಪಿದ ನಂತರ ಪ್ರಚಾರಕಾರ್ಯವನ್ನು ಪ್ರಾರಂಭಿಸಿದರು. ಸ್ವಲ್ಪ ದಿನಗಳ ನಂತರ ಸ್ವಾಮೀಜಿಯವರು ಸ್ವಾಮಿ ಪ್ರಕಾಶಾನಂದರಿಗೆ ಮಠಕ್ಕೆ ಹಿಂದಿರುಗಲು ಹೇಳಿ ಕಳುಹಿಸಿದರು. ಆದರಿಂದ ಸ್ವಾಮಿ ವಿರಜಾನಂದರೊಬ್ಬರೇ ಢಾಕಾದಲ್ಲಿ ಉಳಿದುಕೊಂಡು, ತಮಗೆ ಸಾಧ್ಯವಾದಷ್ಟು ಪ್ರಚಾರಕಾರ್ಯವನ್ನು ಮುಂದುವರಿಸಿದರು. ಅಲ್ಲಿ ಸೇರುತ್ತಿದ್ದ ಸಭಿಕರ ಮುಂದೆ ಅವರು, ತಾವು ಬರೆದಿದ್ದ ಪ್ರಬಂಧವನ್ನು ಓದಿ ಹೇಳುತ್ತಿದ್ದರು; ಅನಂತರ ಆ ವಿಷಯಕ್ಕೆ ಸಂಬಂಧಿಸಿದಂತೆ ಪ್ರಶ್ನೋತ್ತರ ಹಾಗೂ ಚರ್ಚೆ ನಡೆಯುತ್ತಿದ್ದವು. ಸ್ವಾಮಿ ವಿರಜಾನಂದರ ನಮ್ರ–ಮಧುರ ಸ್ವಭಾವವೂ ಪ್ರಶಾಂತ ವ್ಯಕ್ತಿತ್ವವೂ ಎಲ್ಲರ ಶ್ರದ್ಧಾಭಕ್ತಿಗಳನ್ನು ಗಳಿಸಿತ್ತು.

ಇವರು ಢಾಕಾದಲ್ಲಿದ್ದಾಗ ಸ್ವಾಮೀಜಿಯವರ ಪಾಶ್ಚಾತ್ಯ ಶಿಷ್ಯೆ ಸಂನ್ಯಾಸಿನಿ ಅಭಯಾನಂದರು ಭಾರತಕ್ಕೆ ಬಂದಿದ್ದರು. ಸ್ವಾಮೀಜಿ ಆಕೆಯನ್ನು ಢಾಕಾಗೆ ಕಳುಹಿಸಿಕೊಟ್ಟರು. ಅಲ್ಲಿ ಅವರು ಅನೇಕ ಭಾಷಣಗಳನ್ನು ಮಾಡಿದರು. ಸ್ವಾಮಿ ವಿರಜಾನಂದರು ಅಭಯಾನಂದರನ್ನು ಕರೆದುಕೊಂಡು ಢಾಕಾದಿಂದ ಮೈಮನ್‌ಸಿಂಗ್ ಹಾಗೂ ಬರಿಸಾಲ್‌ಗೂ ಹೋದರು. ಬರಿಸಾಲ್‌ನಿಂದ ಅಭಯಾನಂದರು ಕೊಲ್ಕತ್ತೆಗೆ ಹಿಂತಿರುಗಿದರು. ಸ್ವಾಮಿ ವಿರಜಾನಂದರು ಬರಿಸಾಲ್‌ನ ವಿಖ್ಯಾತ ನೇತಾರರೂ, ವಿದ್ವಾಂಸರೂ ಆದ ಅಶ್ವಿನೀ ಕುಮಾರ ದತ್ತ ಮಹಾಶಯರ ಮನೆಯಲ್ಲಿ ಸ್ವಲ್ಪ ದಿನ ಉಳಿದುಕೊಂಡರು. ಅನೇಕ ಯುವಕರು ಅವರ ಬಳಿಗೆ ಬಂದು, ಅವರಿಂದ ನೈತಿಕ ಹಾಗೂ ಧಾರ್ಮಿಕ ಜೀವನದ ಬಗ್ಗೆ ಉಪದೇಶ ಪಡೆಯುತ್ತಿದ್ದರು. ಸ್ವಾಮಿ ವಿರಜಾನಂದರು ೧೮೯೯ರ ಮೇ ೭ರಂದು ಬರಿಸಾಲ್‌ನಿಂದ ಮಠಕ್ಕೆ ಹಿಂದಿರುಗಿದರು.

ಇದಕ್ಕೂ ಮೊದಲು ಸ್ವಾಮಿ ಪ್ರಕಾಶಾನಂದರು ಢಾಕಾದಿಂದ ಹಿಂತಿರುಗಬೇಕೆಂದಿರುವ ಸಮಯದಲ್ಲಿ ಅವರನ್ನು ಕರೆದುಕೊಂಡು ಸ್ವಾಮಿ ವಿರಜಾನಂದರು ಶ್ರೀರಾಮಕೃಷ್ಣರ ಆದರ್ಶ ಗೃಹೀ ಭಕ್ತರಾದ ನಾಗಮಹಾಶಯರನ್ನು ಭೇಟಿಯಾಗಲು ನಾರಾಯಣ್‌ಗಂಜ್ ಸಮೀಪದ ಗ್ರಾಮವಾದ ದೇವಭೋಗಕ್ಕೆ ಹೋದರು. ನಾಗಮಹಾಶಯರು ಅವರನ್ನು ನೋಡಿ ತುಂಬ ಸಂತೋಷಪಟ್ಟು ಪರಮಾದರದಿಂದ ಸ್ವಾಗತಿಸಿದರು. ಇಬ್ಬರೂ ಅವರಿಗೆ ಪ್ರಣಾಮ ಮಾಡುವ ಮೊದಲು ಅವರೇ ಇಬ್ಬರಿಗೂ ಪ್ರಣಾಮ ಸಲ್ಲಿಸಿ, ಮಂಟಪದಲ್ಲಿ ಮಂದಲಿಗೆ ಹಾಸಿ, ಬಹಳ ಮರ್ಯಾದೆಯಿಂದ ಕುಳ್ಳಿರಿಸಿದರು. ಅದಲ್ಲದೆ, ಸ್ವತಃ ತಾವೇ ಬೇಗನೆ ತಂಬಾಕನ್ನು (ಹುಕ್ಕಾ) ಸಿದ್ಧಪಡಿಸಿ ತಂದರು. ಕಾಳೀಕೃಷ್ಣ ಹಾಗೂ ಸುಶೀಲರಿಬ್ಬರೂ ನಾಗಮಹಾಶಯರ ವಿನಯ ಹಾಗೂ ಸ್ನೇಹಾದರಗಳನ್ನು ಕಂಡು ಮೂಕವಿಸ್ಮಿತರಾದರು. ನಾಗಮಹಾಶಯರು ಅಂಗಳದಲ್ಲಿ ನಿಂತು ಗದ್ಗದ ಕಂಠದಿಂದ ತಮಗೆ ತಾವೇ, 'ಇಂದು ನನ್ನದು ಅದೆಂಥ ಭಾಗ್ಯ, ಅದೆಂಥ ಭಾಗ್ಯ! ಮಹಾಪುರುಷರು ಕೃಪೆಯಿಟ್ಟು ತಮ್ಮ ಪಾದಧೂಳಿಯನ್ನು ನನಗಿತ್ತರು' ಎಂದು ಹೇಳತೊಡಗಿದರು.

ಈ ಇಬ್ಬರು ಸಾಧುಗಳ ಆಗಮನದ ಸುದ್ದಿ ಗ್ರಾಮಕ್ಕೆಲ್ಲ ಹರಡಿ, ಭಕ್ತರೆಲ್ಲರೂ ಬರಲಾರಂಭಿಸಿದರು. ಅವರೆಲ್ಲರನ್ನೂ ನಾಗಮಹಾಶಯರು ಸ್ವಾಮಿ ವಿರಜಾನಂದರಲ್ಲಿಗೆ ಕರೆತಂದರು. ಸ್ವಾಮಿ ವಿರಜಾನಂದರು ತಂಬಾಕು ಸೇವನೆಯನ್ನು ಮುಗಿಸಿ, ಅದರ ಕೊಳವೆಯನ್ನು ಕೆಳಗಿಡುವಷ್ಟರಲ್ಲಿಯೇ ನಾಗಮಹಾಶಯರು ಪುನಃ ತುಂಬಿಸಿ ತರುತ್ತಿದ್ದರು. ಬೇಡವೆಂದರೂ ಕೇಳುತ್ತಿರಲಿಲ್ಲ. ಹುಕ್ಕಾ ಸೇದಿ ಸೇದಿ, ಕೊನೆಗೆ ಇವರ ತಲೆ ಧಿಂ ಎನ್ನತೊಡಗಿತು. ಇಬ್ಬರೂ ನೋಡುತ್ತಿದ್ದಂತೆಯೇ ಭಕ್ತರ ಮನೆಗಳಿಂದ ಮೀನು, ಮೊಸರು, ಹಾಲು, ಸಿಹಿತಿಂಡಿಗಳು ಒಂದೊಂದಾಗಿ ಬರತೊಡಗಿದವು. ನಾಗಮಹಾಶಯರ ಸಾಧ್ವಿ ಪತ್ನಿಯೊಬ್ಬರೇ ಬಂದ ಭಕ್ತರ ಊಟಕ್ಕೆಂದು ಅಡಿಗೆ ಕಾರ್ಯದಲ್ಲಿ ನಿರತರಾದರು. ಇವರಿಬ್ಬರೂ ಊಟಕ್ಕೆ ಕುಳಿತವರು ಅವಾಕ್ಕಾಗಿ ನೋಡುತ್ತಾರೆ, ವಿವಿಧ ಪದಾರ್ಥ ಮತ್ತು ಸಿಹಿತಿಂಡಿಗಳನ್ನು ತುಂಬಿದ ಪಾತ್ರೆ, ಬಟ್ಟಲು



ನಾಗ ಮಹಾಶಯರು (೧೮೪೬-೧೮೯೯)

ಗಳಿಂದ ಮನೆಯ ಅರ್ಧಭಾಗ ತುಂಬಿಹೋಗಿದೆ! ನಾಗಮಹಾಶಯರು ಬಾಗಿಲ ಹೊರಗೆ ನಿಂತು ವಿಚಾರಿಸಿಕೊಳ್ಳುತ್ತಾ, 'ಇದನ್ನು ತಿನ್ನಿ, ಅದನ್ನು ತಿನ್ನಿ' ಎಂದು ಬಲವಂತ ಮಾಡುತ್ತಿದ್ದಾರೆ. ಆದರೆ ಅಷ್ಟೊಂದು ಬಗೆಯ ಭಕ್ಷ್ಯ-ಭೋಜ್ಯಗಳನ್ನು ಇನ್ನೆಷ್ಟು ತಾನೇ ತಿನ್ನಲಾದೀತು? ನಾಗಮಹಾಶಯರು ದುಃಖಿತರಾಗಿ, ''ಅಯ್ಯೋ! ನನ್ನ ದೌರ್ಭಾಗ್ಯದಿಂದಾಗಿ ಈ ಮಹಾತ್ಮರುಗಳು ಸರಿಯಾಗಿ ಊಟ ಮಾಡಲಾಗುತ್ತಿಲ್ಲ'' ಎಂದು ನೊಂದುಕೊಂಡರು.

ವಿಶ್ರಾಂತಿ ಪಡೆದು ಏಳುತ್ತಿದ್ದಂತೆಯೇ ಸಂಜೆ ಮತ್ತೆ ಭಕ್ತರು ಬರಲಾರಂಭಿಸಿದರು. ಬಹಳ ದೂರದ ಡೆಪ್ಯೂಟಿ ಮ್ಯಾಜಿಸ್ಟ್ರೇಟ್ ಒಬ್ಬ ನಾಗಮಹಾಶಯರ ಬಗ್ಗೆ ಕೇಳಿದ್ದ. ಅವರನ್ನು ನೋಡಲು ಅಕಸ್ಮಾತ್ತಾಗಿ ಅಂದೇ ಬಂದ. ಎದುರಿಗೆ ಕುಳಿತಿದ್ದ ಮಲಿನ ವಸ್ತ್ರಧಾರಿಯಾದ ದೀನ ನಾಗಮಹಾಶಯರನ್ನು ಕುರಿತು ಆತ, ''ಇಲ್ಲೊಬ್ಬರು ಮಹಾಪುರುಷರಿರುವರಂತಲ್ಲ, ಅವರೆಲ್ಲಿ?'' ಎಂದು ಪ್ರಶ್ನಿಸಿದಾಗ ನಾಗಮಹಾಶಯರು ಗಡಿಬಿಡಿಯಿಂದೆದ್ದು, ''ಬನ್ನಿ, ಬನ್ನಿ, ಮಹಾಪುರುಷರುಗಳ ದರ್ಶನ ಮಾಡಿ, ಬನ್ನಿ'' ಎಂದು ಹೇಳುತ್ತ ಆತನನ್ನು ಸ್ವಾಮಿ ವಿರಜಾನಂದರಿದ್ದಲ್ಲಿಗೆ ಕರೆದೊಯ್ದರು. ಆ ಸಭ್ಯನು ಸ್ವಲ್ಪ ಹೊತ್ತು ಅವರೊಂದಿಗೆ ಮಾತನಾಡಿ, ಅವರು ಮಠದಿಂದ ಬಂದವರೆಂದು ತಿಳಿದು, 'ಹಾಗಾದರೆ ನಾಗಮಹಾಶಯರು ಎಲ್ಲಿ?' ಎಂದು ಕೇಳಿದನು. ಇವರುಗಳು ನಾಗಮಹಾಶಯರತ್ತ ಕೈ ತೋರಿಸಿದಾಗ ಆತ ಸ್ತಂಭಿತನಾದ!

ಸಾಯಂಕಾಲ ಕೈಸಾಲೆಯಲ್ಲಿ ಸಂಕೀರ್ತನೆ ನಡೆಯುತ್ತಿತ್ತು. ನಾಗಮಹಾಶಯರು ಕೈಸಾಲೆಯ ಕೆಳಗೆ ಅಂಗಳದಲ್ಲಿ ನಿಂತು ಭಾವಪರವಶರಾಗಿ, ಕೈತಾಳ ಹಾಕುತ್ತ ಮೆಲ್ಲಗೆ ನರ್ತಿಸುತ್ತಿದ್ದರು. ಕೈಸಾಲೆಗೆ ಮಾತ್ರ ಹತ್ತಲಿಲ್ಲ. ಏಕೆಂದರೆ ಇವರ ಪಾಪ ಶರೀರದ ಗಾಳಿಯೇನಾದರೂ ಆ ಮಹಾಪುರುಷರ ದೇಹವನ್ನು ಸೋಂಕಿಬಿಟ್ಟರೆ – ಎಂದು. ರಾತ್ರಿ ಕೂಡ ಮೊದಲಿನಂತೆಯೇ ಭಾರೀ ಔತಣದ ಏರ್ಪಾಡು ನಡೆಯುತ್ತಿತ್ತು. ಸ್ವಾಮಿ ವಿರಜಾನಂದರಿಗಂತೂ ಅಳು ಬರುವಂತಾಯಿತು.

ನಾಗಮಹಾಶಯರ ಮನೆಯಲ್ಲಿ ಕಿಟಕಿ-ಬಾಗಿಲುಗಳಿದ್ದ ಒಳ್ಳೆಯ ಕೊಠಡಿಯಿದ್ದುದು ಅದೊಂದೇ. ಅದನ್ನೇ ಸಂನ್ಯಾಸಿಗಳಿಬ್ಬರಿಗೂ ಮಲಗಲು ಬಿಟ್ಟುಕೊಡಲಾಗಿತ್ತು. ಮಾರನೇ ದಿನ ಅವರಿಬ್ಬರಿಗೂ ತಿಳಿದು ಬಂದದ್ದೇನೆಂದರೆ, ನಾಗಮಹಾಶಯರ ಪತ್ನಿಯವರು ಇಕ್ಕಟ್ಟಾದ ಮುರುಕಲು ಅಡಿಗೆಮನೆಯಲ್ಲಿ ಮಲಗಿದ್ದರು, ಮತ್ತು ನಾಗ ಮಹಾಶಯರು ಎಲ್ಲರೂ ಮಲಗಿದ ನಂತರ ಶಾಸ್ತ್ರಕ್ಕೆ ಮಾತ್ರ ಸ್ವಲ್ಪ ಉಂಡು, ಹೊರಗಿನ ಕೈಸಾಲೆಯ ಒಂದು ಮೂಲೆಯಲ್ಲಿ ಆ ಚಳಿಗಾಲದ ರಾತ್ರಿ, ನೂರಾರು ತೂತುಗಳಿರುವ ಒಂದು ಮಲಿನ ರಜಾಯಿಯನ್ನು ಹೊದೆದು, ಮುದುರಿಕೊಂಡು ಮಲಗಿದ್ದರು ಎಂದು. (ಹಾಸಿಗೆ ಹೊದಿಕೆ ಏನೇನಿತ್ತೋ ಅದನ್ನೆಲ್ಲ ಸಾಧುಗಳಿಗೆ ಮತ್ತು ಭಕ್ತರಿಗೆ ಕೊಟ್ಟುಬಿಟ್ಟಿದ್ದರು.)

ಮಾರನೇ ದಿನವೂ ಹಿಂದಿನ ದಿನದಂತೆಯೇ ಭೋಜನಾದಿಗಳ ವ್ಯವಸ್ಥೆಯಾಗುತ್ತಿದೆ ಎಂಬುದನ್ನು ಗಮನಿಸಿದ ಸ್ವಾಮಿ ವಿರಜಾನಂದರು ಹೆದರಿದರು. ಅವರು ಸ್ವಾಮಿ ಪ್ರಕಾಶಾನಂದರಿಗೆ, ''ಸಾಕಿನ್ನು ನಡೆ, ಇಲ್ಲಿಂದ ಕಾಲುಕೀಳೋಣ'' ಎಂದರು. ಆದರೆ ನಾಗಮಹಾಶಯರು ಏನು ಮಾಡಿದರೂ ಬಿಡಲೊಲ್ಲರು. ಢಾಕಾದಲ್ಲಿ ತುಂಬ ಕೆಲಸಗಳಿವೆ ಎಂದೆಲ್ಲಾ ಹೇಳಿ, ಸಂಜೆಯ ರೈಲಿಗೆ ಹೊರಡಲು ಬಹಳ ಕಷ್ಟದಿಂದ ಸಮ್ಮತಿ ಪಡೆದರು. ಬೇಡ ಬೇಡವೆಂದರೂ ನಾಗಮಹಾಶಯರು ಇವರುಗಳನ್ನು ಬಿಟ್ಟುಬರಲು ಎರಡು ಮೈಲಿ ದೂರದಲ್ಲಿದ್ದ ರೈಲ್ವೇ ಸ್ಟೇಷನ್ನಿಗೆ ಬಂದರು. ರೈಲಿನಲ್ಲಾದರೋ ತುಂಬ ನೂಕುನುಗ್ಗಲು. ಬೋಗಿಯೊಂದನ್ನು ಹತ್ತುತ್ತಿದ್ದ ಈ ಇಬ್ಬರು ಸಾಧುಗಳನ್ನು ಜನರು ಅಡ್ಡಗಟ್ಟಿ ತಳ್ಳಿಬಿಟ್ಟರು. ಇದನ್ನು ನೋಡಿದ ನಾಗಮಹಾಶಯರು, ''ಅಯ್ಯೋ, ಅಯ್ಯೋ, ಮಹಾಪುರುಷರಿಗೆ ಅವಮಾನವಾಯಿತು, ಮಹಾಪರಾಧವಾಯಿತು; ಹೇ ಪ್ರಭು, ಈ ಅಜ್ಞಾನಿಯ ಅಪರಾಧವನ್ನು ಪರಿಗಣಿಸಬೇಡ, ಇವರನ್ನು ಕ್ಷಮಿಸು'' ಎಂದೆಲ್ಲ ಹೇಳುತ್ತ ಪರಿತಪಿಸತೊಡಗಿದರು. ಬೋಗಿಯಲ್ಲಿದ್ದ ಜನರು ಈ ದೃಶ್ಯವನ್ನು ಕಂಡು ಭಯದಿಂದಲೂ, ಪಶ್ಚಾತ್ತಾಪದಿಂದಲೂ ಕುಗ್ಗಿಹೋದರು. ತಮ್ಮ ಅಪರಾಧಕ್ಕಾಗಿ ಕ್ಷಮೆ ಕೇಳುತ್ತ, ಇಬ್ಬರನ್ನೂ ಒಳಗೆ ಕರೆದು, ತಾವುಗಳು ಇಕ್ಕಟ್ಟಿನಲ್ಲಿ ನಿಂತು, ಇಬ್ಬರಿಗೋಸ್ಕರ ಅರ್ಧ ಬೆಂಚನ್ನು ಖಾಲಿ ಮಾಡಿಕೊಟ್ಟರು. ಹರಿದ ಹಾಗೂ ಮಲಿನ ವಸ್ತ್ರವನ್ನು ಧರಿಸಿದ್ದ, ಭಿಕಾರಿಯಂತೆ ಕಂಡುಬರುತ್ತಿದ್ದ ನಾಗಮಹಾಶಯರ ಅಧ್ಯಾತ್ಮ ಪ್ರಭಾವವನ್ನು ಕಂಡ ಸ್ವಾಮಿ ವಿರಜಾನಂದರು ಮಂತ್ರಮುಗ್ಧರಾದರು. ಇದಕ್ಕೂ ಮೊದಲು ಸ್ವಾಮಿ ವಿರಜಾನಂದರು ನಾಗ

ಮಹಾಶಯರನ್ನು ಹಲವು ಬಾರಿ ಮಠದಲ್ಲೂ, ಕಾಂಕೂರ್‌ಗಾಛಿ ಯೋಗೋದ್ಯಾನದಲ್ಲೂ ನೋಡಿದ್ದರು.

ಪೂರ್ವ ಬಂಗಾಳದ ಪ್ರಚಾರ ಕಾರ್ಯದಿಂದ ಮರಳಿ ಬಂದ ಸ್ವಾಮಿ ವಿರಜಾನಂದರು, ಮತ್ತೆ ಮೇ ೨೪ರಿಂದ ಸ್ವಾಮೀಜಿಯವರ ಸೇವೆಯಲ್ಲಿ ನಿರತರಾದರು. ಇವರು ಪೂರ್ವ ಬಂಗಾಳದಲ್ಲಿದ್ದಾಗ ಭಗವಾನ್ ಶ್ರೀರಾಮಕೃಷ್ಣರ ಅಂತರಂಗ ಶಿಷ್ಯರಲ್ಲಿ ಒಬ್ಬರಾದ ಸ್ವಾಮಿ ಯೋಗಾನಂದರು ದೇಹತ್ಯಾಗ ಮಾಡಿರುವ (೨೮ನೇ ಮಾರ್ಚ್ ೧೮೯೯ರಂದು) ದುಃಖದ ವಾರ್ತೆಯನ್ನು ಕೇಳಿದರು. ಮಠಕ್ಕೆ ಹಿಂತಿರುಗಿದ ಸ್ವಾಮಿ ವಿರಜಾನಂದರಿಗೆ ಅವರ ನೆನಪು ಬಹಳ ಕಾಡತೊಡಗಿತು. ಅವರು ಎಷ್ಟೊಂದು ಪ್ರೀತಿಯನ್ನು ತೋರಿಸುತ್ತಿದ್ದರು! ತಾನು ಶ್ರೀಮಾತೆಯವರಿಂದ ಮಂತ್ರ ದೀಕ್ಷೆಯನ್ನು ಪಡೆಯುವ ಸುಯೋಗವನ್ನು ಒದಗಿಸಿಕೊಟ್ಟದ್ದೂ ಅವರೇ ಅಲ್ಲವೆ? ಅವರ ಅಂತಿಮ ದರ್ಶನ ಆಗಲೇ ಇಲ್ಲವಲ್ಲ!

ಸ್ವಾಮೀಜಿಯವರ ದೇಹಾರೋಗ್ಯ ತುಂಬ ಕೆಟ್ಟುಹೋದದ್ದರಿಂದ, ಅವರು ಆರೋಗ್ಯ ಸುಧಾರಣೆಗಾಗಿ ಕೊಲ್ಕತ್ತದಲ್ಲಿ ಬಲರಾಮ ಬಾಬುವಿನ ಮನೆಯಲ್ಲಿದ್ದರು. ಅವರ ಆರೋಗ್ಯ ಸುಧಾರಿಸುವುದಕ್ಕಾಗಿ ಸಮುದ್ರಯಾನ ಮಾಡಬೇಕೆಂದು ವೈದ್ಯರು ಸಲಹೆಯಿತ್ತರು. ಆದ್ದರಿಂದ, ಸ್ವಾಮೀಜಿಯವರು ಎರಡನೇ ಬಾರಿ ಅಮೇರಿಕಾಗೆ ಹೋಗುವುದೆಂದು ನಿರ್ಧರಿಸಿದರು. ಸ್ವಾಮಿ ವಿರಜಾನಂದರು ಇದಕ್ಕೂ ಮೊದಲು ಕೆಲವು ತಿಂಗಳು ಸ್ವಾಮೀಜಿಯವರ ಸೇವೆಯನ್ನು ಮಾಡಿದ್ದರು. ಮೊದಮೊದಲು ಈ ಕೆಲಸ ಮಾಡಲು ಅವರಿಗೆ ಬಹಳ ಆತಂಕವಾಗುತ್ತಿತ್ತು. ಶರತ್ ಮಹಾರಾಜರು ಸ್ವಾಮೀಜಿಯವರ ಸೇವೆಯ ಭಾರವನ್ನು ಅವರಿಗೆ ವಹಿಸಬೇಕೆಂದಿದ್ದಾಗ, ಕಾಳೀಕೃಷ್ಣರು, ''ಮಹಾರಾಜ್, ನನಗೆ ಬೇರೆ ಯಾವುದಾದರೂ ಕೆಲಸ ಕೊಡಿ, ಮಾಡುತ್ತೇನೆ, ಆದರೆ ಆ ಕೆಲಸವೊಂದನ್ನು ಮಾತ್ರ ಕೊಡಬೇಡಿ. ನಾನು ತಪ್ಪೇನಾದರೂ ಮಾಡಿದರೆ ಅದರಿಂದ ಸ್ವಾಮೀಜಿಯವರಿಗೆ ಅದೆಷ್ಟು ತೊಂದರೆಯಾಗುವುದೋ ಏನೋ'' ಎಂದು ವಿನಂತಿಸಿಕೊಂಡಿದ್ದರು. ಅದಕ್ಕೆ ಶರತ್ ಮಹಾರಾಜರು ಸ್ವಾಮಿ ವಿರಜಾನಂದರಿಗೆ ಭರವಸೆ ನೀಡುತ್ತ, ''ನೀನೇನೂ ಭಯಪಡುವ ಆವಶ್ಯಕತೆಯಿಲ್ಲ. ನಾನೇ ನಿಂತು ನಿನಗೆಲ್ಲವನ್ನೂ ತೋರಿಸಿಕೊಡುತ್ತೇನೆ'' ಎಂದಿದ್ದರು. ಆ ಬಳಿಕವೇ ಕಾಳೀಕೃಷ್ಣರು ಅದಕ್ಕೆ ಒಪ್ಪಿಕೊಂಡರು. ಸೇವೆಯನ್ನು ಆರಂಭಿಸಿದ ನಂತರ ಕ್ರಮೇಣ ಆತಂಕ ಕರಗಿಹೋಯಿತು. ಸ್ವಾಮೀಜಿ ಕೂಡ ಅವರ ಸೇವೆಯನ್ನು ಮೆಚ್ಚುತ್ತಿದ್ದರು.[೧]

ಬಲರಾಮಬಾಬುವಿನ ಮನೆಯಲ್ಲಿದ್ದಾಗ ಸ್ವಾಮೀಜಿಯವರ ಮಧುಮೇಹ ಕಾಯಿಲೆ (ಡಯಾಬಿಟಿಸ್) ತುಂಬ ಉಲ್ಬಣಿಸಿತ್ತು. ರಾತ್ರಿಯ ವೇಳೆ ಅವರಿಗೆ ಯಾವಾಗ ಏನು ಅಗತ್ಯ ಬೀಳುವುದೋ ಎಂಬ ಯೋಚನೆಯಿಂದಾಗಿ ಒಂದು ರೀತಿಯ ಆತಂಕ ಇರುತ್ತಿದ್ದುದರಿಂದ, ಮಲಗಿದರೂ ಕಾಳೀಕೃಷ್ಣರಿಗೆ ನಿದ್ರೆ ಬರುತ್ತಿರಲಿಲ್ಲ. ಹಗಲುಹೊತ್ತು ಸ್ವಾಮೀಜಿಯವರಿಗಾಗಿ ಅಡಿಗೆ ಹಾಗೂ ಸೇವೆಯ ಇತರ ಕೆಲಸಗಳಿಂದಾಗಿ ಒಂದು ನಿಮಿಷವೂ ವಿಶ್ರಾಂತಿ ಸಿಗುತ್ತಿರಲಿಲ್ಲ. ಆದರೆ ಏನಾಶ್ಚರ್ಯ! ಅವರಿಗೆ ಒಂದಿಷ್ಟೂ ಆಯಾಸವೆನಿಸುತ್ತಿರಲಿಲ್ಲ; ಸೇವೆಯ ಆನಂದದಲ್ಲಿ ತುಂಬಿಹೋಗಿರುತ್ತಿದ್ದರು. ಆಗ ಸ್ವಾಮಿ ತುರೀಯಾನಂದರೂ ಸಹ ಬಲರಾಮಬಾಬುಗಳ ಮನೆಯಲ್ಲಿದ್ದರು; ಒಂದೇ ಕೋಣೆಯಲ್ಲಿ ಇಬ್ಬರೂ ಮಲಗುತ್ತಿದ್ದರು. ಕಾಳೀಕೃಷ್ಣರನ್ನು ಗಮನಿಸಿದ ಅವರು ಒಂದು ದಿನ ಕೇಳಿದರು, ''ಏನೋ ಕಾಳೀಕೃಷ್ಣ, ನೀನು ರಾತ್ರಿ ಮಲಗುವುದಿಲ್ಲವೆ?'' ಅದಕ್ಕವರು, ''ಇಲ್ಲ, ನಿದ್ರೆ ಬರುವುದಿಲ್ಲ'' ಎಂದರು. ''ಆಯಾಸವೆನಿಸುವುದಿಲ್ಲವೆ?'' ಎಂದುದಕ್ಕೆ ''ಏಕೆ? ಇಲ್ಲವಲ್ಲ?'' ಎಂದಿದ್ದರು.

ಸ್ವಾಮೀಜಿ ಅಮೇರಿಕಾಗೆ ಹೋಗುವ ದಿನಗಳು ಹತ್ತಿರವಾಗುತ್ತಿದ್ದಂತೆಯೇ ಮಠದಲ್ಲಿ ಮತ್ತು ಕೊಲ್ಕತ್ತೆಯಲ್ಲಿ ಸಾಧು-ಭಕ್ತ-ಬಂಧುಗಳಲ್ಲಿ ತುಮುಲವೆದ್ದಿತು. ಅವರು ಯಾವಾಗ ಹಿಂದಿರುಗುವರೆಂಬುದು ಅನಿಶ್ಚಿತವಾಗಿದ್ದುದರಿಂದ ಎಲ್ಲರೂ ಕೂಡ ಆದಷ್ಟೂ ಅವರ ಜೊತೆಯಲ್ಲಿರಲು ತವಕಪಡುತ್ತಿದ್ದರು. ಸ್ವಾಮೀಜಿಯವರ ದೇಹ ದುರ್ಬಲವಾಗಿದ್ದರೂ, ಅವರಿಗೆ ದಣಿವಿರಲಿಲ್ಲ. ಅವರು ಅವಿಶ್ರಾಂತವಾಗಿ ಸಂಘದ ಆದರ್ಶ ಮತ್ತು ಕಾರ್ಯ ಪ್ರಣಾಳಿಯ ಬಗ್ಗೆ ವಿಚಾರ ಮಾಡುತ್ತಿದ್ದರು. ಎಲ್ಲರಿಗೂ ಉಪದೇಶ, ಪ್ರೋತ್ಸಾಹ ಮತ್ತು ಸ್ಫೂರ್ತಿ ನೀಡುತ್ತಿದ್ದರು.

ಸ್ವಾಮೀಜಿಯವರು ಬಲರಾಮಬಸುಗಳ ಮನೆಯಿಂದ ಆಗಾಗ ಮಠಕ್ಕೆ ಹೋಗುತ್ತಿದ್ದರು. ಆಗೆಲ್ಲಾ ಕಾಳೀಕೃಷ್ಣರೂ ಸಹ ಜೊತೆಗಿರುತ್ತಿದ್ದರು. ೧೮೯೯ರ ಜೂನ್ ೧೭ರಂದು ಸ್ವಾಮೀಜಿ ದೇವರ ಮನೆಯಲ್ಲಿ ಬಹಳ ಹೊತ್ತು ಶಿವ, ಕಾಳಿ ಮುಂತಾದ ದೇವ, ದೇವಿಯರ ಭಜನೆಗಳನ್ನು ಹಾಡುತ್ತ ತನ್ಮಯರಾಗಿದ್ದರು. ಈ ದೃಶ್ಯ ಕಾಳೀಕೃಷ್ಣರ ಮನದಲ್ಲಿ ಆಳವಾಗಿ ಅಚ್ಚೊತ್ತಿ ನಿಂತಿತ್ತು.

---

೧ ಮಠದಲ್ಲೊಮ್ಮೆ ಕಾಳೀಕೃಷ್ಣರು ಸ್ವಾಮೀಜಿಯವರಿಗೆ ಸ್ನಾನ ಮಾಡಿಸುತ್ತಿದ್ದಾಗ ಅವರು ಕಾಳೀಕೃಷ್ಣನನ್ನು ಬಹಳ ಸ್ನೇಹದಿಂದ, ''ನೀನು ತ್ರೈಲೋಕ್ಯ ಬೋಸರ ಮಗನೇನು? ನನಗೆ ತಿಳಿದಿರಲಿಲ್ಲ! ನನ್ನ ತಾಯಿ ಹಾಗೆಂದು ಹೇಳಿದರು. ನಾನು ಚಿಕ್ಕವನಿದ್ದಾಗ ಆಟವಾಡಲೆಂದು ನಿಮ್ಮ ಮನೆಗೆ ಬಹಳ ಬರುತ್ತಿದ್ದೆ'' ಎಂದರು. ಕಾಳೀಕೃಷ್ಣರ ನಾಲ್ಕನೇ ಚಿಕ್ಕಪ್ಪನಾದ ಅಮೃತಲಾಲ್ ಬಸುರವರು ಸ್ವಾಮೀಜಿಯವರ ಸಹಪಾಠಿಗಳಾಗಿದ್ದರು. ಸ್ವಾಮೀಜಿಯವರ ಜೀವನ ಚರಿತ್ರೆ ಓದಿದವರಿಗೆ, ಅವರ ಬಾಲ್ಯದ ಚೇಷ್ಟೆಗಳಲ್ಲೊಂದಾದ ಸಂಪಿಗೆ ಮರಕ್ಕೆ ನೇತಾಡುವ ಸಾಹಸ ನೆನಪಿದ್ದೇ ಇರುತ್ತದೆ. ಅದೇ ರಸ್ತೆಯಲ್ಲಿದ್ದ ಒಂದು ಸಂಪಿಗೆ ಮರಕ್ಕೆ ತಮ್ಮ ಸ್ನೇಹಿತರೊಂದಿಗೆ ಹೋಗಿ, ತಲೆಕೆಳಗಾಗಿ ಜೋತಾಡುತ್ತಿದ್ದರು. ಆ ಮರದ ಮಾಲೀಕರಾದ ವೃದ್ಧರು ಎಂದಾದರೊಂದು ದಿನ ಅನಾಹುತ ತಪ್ಪಿದ್ದಲ್ಲ ಎಂದು ಚಿಂತಿಸಿ, ''ಸಂಪಿಗೆ ಮರದಲ್ಲಿ ಬ್ರಹ್ಮದೈತ್ಯವಿದೆ, ಹತ್ತಬೇಡಿ. ಕತ್ತನ್ನು ಮುರಿದು ಹಾಕುತ್ತದೆ'' ಎಂದು ಹೇಳಿ ಬಾಲಕರನ್ನು ಹೆದರಿಸಿ ಓಡಿಸಲು ಪ್ರಯತ್ನಿಸುತ್ತಿದ್ದರು. ಬೇರೆ ಹುಡುಗರೆಲ್ಲರೂ ಭಯಪಡುತ್ತಿದ್ದುದನ್ನು ಕಂಡು ಬಿಲೆಯು (ಸ್ವಾಮೀಜಿಯವರನ್ನು ಮುದ್ದಿನಿಂದ ಹಾಗೆ ಕರೆಯುತ್ತಿದ್ದರು. ಇದು 'ವೀರೇಶ್ವರ' ಹೆಸರಿನ ಅಪಭ್ರಂಶ), ''ಅಯ್ಯೋ, ಆ ಮುದುಕನ ಮಾತನ್ನೇಕೆ ಕೇಳುತ್ತೀರಾ? ನಿಜವಾಗಿ ಬ್ರಹ್ಮದೈತ್ಯವಿದ್ದಿದ್ದರೆ ಇಷ್ಟು ಹೊತ್ತಿಗಾಗಲೇ ನಮ್ಮ ಕತ್ತನ್ನು ಮುರಿದುಹಾಕುತ್ತಿತ್ತು'' ಎಂದು ಹೇಳಿ ಮತ್ತೆ ಆಟಕ್ಕೆ ತೊಡಗಿದ. ಈ ಘಟನೆಯಲ್ಲಿ ಬಂದಿರುವ ವೃದ್ಧರೇ ಕಾಳೀಕೃಷ್ಣನ ತಾತನಾದ ರಾಮರತನ ಬಸು.



ಸ್ವಾಮೀಜಿ ಹಾಗೂ ಇತರರೊಂದಿಗೆ ಸ್ವಾಮಿ ವಿರಜಾನಂದರು

ಇದಾದ ಎರಡು ದಿನಗಳ ನಂತರ ಅಂದರೆ ಜೂನ್ ೧೯ರಂದು ಸಂಜೆ ಸ್ವಾಮೀಜಿಯವರ ಜೊತೆಯಲ್ಲಿ ಒಂದು ಗ್ರೂಪ್ ಫೋಟೋ ತೆಗೆಯಲಾಯಿತು. ಸ್ವಾಮೀಜಿ ಅಡಿಗೆಯ ಕೆಲಸದಲ್ಲಿ ನಿರತರಾಗಿದ್ದ ಕಾಳೀಕೃಷ್ಣರನ್ನು ಫೋಟೋಗಾಗಿ ಕರೆದಾಗ ಅವರು ಯಾವ ಅವಸ್ಥೆಯಲ್ಲಿದ್ದರೋ ಹಾಗೆಯೇ ಓಡಿಬಂದರು; ಮೇಲಂಗಿ ಹಾಕಿಕೊಳ್ಳಲೂ ಸಮಯವಿರಲಿಲ್ಲ. ಫೋಟೋ ತೆಗೆದ ನಂತರ ಮತ್ತೆ ಕೆಲಸಕ್ಕೆ ಹಿಂತಿರುಗುತ್ತಿದ್ದಾಗ ಇದ್ದಕ್ಕಿದ್ದಂತೆಯೇ ದುಃಖ ಉಮ್ಮಳಿಸಿ ಬಂದು ಕಣ್ಣುಗಳಲ್ಲಿ ನೀರಿಳಿಯತೊಡಗಿತು. ಗುರುಸೇವೆಯ ಈ ದುರ್ಲಭವಾದ ಸೌಭಾಗ್ಯ ಇನ್ನೊಂದು ದಿನದಲ್ಲೇ ಕೊನೆಗೊಳ್ಳುವುದರಲ್ಲಿದೆ — ಎಂದು.

ಸ್ವಾಮೀಜಿ ಮತ್ತು ಹರಿ ಮಹಾರಾಜರಿಗೆ (ಇವರೂ ಸಹ ಸ್ವಾಮೀಜಿ ಜೊತೆಗೆ ಅಮೆರಿಕಾಗೆ ಹೋಗುವವರಿದ್ದರು) ಮಠದ ನಿವಾಸಿಗಳೆಲ್ಲರೂ ವಿದಾಯ, ಅಭಿನಂದನೆ ಸಲ್ಲಿಸಲು ಅಂದು ರಾತ್ರಿ ಸಭೆ ಸೇರಿದ್ದರು. ಶರತ್ ಮಹಾರಾಜರು ಸಭೆಯ ಉದ್ಘಾಟನೆ ಮಾಡಿದರು. ಸ್ವಾಮಿ ಅಖಂಡಾನಂದರು ಮತ್ತು ಸ್ವಾಮಿ ತ್ರಿಗುಣಾತೀತಾನಂದರು ಸ್ವಲ್ಪ ಹೊತ್ತು ಮಾತನಾಡಿದರು. ಹರಿ ಮಹಾರಾಜರ ಸಂಕ್ಷಿಪ್ತ ಭಾಷಣದ ಬಳಿಕ ಸ್ವಾಮೀಜಿಯವರಿಂದ, ವಿದಾಯದ ಪ್ರಯುಕ್ತ ಬೆಂಕಿಯಂತಹ ನುಡಿಗಳು ಮೊಳಗಿದವು:

''...ಸಂಕ್ಷಿಪ್ತವಾಗಿ ಹೇಳುವುದಾದರೆ, ಸಂನ್ಯಾಸವೆಂದರೆ ಮೃತ್ಯುವನ್ನು ಪ್ರೀತಿಸುವುದು ಎಂದರ್ಥ. ಹಾಗೆಂದ ಮಾತ್ರಕ್ಕೆ ಇದು ಆತ್ಮಹತ್ಯೆಯೇನಲ್ಲ. ಒಂದಲ್ಲ ಒಂದು ದಿನ ಮರಣವು ನಿಶ್ಚಿತವೆಂದು ಅರಿತು, ಇತರರ ಒಳಿತಿಗಾಗಿ ತನ್ನ ಸರ್ವಸ್ವವನ್ನೂ ಸರ್ವಪ್ರಕಾರದಿಂದಲೂ ಕಣಕಣವಾಗಿ ಸಮರ್ಪಿಸಿಕೊಳ್ಳುವುದು.. ಇಡೀ ಭೂಮಂಡಲವು ಒಂದು ಅಖಂಡ ಅಸ್ತಿತ್ವ. ನೀನು ಈ ಸಮಗ್ರ ವಿಶ್ವದ ಒಂದು ನಗಣ್ಯ ಕಣವಷ್ಟೆ. ಆದ್ದರಿಂದ ನಿನ್ನ ಕ್ಷುದ್ರ ಅಹಂಕಾರವನ್ನು ಬೆಳೆಸುವ ಪ್ರಯತ್ನ ಮಾಡದೆ, ಅದನ್ನು ಮನುಕುಲದ ಸೇವೆಗಾಗಿ ವಿನಿಯೋಗಿಸು. ಗಭೀರ ಭಾವಪೂರ್ಣತೆಯೊಂದಿಗೆ ಪ್ರಚಂಡವಾದ ಕಾರ್ಯತತ್ಪರತೆಯ ಸಮನ್ವಯ, ನಿಜವಾದ ಪುರುಷ-ಶಕ್ತಿಯ ಜೊತೆಜೊತೆಗೇ ನಾರೀಹೃದಯದ ಕೋಮಲತೆ....''

ಮರುದಿನ (ಜೂನ್ ೨೦) ಸ್ವಾಮೀಜಿಯವರು ಹೊರಡುವ ದಿನ. ಶ್ರೀಮಾತೆಯವರು ಆಗ ಕೊಲ್ಕತ್ತೆಯ ಬಾಗ್‌ಬಜಾರಿನ ಬೋಸ್‌ಪಾರಾ ಲೇನಿನಲ್ಲಿದ್ದರು. ಶ್ರೀಮಾತೆಯವರು ಸ್ವಾಮೀಜಿ ಹಾಗೂ ಉಳಿದ ಎಲ್ಲ ಸಂನ್ಯಾಸಿಗಳನ್ನೂ ಮಧ್ಯಾಹ್ನದ ಭೋಜನಕ್ಕೆ ಆಹ್ವಾನಿಸಿದ್ದರು. ಎಲ್ಲರೂ ಎರಡು ದೊಡ್ಡ ನೌಕೆಯನ್ನು ಮಾಡಿಕೊಂಡು ಬಾಗ್‌ಬಜಾರಿಗೆ ಹೊರಟರು. ಶ್ರೀಮಾತೆ ಅಂದು ಎಲ್ಲರಿಗೂ ಸಂತೃಪ್ತಿಯಾಗುವಂತೆ ಅತ್ಯಂತ ಪ್ರೀತಿಯಿಂದ ಉಣಬಡಿಸಿದರು. ಸಂಜೆ ೩ ಗಂಟೆಯ ಹೊತ್ತಿಗೆ ಕಾಳೀಕೃಷ್ಣರೂ ಸಹ ಎಲ್ಲರೊಂದಿಗೆ ಸ್ವಾಮೀಜಿಯವರಿಗೆ ವಿದಾಯ ಹೇಳಲು ಪ್ರಿನ್ಸೆಸ್ ಘಾಟ್‌ಗೆ ಹೋದರು. ಸ್ವಾಮೀಜಿ, ಹರಿ ಮಹಾರಾಜರು, ಸೋದರಿ ನಿವೇದಿತಾ ಮತ್ತು ಶರತ್ ಮಹಾರಾಜರ ಒಬ್ಬ ತಮ್ಮ — ಈ ನಾಲ್ವರೂ ಒಟ್ಟಿಗೆ ಮೊದಲ ಬಾರಿ ಲಂಡನ್ನಿಗೆ ಹೋಗುವವರಿದ್ದರು. ಎಲ್ಲರ ಹೃದಯದಲ್ಲೂ ನೋವಿನ ರಾಗ ಮಿಡಿಯುತ್ತಿತ್ತು. ಆದರೆ ಸ್ವಾಮೀಜಿ ಮಾತ್ರ ಎಲ್ಲರೊಂದಿಗೆ ವಿನೋದಿಸುತ್ತ, ಉತ್ಸಾಹವನ್ನು ತುಂಬುತ್ತಿದ್ದರು.

೬

೧೯೯೯ರ ಶ್ರಾವಣದ ಸಂಜೆ. ಹಿಮಾಲಯದ ದಟ್ಟ ಅರಣ್ಯ ಪ್ರದೇಶದಲ್ಲಿರುವ ಒಂದು ಸಣ್ಣ , ಹಳೆಯ, ಬೆಟ್ಟದ ಮನೆಯಲ್ಲಿ ಮೂವರು ವ್ಯಕ್ತಿಗಳು ಮಾತುಕತೆಯಾಡುತ್ತಿದ್ದಾರೆ. ಅವರಲ್ಲಿ ಇಬ್ಬರು ವೃದ್ಧ ಆಂಗ್ಲ ದಂಪತಿಗಳು; ಮತ್ತೊಬ್ಬರು ಗೈರಿಕ ವಸನಧಾರಿಯಾದ ಭಾರತೀಯ ಸಂನ್ಯಾಸಿ. ಆಕಾಶದಲ್ಲಿ ಕಾರ್ಮೋಡ ಕವಿದು ಕ್ರಮೇಣ ಕತ್ತಲಾವರಿಸುತ್ತದೆ. ಸಣ್ಣಗೆ ಮಳೆಹನಿ ಬೀಳಲಾರಂಭಿಸಿದ್ದನ್ನು ಕಂಡು ಇಂಗ್ಲಿಷಿನವನು ಸಂನ್ಯಾಸಿಯ ಕಡೆಗೆ ತಿರುಗಿ, ''ಸ್ವರೂಪ್, ಏನೋ ತೊಂದರೆ ಸಂಭವಿಸಿರಬಹುದು'' ಎಂದನು.

ಅಲ್ಲಿದ್ದ ಮಹಿಳೆಯ ಮುಖದಲ್ಲಿ ಚಿಂತೆಯ ಗೆರೆ ಮೂಡಿತು. ''ಇದು ಬಹಳ ಆತಂಕದ ವಿಷಯವೇ. ಈ ಬಿರುಗಾಳಿ, ಮಳೆಯ ಹೊತ್ತಿಗೆ ಅವರು ಇಲ್ಲಿಗೆ ಹೇಗೆ ತಾನೇ ಬಂದು ತಲುಪಿಯಾರು?'' ಎಂದು ಉದ್ಗರಿಸಿದಳು.

ಸ್ವರೂಪರು ಏನೋ ಹೇಳಬೇಕೆಂದಿರುವಷ್ಟರಲ್ಲೇ ಪಾಹಾಡೀ ಸೇವಕನೊಬ್ಬ ಬಾಗಿಲ ಬಳಿಗೆ ಓಡಿಬಂದು ಉತ್ಸಾಹದಿಂದ ಹೇಳಿದ, ''ಆಗಯೇ ಸ್ವಾಮಜು'' (ಬಂದುಬಿಟ್ಟಿದ್ದಾರೆ ಸ್ವಾಮೀಜಿ).

ಸ್ವರೂಪರು ಸರಸರನೆ ಹೊರಗೆ ಧಾವಿಸಿ ಕಾತರತೆಯಿಂದ ಪ್ರಶ್ನಿಸಿದರು, ''ಆಗಯೇ? ಕಿತನೀ ದೂರ್'' (ಬಂದಿದ್ದಾರೇನು? ಇನ್ನೂ ಎಷ್ಟು ದೂರದಲ್ಲಿದ್ದಾರೆ?), ''ನಜಿದಿಕ್, ಕುಲ್ ದೋ ಆಯೇ'' (ಹತ್ತಿರವೇ, ಇಬ್ಬರು ಮಾತ್ರ ಬಂದಿದ್ದಾರೆ), ''ಇಬ್ಬರು ಮಾತ್ರವೆ?'' ಎಂದು ಹೇಳುತ್ತಾ ಸ್ವರೂಪರು ಹೊರಗೆ ಬಂದು, ಉದ್ವಿಗ್ನರಾಗಿ ಮನೆಯ ಮುಂದಿನ ರಸ್ತೆಯಲ್ಲಿ ಮುನ್ನಡೆದರು. ವಯಸ್ಕ ದಂಪತಿಗಳೂ ಸಹ ಬಾಗಿಲಿಗೆ ಬಂದು ನಿಂತರು.

(ಮುಂದುವರಿಯುವುದು)

ಅದ್ಭುತ ಧ್ಯಾನಸಿದ್ಧ ಬೋಧಿಧರ್ಮ

ಸ್ವಾಮಿ ವೀರೇಶಾನಂದ



ಚೀನಾದಲ್ಲಿ ಬೌದ್ಧಧರ್ಮ

ಬೌದ್ಧಧರ್ಮದ ಉಗಮವಾದದ್ದು ಭಾರತದಲ್ಲಿಯೇ. ಆದರೆ ಬಹಳ ಹಿಂದೆಯೇ ಇದು ಏಷ್ಯಾಖಂಡದ ಹಲವು ದೇಶಗಳಲ್ಲಿ ಪ್ರಸಾರಗೊಂಡಿತು. ಇದಕ್ಕೆ ಕಾರಣ ಬೌದ್ಧಧರ್ಮದ ಪರಂಪರೆಯಲ್ಲಿ ಹುಟ್ಟಿಬಂದ ಸಂತರು, ಮಹಾತ್ಮರು. ಇವರು ಬಹಳ ಪರಿಶ್ರಮಪಟ್ಟು ಹಲವು ನಾಡುಗಳಿಗೆ ಹೋಗಿ ಬೌದ್ಧಧರ್ಮವನ್ನು ಪ್ರಚುರಪಡಿಸಿದರು. ಅದರಲ್ಲೂ ಚೀನಾ ದೇಶದಲ್ಲಿ ಬೌದ್ಧಧರ್ಮ ಬಹಳ ಹಿಂದಿನ ಕಾಲದಿಂದ ಅನುಷ್ಠಾನಗೊಳ್ಳುತ್ತಿದೆ. ಆದರೆ ಪೂಜೆ-ಆಚರಣೆಗಳು, ತತ್ತ್ವಶಾಸ್ತ್ರದ ಅಧ್ಯಯನ, ವಾದ ವಿವಾದಗಳು — ಇವುಗಳಿಗೆ ಬಹಳ ಮಹತ್ವವನ್ನು ನೀಡಲಾಗುತ್ತಿತ್ತು. ಬೌದ್ಧ ಸಾಧನೆಯ ತಿರುಳಾದ ಧ್ಯಾನಾಭ್ಯಾಸ ಮತ್ತು ಮನಸ್ಸಿನ ನಿಯಂತ್ರಣಗಳಿಗೆ ಅಷ್ಟು ಗಮನ ನೀಡುತ್ತಿರಲಿಲ್ಲ. ಧ್ಯಾನಾಭ್ಯಾಸದಿಂದ ಚಿತ್ತವೃತ್ತಿಗಳನ್ನು ಶಮನಗೊಳಿಸಿ, ನಿರ್ವಾಣವನ್ನು ಗಳಿಸಿಕೊಳ್ಳಬೇಕೆಂಬ ತವಕ ಅಲ್ಲಿನ ಬೌದ್ಧಧರ್ಮೀಯರಲ್ಲಿ ಅಷ್ಟಾಗಿ ಇರಲಿಲ್ಲ.

ಕ್ರಿ.ಪೂ. ೪೯೫ ರಷ್ಟು ಹಿಂದೆಯೇ ಬುದ್ಧಭದ್ರ ಅಥವಾ ಬಾತವೋ (ಚೀನೀ ಭಾಷೆಯಲ್ಲಿ) ಎಂಬ ಬೌದ್ಧ ಸಂನ್ಯಾಸಿಯು ಭಾರತದಿಂದ ಚೀನಾ ದೇಶಕ್ಕೆ ಹೋದನು. ಕ್ಸಿಯೋ ಶೆಂಗ್ ಎಂಬ ಹೆಸರಿನ ಬೌದ್ಧಧರ್ಮದ ಪದ್ಧತಿಯನ್ನು ಅವನು ಬೋಧಿಸಿದನು. ಚೀನಾ ಚಕ್ರವರ್ತಿಯಾಗಿದ್ದ ಶಾವೋ ವೆನ್ ಎನ್ನುವವನು ಶಾವೋಷಿ ಪರ್ವತಗಳ ತಪ್ಪಲಿನಲ್ಲಿ ಅವನಿಗೆ ಯಥೇಚ್ಛವಾದ ಭೂಮಿಯನ್ನು ನೀಡಿದನು. ಅಲ್ಲಿಯೇ ಮುಂದೆ ಬಹು ಪ್ರಸಿದ್ಧವಾದ ಶಾವೊಲಿನ್ ಬೌದ್ಧ ದೇಗುಲವನ್ನು ಬುದ್ಧಭದ್ರನು ನಿರ್ಮಿಸಿದನು.

ಕಾಂಚೀಪುರದ ಬೋಧಿಧರ್ಮ

ಇದೇ ಕಾಲಮಾನದಲ್ಲಿ ದಕ್ಷಿಣ ಭಾರತದ ಕಾಂಚೀಪುರವು ಐತಿಹಾಸಿಕವಾಗಿ ಹಾಗೂ ಧಾರ್ಮಿಕವಾಗಿ ಅತ್ಯಂತ ಮಹತ್ವದ ಕ್ಷೇತ್ರವಾಗಿ ಅಭಿವೃದ್ಧಿ ಹೊಂದಿತ್ತು. ಅಲ್ಲಿ ಪಲ್ಲವ ರಾಜರು ಆಳುತ್ತಿದ್ದರು. ಅಲ್ಲಿನ ರಾಜನಿಗೆ ಮೂರು ಜನ ಗಂಡು ಮಕ್ಕಳು. ಆದರೆ, ಮೂರನೆಯವನು ತನ್ನ ಅಣ್ಣಂದಿರಿಗಿಂತ ಮೇಧಾವಿ, ವೀರಾಗ್ರಣಿ, ವಿಧೇಯಿ. ಅವನೇ ಮುಂದೆ ಬೋಧಿಧರ್ಮ ಎನಿಸಿಕೊಂಡನು. ಅವನನ್ನೇ ರಾಜನು ಯುವರಾಜನಾಗಿ ನೇಮಿಸುವನು ಎಂದು ಅವನ ಅಣ್ಣಂದಿರು ಭಾವಿಸಿದರು. ಅದಕ್ಕಾಗಿ ಅವರು ಅವನ ಮೇಲೆ ದ್ವೇಷ ಕಾರಿದರು. ಅವನನ್ನು ಕೊಲ್ಲಬೇಕೆಂದು ಎಲ್ಲ ರೀತಿಯ ಉಪಾಯಗಳನ್ನೂ ಮಾಡಿದರು. ಬೋಧಿಧರ್ಮ ಧಾರ್ಮಿಕ ಪ್ರವೃತ್ತಿಯವನು. ತನ್ನ ಅಣ್ಣಂದಿರ ಅಧಿಕಾರ ದಾಹವನ್ನು ಕಂಡು ಅವನಿಗೆ ಜುಗುಪ್ಸೆ ಬಂತು. ಅವನು ರಾಜಭವನದಿಂದ ಹೊರಬಂದನು. ಅಂದಿನ ಕಾಲದಲ್ಲಿ ಕಾಂಚೀಪುರವು ಬೌದ್ಧಧರ್ಮದ ಒಂದು ದೊಡ್ಡ ಕೇಂದ್ರವಾಗಿತ್ತು. ಆ ಧರ್ಮದ ದೊಡ್ಡ ಗುರುಗಳಾಗಿದ್ದವರು ಪ್ರಜ್ಞಾತಾರ ಎಂಬ ಮಹಾನುಭಾವರು. ಬೋಧಿಧರ್ಮ ಈ ಗುರುಗಳನ್ನು ಆಶ್ರಯಿಸಿದನು.

'ಚೀನಾದೇಶಕ್ಕೆ ಹೋಗು..'

ಬೋಧಿಧರ್ಮನು ಗುರುಗಳ ಬಳಿ ಹನ್ನೆರಡು ವರ್ಷ ಕಳೆದನು. ಬೌದ್ಧಧರ್ಮದ ತಿರುಳನ್ನು ಚೆನ್ನಾಗಿ ಮನನ ಮಾಡಿಕೊಂಡನು; ಬೌದ್ಧ ಧ್ಯಾನವಿಧಾನದಲ್ಲಿ ಪ್ರವೀಣನಾದನು. ಗುರು

ಗಳು ದೇಹತ್ಯಾಗ ಮಾಡುವ ಸಮಯ ಬಂತು. ''ಗುರುಗಳೇ, ನೀವು ಹೋದ ಮೇಲೆ ನಾನೇನು ಮಾಡಲಿ? ಎಲ್ಲಿಗೆ ತಾನೇ ಹೋಗಲಿ?'' ಎಂದು ಕಣ್ಣೀರು ತುಂಬಿಕೊಂಡು ಬೋಧಿಧರ್ಮ ಕೇಳಿದನು. ಪ್ರಜ್ಞಾತಾರ ಗುರುಗಳು ಅವನಿಗೆ, ''ಚೀನಾ ದೇಶಕ್ಕೆ ಹೋಗಿ, ಅಲ್ಲಿ ಬೌದ್ಧಧರ್ಮದ ಧ್ಯಾನ ವಿಧಾನವನ್ನು ಪ್ರಚಾರ ಮಾಡು'' ಎಂದು ಆದೇಶವಿತ್ತರು. ಅದರಂತೆಯೇ ಗುರುಗಳು ದೇಹತ್ಯಾಗ ಮಾಡಿದ ನಂತರ ಬೋಧಿಧರ್ಮನು ಚೀನಾದೇಶಕ್ಕೆ ಪ್ರಯಾಣ ಬೆಳೆಸಲು ಸನ್ನದ್ಧನಾದನು.

ಈ ವೇಳೆಗೆ ಬೋಧಿಧರ್ಮನ ತಂದೆ ಮರಣಹೊಂದಿದ್ದನು. ಬೋಧಿಧರ್ಮನ ಅಣ್ಣನೊಬ್ಬನು ಆಡಳಿತ ನಡೆಸುತ್ತಿದ್ದನು. ಅವನೂ ಸಾವನ್ನಪ್ಪಿದ್ದನು. ಅಣ್ಣನ ಮಗನು ಈಗ ರಾಜ್ಯಭಾರ ಮಾಡುತ್ತಿದ್ದನು. ಅವನಿಗೆ ತನ್ನ ಚಿಕ್ಕಪ್ಪನ ಮೇಲೆ ಬಹಳ ಅಭಿಮಾನ, ಗೌರವ. ಬೋಧಿಧರ್ಮನು ಚೀನಾ ದೇಶಕ್ಕೆ ಹೊರಟು ನಿಂತಿದ್ದಾನೆ ಎಂಬ ವಿಷಯ ಕೇಳಿ ಬಹಳ ನೊಂದುಕೊಂಡನು. ''ರಾಜಧಾನಿಯ ಬಳಿಯೇ ಉಳಿದುಕೊಳ್ಳಿರಿ, ಅದಕ್ಕೆ ಬೇಕಾದ ಎಲ್ಲ ಸವಲತ್ತುಗಳನ್ನೂ ನಾನು ಮಾಡಿಕೊಡುತ್ತೇನೆ'' ಎಂದೂ ಕೇಳಿಕೊಂಡನು. ಆದರೆ ಬೋಧಿಧರ್ಮನು ತನ್ನ ಗುರುಗಳ ಆದೇಶದಂತೆ, ಚೀನಾ ದೇಶಕ್ಕೆ ಹೋಗಲೇಬೇಕೆಂದು ನಿಶ್ಚಯ ಮಾಡಿದನು.

ತನ್ನ ಚಿಕ್ಕಪ್ಪನನ್ನು ಇನ್ನು ಕಾಂಚೀಪುರದಲ್ಲಿಯೇ ಉಳಿಸಿಕೊಳ್ಳಲು ಆಗುವುದಿಲ್ಲವೆಂದು ರಾಜನಿಗೆ ಮನವರಿಕೆಯಾಯಿತು. ಚೀನಾ ದೇಶದಲ್ಲಿ ಬೋಧಿಧರ್ಮನಿಗೆ ಯಾವುದೇ ತೊಂದರೆ ಆಗದಿರಲೆಂದು, ಪಾರಿವಾಳಗಳ ಮೂಲಕ ಸಂದೇಶಗಳನ್ನು ಕಳಿಸಿಕೊಟ್ಟನು. ಮಹಾತ್ಮರಾದ ಬೋಧಿಧರ್ಮರು ಚೀನಾ ದೇಶಕ್ಕೆ ಆಗಮಿಸುವರೆಂದೂ, ಅವರನ್ನು ಸರಿಯಾಗಿ ನೋಡಿಕೊಳ್ಳಬೇಕೆಂದೂ ಆ ಸಂದೇಶ ಪತ್ರಗಳ ಒಕ್ಕಣೆಯಾಗಿತ್ತು. 'ಈ ಬೌದ್ಧ ಸಂನ್ಯಾಸಿಯಲ್ಲಿ ಅದೇನು ವಿಶೇಷತೆ ಇದೆ? ಭಾರತ ದೇಶದ ರಾಜನೊಬ್ಬ ಈ ಬಗೆಯ ಸಂದೇಶಗಳನ್ನು ಕಳಿಸುತ್ತಿದ್ದಾನಲ್ಲ!' ಎಂದು ಚೀನಾ ದೇಶೀಯರು ಆಶ್ಚರ್ಯಪಟ್ಟರು.

ಚೀನಾದೇಶಕ್ಕೆ ಪ್ರಯಾಣ

ಬೋಧಿಧರ್ಮನು ಚೀನಾ ದೇಶಕ್ಕೆ ಹೋಗಿದ್ದಾದರೂ ಹೇಗೆ? ಇದರ ಬಗ್ಗೆ ಇತಿಹಾಸಕಾರರಲ್ಲಿ ಬಹಳಷ್ಟು ಭಿನ್ನಾಭಿಪ್ರಾಯಗಳಿವೆ. ಹಿಮಾಲಯ ಪರ್ವತಶ್ರೇಣಿಗಳನ್ನು ದಾಟಿ ಅವನು ಚೀನಾ ಪ್ರವೇಶ ಮಾಡಿದನೆಂದು ಕೆಲವರು ನಂಬಿದರೆ, ಸಾಗರ ಮಾರ್ಗವಾಗಿ ಅವನು ಚೀನಾ ದೇಶಕ್ಕೆ ಹೋದನೆಂದು ಮತ್ತೆ ಕೆಲವರು ಅಭಿಪ್ರಾಯಪಡುತ್ತಾರೆ. ಅಲ್ಲದೆ, ಅವನ ಪ್ರಯಾಣಕ್ಕೆ ತಗಲಿದ ಸಮಯಾವಕಾಶದ ಬಗ್ಗೆಯೂ ಬಹಳಷ್ಟು ಭಿನ್ನಾಭಿಪ್ರಾಯಗಳಿವೆ. ಈ ಪ್ರಯಾಣಕ್ಕೆ ಮೂರು ವರ್ಷಗಳು ಹಿಡಿದವಂತೆ.

ಬೋಧಿಧರ್ಮ ಚೀನಾ ದೇಶವನ್ನು ಪ್ರವೇಶಿಸಿದ್ದು ಸರಿಸುಮಾರು ಕ್ರಿ.ಪೂ. ೫೨೭ರಲ್ಲಿ; ಶಾವೊಲಿನ್ ದೇವಸ್ಥಾನ ಉದ್ಘಾಟನೆಯಾದ ಮೂವತ್ತೆರಡು ವರ್ಷಗಳ ನಂತರ. ಅವನು ಮೊದಲು ಪ್ರವೇಶಿಸಿದ್ದು ಗಾವ್‌ಡಾಂಗ್ ಎಂಬ ಪ್ರಾಂತ್ಯವನ್ನು.

ಅವನ ಕೀರ್ತಿ ಮುಂಚೆಯೇ ಅಲ್ಲೆಲ್ಲಾ ಹಬ್ಬಿತ್ತು. ಅವನನ್ನು ನೋಡಲು ನೂರಾರು ಜನ ನೆರೆದಿದ್ದರು. ಅವರೆಲ್ಲ ಅವನನ್ನು ಪ್ರವಚನ ನೀಡುವಂತೆ ಕೇಳಿಕೊಂಡರು. ಬೋಧಿಧರ್ಮನದು ವಿಚಿತ್ರ ನಡವಳಿಕೆ. ಪ್ರವಚನ ನೀಡುವ ಬದಲಾಗಿ ಅಲ್ಲಿಯೇ ಕುಳಿತುಬಿಟ್ಟನು. ಗಾಢವಾದ ಧ್ಯಾನದಲ್ಲಿ ತಲ್ಲೀನನಾದನು. ಹಲವಾರು ಗಂಟೆಗಳ ನಂತರ ಎದ್ದು ಹೊರಟುಬಿಟ್ಟನು. ಇದನ್ನು ನೋಡಿ ಜನರು ಪ್ರಭಾವಿತರಾದರು. ಈ ಭಾರತೀಯ ಬೌದ್ಧ ಗುರುವಿನ ಧ್ಯಾನಸಿದ್ಧಿಯನ್ನು ಕಂಡು ಬೆರಗಾದರು.

ಚೀನಾ ದೇಶದ ದೊರೆ ವು ಟಿ

ಚೀನಾ ದೇಶಕ್ಕೆ ಬಂದ ಪ್ರಾರಂಭದ ದಿನಗಳಲ್ಲಿಯೇ ಬೋಧಿಧರ್ಮನು ಆ ದೇಶದ ದಕ್ಷಿಣ ಭಾಗವನ್ನು ಆಳುತ್ತಿದ್ದ ವು ಟಿ ಎಂಬ ರಾಜನನ್ನು ಭೇಟಿ ಮಾಡಿದನು. ಈ ರಾಜನು ಬೌದ್ಧಧರ್ಮದ ಶ್ರದ್ಧಾಳು ಅನುಯಾಯಿ. ಅವನು ಬುದ್ಧನ ಅನೇಕ ಮೂರ್ತಿಗಳನ್ನು ನಿರ್ಮಾಣ ಮಾಡಿಸಿದ್ದನು, ಹಲವಾರು ದೇವ ಮಂದಿರಗಳನ್ನು ಕಟ್ಟಿಸಿದ್ದನು; ಹತ್ತುಹಲವು ಬೌದ್ಧ ಧರ್ಮಗ್ರಂಥಗಳನ್ನು ಪ್ರತಿ ಮಾಡಿಸಿದ್ದನು. ಅದೇ ರೀತಿ ಹಲವು ದಾನಧರ್ಮಗಳನ್ನು ಮಾಡಿದ್ದನು. ಅವನು ಬೋಧಿಧರ್ಮನ ಜೊತೆಗೆ ನಡೆಸಿದ ಸಂಭಾಷಣೆ ಹೀಗಿತ್ತು:

ರಾಜ: ನಾನು ರಾಜನಾದ ಮೇಲೆ ಹಲವಾರು ಧರ್ಮ ಕಾರ್ಯಗಳನ್ನು ಮಾಡಿದ್ದೇನೆ. ನನಗೆ ಎಷ್ಟು ಪುಣ್ಯ ಬರುತ್ತದೆ?

ಬೋಧಿಧರ್ಮ: ನಿನಗೆ ಯಾವ ಪುಣ್ಯವೂ ಬರುವುದಿಲ್ಲ.

(ರಾಜ ಈ ಉತ್ತರದಿಂದ ದಿಗ್ಭ್ರಮೆಗೊಳ್ಳುತ್ತಾನೆ.)

ರಾಜ: ಎಲ್ಲ ಪವಿತ್ರ ಉಪದೇಶಗಳಲ್ಲಿನ ಮೊದಲನೆಯ ನಿಯಮ ಅದಾವುದು?

ಬೋಧಿಧರ್ಮ : ಅವೆಲ್ಲದರಲ್ಲಿ ಇರುವುದು ವಿಸ್ತಾರವಾದ ಶೂನ್ಯವೊಂದೇ. ಅವಾವುದೂ ಪವಿತ್ರವೇನೂ ಅಲ್ಲ.

(ರಾಜ ಮತ್ತಷ್ಟು ದಿಗ್ಭ್ರಮೆಗೊಳ್ಳುತ್ತಾನೆ.)

ರಾಜ : ಹಾಗಾದರೆ ನನ್ನ ಮುಂದೆ ಈಗ ನಿಂತುಕೊಂಡಿರುವವನು (ಬೋಧಿಧರ್ಮನೆಂಬ ವ್ಯಕ್ತಿ) ಅದಾರು?

ಬೋಧಿಧರ್ಮ : ನನಗೆ ಗೊತ್ತಿಲ್ಲ.

ರಾಜ : ಈ ಜಗತ್ತಿನಲ್ಲಿ ಬುದ್ಧ ಎನ್ನುವವನು ಇರುವನೆ?

ಬೋಧಿಧರ್ಮ : ಖಂಡಿತ ಇಲ್ಲ.

ಈ ಉತ್ತರಗಳಿಂದ ರಾಜನಿಗೆ ಬಹಳ ನಿರಾಸೆಯಾಯಿತು. ಭಾರತದಿಂದ ಬಂದ ಸಂನ್ಯಾಸಿಯಿಂದ ಹೊಗಳಿಕೆ ಮತ್ತು ಪ್ರಶಂಸೆಗಳನ್ನು ಆ ರಾಜನು ಬಯಸಿದ್ದನು. ಒಳ್ಳೆಯದನ್ನು ಮಾಡುವುದು ಪ್ರತಿಯೊಬ್ಬ ರಾಜನ ಕರ್ತವ್ಯ. ಅದರಲ್ಲಿ ಹೊಗಳುವುದು ಏನು

ತಾನೇ ಇದೆ? ಕೀರ್ತಿ ಅಥವಾ ಪ್ರಶಂಸೆಗಳನ್ನು ಅರಸುವ ಬದಲು, ಬುದ್ಧನ ವ್ಯಕ್ತಿತ್ವವನ್ನು ಮೈಗೂಡಿಸಿಕೊಂಡು, ಜನರಿಗೆ ರಾಜನು ಸಹಾಯ ಮಾಡಬೇಕಾಗಿತ್ತು. ಎರಡನೆಯದಾಗಿ, 'ನಾನು ಯಾರು?' ಎಂಬ ಪ್ರಶ್ನೆಯೆ ಬೌದ್ಧಧರ್ಮದಲ್ಲಿ ಅಪ್ರಸ್ತುತ. ತನ್ನಲ್ಲಿ ಒಂದು ಆತ್ಮವಿದೆ ಎನ್ನುವುದೇ ಅ ಜ್ಞಾನದ ಮೂಲ. ಮೂರನೆಯದಾಗಿ, ಬುದ್ಧನೆಂಬ ಪರಿಕಲ್ಪನೆ ಶ್ರದ್ಧೆಯ ವಿಷಯ. ಬುದ್ಧನನ್ನು ನಾವು ಕಂಡುಕೊಳ್ಳಬೇಕಾದ್ದು ನಮ್ಮ ಹೃದಯಮಂದಿರದಲ್ಲಿ. ಹೀಗಾಗಿ ಈ ಪ್ರಶ್ನೆಯೂ ಅಪ್ರಸ್ತುತ. ಹಾಗೆ ನೋಡಿದರೆ, ಅದು ರಾಜನ ಶ್ರದ್ಧಾಹೀನತೆಯನ್ನು ಎತ್ತಿತೋರಿಸುತ್ತದೆ.

ಏನೇ ಆಗಲಿ, ಈ ಉತ್ತರಗಳಿಂದ ಬಹಳ ಕೋಪಗೊಂಡ ರಾಜನು ಬೋಧಿಧರ್ಮನನ್ನು ಅರಮನೆಯಿಂದ ಹೊರಗೆ ಹಾಕಿಸಿ ಬಿಟ್ಟನು. ಸ್ಥಿತಪ್ರಜ್ಞನಾದ ಆ ಮಹಾನ್ ಸಂತನು ನಗುನಗುತ್ತಲೇ ತೆರಳಿದನು. ಹಲವು ವರ್ಷಗಳ ನಂತರ, ಆ ಮೂರ್ಖ ರಾಜನಿಗೆ ತನ್ನ ತಪ್ಪಿನ ಅರಿವಾಯಿತು. ಬೋಧಿಧರ್ಮನ ಸಾವಿನ ವೃತ್ತಾಂತ ವನ್ನು ಕೇಳಿ ತಿಳಿದ ಅವನು ಒಂದು ಫಲಕದ ಮೇಲೆ ಹೀಗೆ ಬರೆಸಿದ:

ಆಹಾ! ಸಂದರ್ಶಿಸದೆಯೇ ಅವನನ್ನು ನಾನು ಕಂಡೆ
ಒಡನಾಡದೆಯೇ ಅವನ ಭೇಟಿ ಮಾಡಿದೆ
ಸಂಭಾಷಿಸದೆಯೇ ಅವನ ಜೊತೆ ಮಾತಾಡಿದೆ
ಈಗ ನಾನು ಆಳವಾಗಿ ಪಶ್ಚಾತ್ತಾಪ ಪಡುತ್ತಿರುವೆ..

(ಜೆನ್ ಬೌದ್ಧ ಸಾಧನಾ ಪದ್ಧತಿಯಲ್ಲಿ ಕೊಯನ್ ಅಥವಾ ಮಾನಸಿಕ ಒಗಟು ಎಂಬ ಸಾಧನೆ ಇದೆ. ಅಂಥ ಹಲವಾರು ಕೊಯನ್‌ಗಳಿಗೆ ಮೇಲಿನ ಸಂಭಾಷಣೆಯೇ ಮೂಲವಾಗಿದೆ ಎಂದು ಜೆನ್ ಸಾಧಕರು ನಂಬುತ್ತಾರೆ. ನಮ್ಮ ಬಾಹ್ಯ ಯಶಸ್ಸುಗಳು ಮತ್ತು ಸಾಧನೆಗಳನ್ನು ಜನರು ಗೌರವಿಸಬೇಕು ಎಂಬ ದೊಡ್ಡ ಬಲೆಗೆ ನಾವು ಸಿಕ್ಕಿಹಾಕಿಕೊಳ್ಳುತ್ತೇವೆ. ಇದು ಸಾಧನೆಯ ಮಾರ್ಗ ದಲ್ಲಿರುವ ದೊಡ್ಡ ಅಡೆತಡೆಯಾಗಿ ಪರಿಣಮಿಸುತ್ತದೆ ಎಂಬುದೇ ಈ ಕೊಯನ್‌ನ ಒಳಾರ್ಥ.)

ವಿರೋಧಗಳ ನಡುವೆ

ಚೀನಾ ದೇಶದಲ್ಲಿ ಬೋಧಿಧರ್ಮನು ಬಹಳಷ್ಟು ವಿರೋಧ ವನ್ನೂ ಎದುರಿಸಬೇಕಾಯಿತು. ಬೌದ್ಧ ಧರ್ಮದ ಅಂತರಾಳವಾದ ಧ್ಯಾನಪದ್ಧತಿ ಮತ್ತು ಮಾನಸಿಕ ನಿಯಂತ್ರಣಗಳನ್ನು ಅವನು ಬೋಧಿಸುತ್ತಿದ್ದನು. ಬೌದ್ಧ ಧಾರ್ಮಿಕ ಗ್ರಂಥಗಳು ಈ ಸಾಧನೆಗೆ ಉಪಕಾರಿಗಳಾಗಬೇಕೇ ಹೊರತು, ಅವುಗಳ ಅಧ್ಯಯನ ಮತ್ತು ವಿಚಾರವಿನಿಯಮಗಳೇ ಪ್ರಮುಖವಾಗಬಾರದು ಎಂದು ಅವನ ಅಭಿಪ್ರಾಯ. ಆದರೆ ಆ ಕಾಲದಲ್ಲಿ, ಬೌದ್ಧ ಧರ್ಮಗ್ರಂಥಗಳ ಅಧ್ಯಯನವೇ ಮುಖ್ಯವಾಗಿತ್ತು; ಧ್ಯಾನಾಭ್ಯಾಸಕ್ಕೆ ಅಷ್ಟೊಂದು ಪ್ರಾಧಾನ್ಯತೆ ನೀಡುತ್ತಿರಲಿಲ್ಲ. ಇದರಿಂದಾಗಿ ಮಡಿವಂತ ಬೌದ್ಧ ಗುರುಗಳು, ಸಂನ್ಯಾಸಿಗಳು ಬೋಧಿಧರ್ಮನನ್ನು ಬಹಳವಾಗಿ ವಿರೋಧಿಸಿದರು. ಅವನ ಮೇಲೆ ಹಲವಾರು ಸಲ ದೈಹಿಕ ಹಲ್ಲೆ ಗಳೂ ನಡೆದವು. ಹಲವಾರು ತಿಂಗಳುಗಳ ಕಾಲ ಅವನು ಭಿಕ್ಷುಕ ನಂತೆ ಊರಿಂದೂರಿಗೆ ಅಲೆದಾಡಿದನು.

ಇಷ್ಟಾದರೂ ಧೃತಿಗೆಡದೆ ಮಹಾತ್ಮ ಬೋಧಿಧರ್ಮನು ತನ್ನ ಪಯಣವನ್ನು ಮುಂದುವರೆಸಿದನು. ನಾನ್‌ಜಿಂಗ್ ಎಂಬ ಪಟ್ಟಣ ವನ್ನು ತಲುಪಿದನು. ಅಲ್ಲಿ 'ಹೂವಿನ ಮಳೆಯ ಉದ್ಯಾನ' ಎಂಬ ಸ್ಥಳವಿತ್ತು. ಜನರು ಅಲ್ಲಿಗೆ ಹೋಗಿ ವಿಶ್ರಮಿಸಿಕೊಳ್ಳುತ್ತಿದ್ದರು. ಅಲ್ಲೊಬ್ಬ ಬೌದ್ಧ ಭಿಕ್ಷು ಪ್ರವಚನ ಮಾಡುತ್ತಿದ್ದನು. ಜನರ ದೊಡ್ಡ ಗುಂಪು ಅವನನ್ನು ತನ್ಮಯತೆಯಿಂದ ಆಲಿಸುತ್ತಿತ್ತು. ಬೋಧಿ ಧರ್ಮನೂ ಅಲ್ಲಿಗೆ ಹೋಗಿ ನಿಂತು ಕೇಳಲಾರಂಭಿಸಿದನು. ಆ ಪ್ರವಚನಕಾರನ ಹೆಸರು ಶೆನ್ ಗುವಾಂಗ್.

ಶಿಷ್ಯನೊಬ್ಬ ಸಿಕ್ಕಿದ

ಶೆನ್ ಗುವಾಂಗ್ ಹಿಂದೆ ಒಬ್ಬ ಪ್ರಸಿದ್ಧ ಸೇನಾ ಅಧಿಕಾರಿಯಾಗಿ ದ್ದನು. ಯುದ್ಧಗಳಲ್ಲಿ ಹಲವಾರು ಜನರನ್ನು ಕೊಂದು ಹಾಕಿದ್ದನು. ಕೊಂದವರ ಕುಟುಂಬದವರು ತನ್ನನ್ನು ಹತ್ಯೆಮಾಡಬಹುದೆಂಬ ಆತಂಕ ಅವನನ್ನು ಕಾಡತೊಡಗಿತು. ಇದು ಅವ ನಲ್ಲಿ ಪರಿವರ್ತನೆ ಯನ್ನು ತಂದಿತು. ಅವನು ಬೌದ್ಧ ಭಿಕ್ಷುವಾದನು. ಕ್ರಮೇಣ ಬಹು ದೊಡ್ಡ ಪ್ರವಚನಕಾರನಾದನು. ಬೋಧಿಧರ್ಮನು ಅವನ ಭಾಷಣ ವನ್ನು ಮನಸ್ಸುಕೊಟ್ಟು ಕೇಳಲು ಆರಂಭಿಸಿದನು. ಭಾಷಣಕಾರನು



ಬೋಧಿಧರ್ಮನ ಪರ್ಯಟನೆ

ಉತ್ತಮ ವಿಚಾರಗಳನ್ನು ಹೇಳಿದಾಗ, ಪ್ರಶಂಸೆಯ ಸೂಚಕವಾಗಿ ತಲೆದೂಗುವನು; ಅವನು ತಪ್ಪು ಮಾಡಿದಾಗ, ವಿರೋಧವನ್ನು ವ್ಯಕ್ತಪಡಿಸಲು ಇಲ್ಲವೆಂಬಂತೆ ತಲೆಯಾಡಿಸುವನು. ಇದನ್ನು ನೋಡುತ್ತಿದ್ದ ಶೆನ್ ಗುವಾಂಗ್‌ನ ಮನಸ್ಸಿನಲ್ಲಿ ಕ್ರೋಧ ಅಧಿಕವಾಗುತ್ತಲೇ ಇತ್ತು. ವಿಚಿತ್ರ, ವಿಕಾರ ರೂಪದ ಈ ವಿದೇಶೀ ಸಂನ್ಯಾಸಿಯ ಈ ಅನಾಗರಿಕ ವರ್ತನೆಯನ್ನು ಅವನು ಸಹಿಸದಾದನು. ಕೋಪದಿಂದ ತನ್ನ ಜಪಮಾಲೆಯ ಮಣಿಗಳನ್ನು ಹರಿದು ಅವನೆಡೆಗೆ ಎಸೆದನು. ವೇಗದಿಂದ ಬಂದೆರಗಿದ ಆ ಮಣಿಗಳು ಬೋಧಿಧರ್ಮನ ಮುಂದಿನ ಎರಡು ಹಲ್ಲುಗಳನ್ನು ಮುರಿದವು. ರಕ್ತ ಹರಿಯಲು ಆರಂಭಿಸಿತು. ಇಷ್ಟಾದರೂ ಪುಣ್ಯಚೇತನನಾದ ಬೋಧಿಧರ್ಮನು ಶೆನ್ ಗುವಾಂಗ್‌ನ ಕಡೆಗೆ ನಗುನಗುತ್ತಲೇ ಮುಖ ಮಾಡಿದನು. ಹಿಂತಿರುಗಿ ಹೊರಟೇಹೋದನು. ಈ ಅದ್ಭುತ ವರ್ತನೆಯನ್ನು ಶೆನ್ ಗುವಾಂಗ್ ಎದುರು ನೋಡಿರಲಿಲ್ಲ. ಅವನು ಬೋಧಿಧರ್ಮನನ್ನೇ ಹಿಂಬಾಲಿಸಲು ಆರಂಭಿಸಿದನು.

ಮಹಾತ್ಮನು ಉತ್ತರ ದಿಕ್ಕಿನತ್ತ ಪಯಣ ಬೆಳೆಸಿ, ಯಾಂಗ್ ಜಿ ನದಿಯ ತಟವನ್ನು ತಲುಪಿದನು. ಅಲ್ಲಿ ಒಬ್ಬ ವೃದ್ಧ ಮಹಿಳೆಯು ಕಟ್ಟಿಗೆಗಳ ಹೊರೆಯನ್ನು ಹೊತ್ತು ನಡೆಯುತ್ತಿದ್ದಳು. ಅವಳೆಡೆಗೆ ಹೋದ ಬೋಧಿಧರ್ಮನು ಒಂದು ಕಟ್ಟಿಗೆಯನ್ನು ನೀಡುವಂತೆ ವಿನಯಪೂರ್ವಕವಾಗಿ ಕೇಳಿಕೊಂಡನು. ಆ ಕಟ್ಟಿಗೆಯನ್ನು ನದಿಯ ನೀರಿನಲ್ಲಿ ತೇಲಲು ಬಿಟ್ಟು, ಅದರ ಮೇಲೆ ತನ್ನ ಕಾಲುಗಳನ್ನು ಇಟ್ಟು ನದಿಯನ್ನು ದಾಟಿಯೇ ಬಿಟ್ಟನು. ದೂರದಿಂದ ಇದನ್ನು ನೋಡುತ್ತಿದ್ದ ಶೆನ್ ಗುವಾಂಗ್ ತಾನೂ ಆ ಮುದುಕಿಯ ಬಳಿಯ ಬಂದು, ಅವಳನ್ನು ಕೇಳದೆಯೇ ಅವಳಿಂದ ಬೊಗಸೆಯಷ್ಟು ಕಟ್ಟಿಗೆಗಳನ್ನು ಕಿತ್ತುಕೊಂಡು, ಅವುಗಳನ್ನು ನದಿಗೆ ಎಸೆದು, ಅವುಗಳ ಮೇಲೆ ಕಾಲಿಟ್ಟನು. ಕಟ್ಟಿಗೆಗಳು ಮುಳುಗಿ ಹೋದವು. ಅವನೂ ಮುಳುಗಲು ಆರಂಭಿಸಿದನು. ಆ ವೃದ್ಧ ಮಹಿಳೆ ಶೆನ್ ಗುವಾಂಗನನ್ನು ಮೇಲೆತ್ತಿ ಕಾಪಾಡಿದಳು. ತನ್ನ ಅನುಮತಿಯಿಲ್ಲದೆ ಕಟ್ಟಿಗೆಗಳನ್ನು ಕಿತ್ತುಕೊಂಡಿದ್ದಕ್ಕೆ ಬೈದಾಡಿದಳು. ಅಗೌರವವನ್ನು ತೋರಿಸಿದ್ದರಿಂದಲೇ ಅವನು ಮುಳುಗಬೇಕಾಯಿತು ಎಂದು ಹೇಳಿಕೊಟ್ಟಳು. ‘ನೀನು ಹಿಂಬಾಲಿಸುತ್ತಿರುವ ವ್ಯಕ್ತಿಯು ಒಬ್ಬ ಮಹಾತ್ಮ’ ಎಂದು ಅವನಿಗೆ ಅರಿವು ಮಾಡಿಕೊಟ್ಟಳು. ಇದೇ ಸಮಯದಲ್ಲಿ ಮುಳುಗಿದ್ದ ಕಟ್ಟಿಗೆಗಳು ಮೇಲೆದ್ದು ಬಂದವು. ಅವುಗಳನ್ನು ಮೆಟ್ಟಿ, ನದಿಯ ಪ್ರವಾಹದ ರಭಸದಲ್ಲಿ ಶೆನ್ ಗುವಾಂಗ್ ಆಚೆಯ ದಡವನ್ನು ತಲುಪಿದನು. ತನ್ನ ಗುರುದೇವನನ್ನು ಅರಸುತ್ತ ಸಾಗಿದನು.


ಶಾವೊಲಿನ್‌ನಲ್ಲಿ ಧ್ಯಾನಸಿದ್ಧ

ತನ್ನನ್ನು ಹಿಂಬಾಲಿಸಿ ಬರುತ್ತಿರುವ ಶೆನ್ ಗುವಾಂಗ್‌ನತ್ತ ಸ್ವಲ್ಪವೂ ಗಮನಕೊಡದ ಬೋಧಿಧರ್ಮನು ಶಾವೊಲಿನ್ ದೇವಮಂದಿರದ ಬಳಿ ಬಂದನು. ಒಂದು ಐತಿಹ್ಯದ ಪ್ರಕಾರ ಅಲ್ಲಿನ ಸಂನ್ಯಾಸಿಗಳು, ಅವನನ್ನು ಒಳಗೆ ಬಿಟ್ಟುಕೊಡಲು ನಿರಾಕರಿಸುತ್ತಾರೆ. ಇನ್ನೊಂದು ಕಥೆಯ ಪ್ರಕಾರ, ಸಂನ್ಯಾಸಿಗಳು ಅವನನ್ನು ಸ್ವಾಗತಿಸಿದರೂ, ಬೋಧಿಧರ್ಮನೇ ಒಳಕ್ಕೆ ಪ್ರವೇಶಿಸಲು ನಿರಾಕರಿಸುತ್ತಾನೆ.

ಶಾವೋಲಿನ್ ದೇಗುಲದ ಹಿಂದೂ ಮುಂದೂ ಹಲವಾರು ಬೆಟ್ಟಗಳಿವೆ. ಬೋಧಿಧರ್ಮನು ದೇವಮಂದಿರದ ಹಿಂದೆ ಇದ್ದ ಗುಡ್ಡವೊಂದನ್ನು ಆರಿಸಿಕೊಂಡನು. ಅಲ್ಲಿನ ಒಂದು ಗವಿಯನ್ನು ಹೊಕ್ಕನು. ಅದರ ಕಲ್ಲುಗೋಡೆಯ ಕಡೆಗೆ ಮುಖಮಾಡಿ ನಿರಂತರ ಧ್ಯಾನವನ್ನು ಮಾಡಲು ಆರಂಭಿಸಿಯೇ ಬಿಟ್ಟನು. ಇದೇ ‘ಗೋಡೆಯ ಕಡೆಗೆ ಮುಖಮಾಡಿ ಮಾಡುವ ಧ್ಯಾನ’ ಎಂದು ಬೋಧಿಧರ್ಮನ ಹೆಸರಿನಲ್ಲಿ ಸುಪ್ರಸಿದ್ಧವಾದ ಧ್ಯಾನವಿಧಾನ.

ಶೆನ್ ಗುವಾಂಗ್ ಗುಹೆಯ ಹೊರಗೆ ಕಾವಲನ್ನು ಕಾಯುತ್ತ ಕುಳಿತನು. ಗುರುವಿಗೆ ಯಾವ ಹಾನಿಯೂ ಆಗದಂತೆ ಎಚ್ಚರ ವಹಿಸಿದನು. ದಿನಗಳಾಯಿತು; ತಿಂಗಳಾಯಿತು; ವರ್ಷಗಳೇ ಆಯಿತು. ಬೋಧಿಧರ್ಮನ ಧ್ಯಾನ ಮುಂದುವರೆದೇ ಇತ್ತು. ಮಧ್ಯೆ ಮಧ್ಯೆ ಶೆನ್ ಗುವಾಂಗ್ ಗುರುವನ್ನು ಅಂಗಲಾಚುವನು; ಶಿಷ್ಯನನ್ನಾಗಿ ಸ್ವೀಕರಿಸಿ ಉಪದೇಶ ಮಾಡಬೇಕೆಂದು ಬೇಡಿಕೊಳ್ಳುವನು. ಆದರೆ ಬೋಧಿಧರ್ಮನ ಮನಸ್ಸು ಕರಗಲೇ ಇಲ್ಲ. ಗುರುವು ಶಿಷ್ಯನ ಕಡೆಗೆ ಕಣ್ಣೆತ್ತಿ ನೋಡಲೂ ಇಲ್ಲ. ಮಧ್ಯೆ ಮಧ್ಯೆ ಶಾವೊಲಿನ್ ಮಠದಿಂದ ಸಂನ್ಯಾಸಿಗಳು ಬಂದುಹೋಗುವರು. ಶಾವೊಲಿನ್ ಮಂದಿರಕ್ಕೆ ಮತ್ತೆ ಮತ್ತೆ ಆಹ್ವಾನಿಸುವರು. ಆದರೆ ಬೋಧಿಧರ್ಮ ಯಾವುದಕ್ಕೂ ಪ್ರತಿಕ್ರಿಯೆ ನೀಡಲಿಲ್ಲ.

ಕೆಲಕಾಲದ ನಂತರ ಬೋಧಿಧರ್ಮನ ಏಕಾಗ್ರತೆ ಮತ್ತಷ್ಟು ಉತ್ಕಟವಾಯಿತು. ಇದರಿಂದ ಅವನ ಪ್ರತಿಕೃತಿಯು ಗುಹೆಯ ಕಲ್ಲುಗೋಡೆಯಲ್ಲಿ ಮೂಡಿತು. ಹೀಗೆಯೇ ಎಂಟು ವರ್ಷ


‘ಗೋಡೆಗೆ ಎದುರಾಗಿ ಧ್ಯಾನ’

ಕಳೆದುಹೋಯಿತು. ಒಂಬತ್ತನೆಯ ವರ್ಷದ ಹೊತ್ತಿಗೆ ಬೋಧಿಧರ್ಮನಿಗಾಗಿ ಒಂದು ವಿಶೇಷ ಕೊಠಡಿಯನ್ನು ಗುಹೆಯ ಪಕ್ಕದಲ್ಲಿಯೇ ಕಟ್ಟಲಾಯಿತು. ಒಂಬತ್ತು ವರ್ಷಗಳ ಸುದೀರ್ಘ ಧ್ಯಾನಾಭ್ಯಾಸದ ನಂತರ ಸ್ವಲ್ಪವೂ ಮಾತನಾಡದೆ ಅವನು ನೂತನ ಕೊಠಡಿಯನ್ನು ಪ್ರವೇಶಿಸಿದನು. ಒಡನೆ ಕುಳಿತು ಮತ್ತೆ ಧ್ಯಾನ ಮಾಡಲು ಆರಂಭಿಸಿದನು. ಈ ಧ್ಯಾನ ನಾಲ್ಕು ವರ್ಷಗಳ ಮುಂದುವರಿಯಿತು.

ಈ ಮಧ್ಯೆ ಶೆನ್ ಗುವಾಂಗನ ಪರಿಸ್ಥಿತಿ ಶೋಚನೀಯವಾಗಿತ್ತು. ಅವನು ಮತ್ತೆ ಮತ್ತೆ ತನ್ನ ಗುರುವನ್ನು ಕೇಳಿಕೊಂಡರೂ, ಬೋಧಿಧರ್ಮನು ಅವನಿಗೆ ಏನನ್ನೂ ಬೋಧಿಸಲಿಲ್ಲ. ನಾಲ್ಕು ವರ್ಷಗಳು ಅಂದರೆ ಒಟ್ಟಾರೆ ಹದಿಮೂರು ವರ್ಷಗಳ ಕಡೆಯಲ್ಲಿ ಭೀಕರ ಚಳಿಗಾಲ ತಲೆದೋರಿತು. ಬಡ ಶೆನ್ ಗುವಾಂಗ್ ಬೋಧಿಧರ್ಮನ ಕೊಠಡಿಯ ಹೊರಗೆ ಚಳಿಯಲ್ಲಿ ನಡುಗುತ್ತ ನಿಂತಿದ್ದನು. ಅವನಿಗೆ ವಿಪರೀತ ಕೋಪ ಬಂತು. ಹಿಮದ ದೊಡ್ಡ ಗಡ್ಡೆಯನ್ನು ತೆಗೆದುಕೊಂಡು, ಕಿಟಕಿಯ ಮೂಲಕ ಕೊಠಡಿಯ ಒಳಕ್ಕೆ ಎಸೆದುಬಿಟ್ಟನು. ಆ ಗಡ್ಡೆಯು ಒಡೆದು ಭಾರೀ ಶಬ್ದ ಉಂಟಾಯಿತು. ಬೋಧಿಧರ್ಮನು ಕಣ್ತೆರೆದು ಶಿಷ್ಯನೆಡೆಗೆ ದಿಟ್ಟಿಸಿ ನೋಡಿದನು. ಶಿಷ್ಯನು ಕೋಪ ಮತ್ತು ಹತಾಶೆಗಳಿಂದ ತನ್ನ ಬೇಡಿಕೆಯನ್ನು ಮತ್ತೆ ಮುಂದಿಟ್ಟನು.

ಗುರುವಿನ ಉಪದೇಶ

ಆಕಾಶದಿಂದ ರಕ್ತಬಣ್ಣದ ಹಿಮವು ಕೆಳಕ್ಕೆ ಬಿದ್ದರೆ ಮಾತ್ರ ತಾನು ಉಪದೇಶ ನೀಡುವುದಾಗಿ ಬೋಧಿಧರ್ಮನು ಶಿಷ್ಯನಿಗೆ ಹೇಳಿದನು. ಇದರಿಂದ ಹತಾಶಗೊಂಡ ಶೆನ್ ಗುವಾಂಗ್ ತನ್ನ ಖಡ್ಗದಿಂದ ಎಡತೋಳನ್ನು ಕತ್ತರಿಸಿ, ರಕ್ತಸಿಕ್ತವಾದ ಎಡಗೈಯನ್ನು ಆಕಾಶದೆತ್ತರ ಎಸೆದನು. ಅದು ಕೆಳಕ್ಕೆ ಬೀಳುವಾಗ ಹಿಮಾವೃತವಾಗಿತ್ತು. ಕೆಂಪು ಬಣ್ಣದ ಹಿಮದಂತೆ ಕಂಡುಬಂತು. ಆಗ ಮಾತ್ರ ಬೋಧಿಧರ್ಮನು ಉಪದೇಶಿಸಲು ಒಪ್ಪಿಕೊಂಡನು. ಶೆನ್ ಗುವಾಂಗ್‌ನ ಜೊತೆಗೆ ಶಿಖರವು ಮಟ್ಟಸವಾಗಿರುವ ಹತ್ತಿರದ ಒಂದು ಗುಡ್ಡವನ್ನು ಹತ್ತಿದನು. ಇದೊಂದು ಮೌನ ಸಂದೇಶವಾಗಿತ್ತು. ಗುಡ್ಡದ ಶಿಖರವು ಮಟ್ಟಸವಾಗಿರುವಂತೆ, ಮನಸ್ಸನ್ನೂ ಯಾವುದೇ ಪ್ರಕ್ಷುಬ್ಧತೆಗಳಿಲ್ಲದೆ ಮಟ್ಟಸಗೊಳಿಸಬೇಕೆಂಬ ಈ ದಿವ್ಯ ಸಂದೇಶವನ್ನು ಶಿಷ್ಯನು ಅರ್ಥ ಮಾಡಿಕೊಂಡನು. ಅವನನ್ನು ಅಲ್ಲಿಯೇ ಬಿಟ್ಟು ಬೋಧಿಧರ್ಮ ಹೊರಟುಹೋದನು. ಶಿಷ್ಯನು ಆ ಪರ್ವತದಲ್ಲಿಯೇ ಏಕಾಂತದಲ್ಲಿ ಸಾಧನೆಯಲ್ಲಿ ಮುಳುಗಿದನು. ಸುಖದುಃಖಗಳನ್ನು ಸಮಾನವಾಗಿ ಕಾಣಬೇಕೆಂಬ ಸತ್ಯವನ್ನು ಮನಗಂಡನು. ಹೀಗೆ ಹೆಚ್ಚು ಮಾತುಗಳನ್ನು ಆಡದೆಯೇ ಮನಸ್ಸಿನಿಂದ ಮನಸ್ಸಿಗೆ, ಹೃದಯದಿಂದ ಹೃದಯಕ್ಕೆ ನೀಡುವ ದೊಡ್ಡ ಪಾಠವನ್ನು ಬೋಧಿಧರ್ಮನು ಹೇಳಿಕೊಟ್ಟನು. ಈ ವಿಧಾನವನ್ನು 'ಕ್ರಿಯಾಭಾಷೆ' ಎಂದು ಜೆನ್ ಉಪಾಸನಾ ವಿಧಾನದಲ್ಲಿ ಕರೆಯುತ್ತಾರೆ. ಈ ಸಾಧನೆಯನ್ನು ಮಾಡಿದ ಶೆನ್ ಗುವಾಂಗ್ ಸಾಕ್ಷಾತ್ಕಾರದ ನಂತರ ಹುಯಿ ಕೆ ಎಂಬ ಹೆಸರನ್ನು



ಎಡಗೈ ಕತ್ತರಿಸಿದ ಶಿಷ್ಯ

ಪಡೆದುಕೊಂಡ. ಶಾವೊಲಿನ್ ದೇಗುಲದ ಮಹಂತನಾದ. ಅವನ ಎಡಗೈ ಕತ್ತರಿಸಿಕೊಂಡಿದ್ದರಿಂದ, ಬಲಗೈಯಲ್ಲಿ ಮಾತ್ರ ನಮಸ್ಕರಿಸುತ್ತಿದ್ದ. ಹೀಗಾಗಿ ಈಗಲೂ ಜೆನ್ ಸಂನ್ಯಾಸಿಗಳು ಬಲಗೈಯಲ್ಲಿ ಮಾತ್ರವೇ ನಮಸ್ಕಾರವನ್ನು ಪರಸ್ಪರ ವಿನಿಮಯ ಮಾಡಿಕೊಳ್ಳುತ್ತಾರೆ.

ಬೋಧಿಧರ್ಮನ ಖ್ಯಾತಿ

ಚೀನಾ ದೇಶದ ಬೌದ್ಧ ಸಂನ್ಯಾಸಿಗಳಿಗೆ ಧ್ಯಾನದಲ್ಲಿ ತಲ್ಲೀನರಾಗಲು ಬೇಕಾದ ಶಾರೀರಕ ಕ್ಷಮತೆ ಇಲ್ಲದಿರುವುದನ್ನು ಗಮನಿಸಿ, ಬೋಧಿಧರ್ಮನು ಅವರಿಗೆ ಅನೇಕ ದೈಹಿಕ ವ್ಯಾಯಾಮಗಳನ್ನೂ, ಯುದ್ಧ ಕ್ರಿಯೆಗಳನ್ನೂ ಹೇಳಿಕೊಟ್ಟನು. ಅದೇ ಮುಂದೆ ಕುಂಗ್-ಫು ಯುದ್ಧ ಪದ್ಧತಿಯಾಗಿ ಅಭಿವೃದ್ಧಿ ಹೊಂದಿತು.

ಬೋಧಿಧರ್ಮನು ಸುಮಾರು ೧೫೦ ವರ್ಷಗಳ ಕಾಲ ಜೀವಿಸಿದ್ದನು ಎಂದು ಒಂದು ಐತಿಹ್ಯ ಹೇಳುತ್ತದೆ. ಅವನು ಚೀನಾ ದೇಶದಲ್ಲಿಯೇ ದೇಹತ್ಯಾಗ ಮಾಡಿದನೆಂದು ಕೆಲವರು ಹೇಳಿದರೆ, ಅವನು ತನ್ನ ತಾಯ್ನಾಡಿಗೆ ಹಿಂದಿರುಗಿದನೆಂದು ಮತ್ತೆ ಕೆಲವರು ಅಭಿಪ್ರಾಯಪಡುತ್ತಾರೆ.

ಬೋಧಿಧರ್ಮನು 'ಚಾನ್ ಬೌದ್ಧಧರ್ಮ ಪಂಗಡ' ವನ್ನು ಚೀನಾದೇಶದಲ್ಲಿ ಹುಟ್ಟುಹಾಕಿದನು. ಅವನೊಬ್ಬ ಐತಿಹಾಸಿಕ ವ್ಯಕ್ತಿಯಾಗಿದ್ದರೂ, ಅವನ ಸುತ್ತಲೂ ನೂರಾರು ದಂತಕತೆಗಳು ಕಾಲಾಂತರದಲ್ಲಿ ಹಬ್ಬಿದವು. ಚಾನ್ ಪಂಗಡವು ಜಪಾನ್ ಮತ್ತು ಕೊರಿಯಾ ದೇಶಗಳಿಗೆ ಹಬ್ಬಿತು. ಜಪಾನಿನಲ್ಲಿ ಇದೇ ಈಗ ಪ್ರಸಿದ್ಧವಾಗಿರುವ 'ಜೆನ್ ಧ್ಯಾನವಿಧಾನ' ವಾಗಿ ಬೆಳೆದುಬಂತು. ಜಪಾನಿನಲ್ಲಿ ಬೋಧಿಧರ್ಮನ ಬೊಂಬೆಯನ್ನು ಅದೃಷ್ಟದ ಸಂಕೇತವಾಗಿ ಪರಿಗಣಿಸುತ್ತಾರೆ. ಬೋಧಿಧರ್ಮ ಯುಗ ಪ್ರವರ್ತಕನಾದ ಮಹಾನ್ ಸಂತ; ಬೌದ್ಧಧರ್ಮೀಯರು ನಂಬುವಂತೆ ಇವನು ಎರಡನೆಯ ಬುದ್ಧನೇ ಸರಿ.


ದೇವಸೇನಾಪತಿ

ಕಥೆ : ರೇವತಿ ಮತ್ತು ಅಕ್ರಿಕಣ್ಣನ್ **ಚಿತ್ರ: ಶಂಕರ್**


1 ಒಂದು ದಿನ ಕೈಲಾಸ ದ್ವಾರದಲ್ಲಿ ದೇವತೆಗಳು ಮತ್ತು ಋಷಿಗಳು ಶಿವನ ಇಬ್ಬರು ಪುತ್ರರಿಗೆ ಪ್ರಾರ್ಥನೆ ಸಲ್ಲಿಸಿ ಹೊರಗೆ ಬರುತ್ತಿದ್ದರು.




2



3




4
ಸ್ವಾಮಿ, ಸ್ವಲ್ಪ ನಿಲ್ಲಿ!
ನೀವು ಯಾರು ಹೇಳಿ?
5
ಷಣ್ಮುಖ, ಯುಗ ಯುಗಗಳಿಂದಲೂ ಎಲ್ಲ ಜೀವಿಗಳನ್ನು ಸೃಷ್ಟಿಸುತ್ತಿರುವ ಬ್ರಹ್ಮನೇ ನಾನು. ಈ ವಿಚಾರ ನಿನಗೇಕೆ ತಿಳಿದಿಲ್ಲ?
ಸ್ವಾಮಿ, ನಾನೊಂದು ಪ್ರಶ್ನೆ ಕೇಳುತ್ತೇನೆ. ಎಲ್ಲ ಸೃಷ್ಟಿಗೆ ಆಧಾರ ಯಾವುದು?
6
ಕಾರ್ತಿಕೇಯ, ಓಂಕಾರವೇ ಎಲ್ಲ ಸೃಷ್ಟಿಗೆ ಮೂಲ. ವೇದಗಳೂ ಅದರಿಂದಲೇ ಹುಟ್ಟಿವೆ. ಇವುಗಳು ದೊಡ್ಡವರು ವಿಚಾರ ಮಾಡುವ ತತ್ತ್ವಗಳು. ಇವೆಲ್ಲಾ ನಿನಗೇಕೆ?
ದಯವಿಟ್ಟು ನನಗೆ ಓಂಕಾರದ ತತ್ತ್ವವನ್ನು ವಿವರಿಸಿ.
7
ಅದನ್ನು ವಿವರಿಸಿ ಹೇಳಲು ಸಾಧ್ಯವಿಲ್ಲ. ಅದನ್ನು ಅನುಭವಿಸಿ ತಿಳಿಯಬೇಕು, ಅಷ್ಟೆ.
ಲಕ್ಷ ಲಕ್ಷ ಯುಗಗಳಿಂದ ನೀನು ಮಾಡುತ್ತಿರುವ ಸೃಷ್ಟಿಕಾರ್ಯದ ಮೂಲ ಓಂಕಾರವನ್ನು ಕುರಿತು ನಿನಗೆ ವಿವರಿಸಲಾಗದೆ? ಆಗದಿದ್ದರೆ ನೀನು ಸೃಷ್ಟಿ ಮಾಡುವುದೆಲ್ಲ ಹೇಗೆ ಸರಿಯಾಗುವುದು? ತಾನೇನು ಮಾಡುತ್ತಿದ್ದೇನೆ ಎಂಬುದನ್ನು ವಿವರಿಸಲಾಗದ ಗುರು ಶಿಕ್ಷೆಗೆ ಅರ್ಹನು.
ಅನಂತರ ಕಾರ್ತಿಕೇಯನು ಬ್ರಹ್ಮನ ನಾಲ್ಕೂ ತಲೆಗಳ ಮೇಲೆ ಹೊಡೆದನು.



8
ವೀರಬಾಹು, ಓಂಕಾರವೆಂದರೆ ಏನೆಂದು ವಿವರಿಸಲಾಗದ
ಈ ವ್ಯಕ್ತಿಯನ್ನು ಸೆರೆಮನೆಗೆ ತಳ್ಳಿ !
ಷಣ್ಮುಖನ ಆಜ್ಞೆಯನ್ನು ಅವನ ಸೇನಾಧಿಪತಿಯು ಕೂಡಲೇ ನೆರವೇರಿಸಿದ.
9
ಸೃಷ್ಟಿಕರ್ತ ಬ್ರಹ್ಮನನ್ನು ಸೆರೆಮನೆಯಲ್ಲಿ ಇಟ್ಟಿದ್ದರಿಂದ ಸೃಷ್ಟಿಕಾರ್ಯ ನಿಂತು ಹೋಗಿತ್ತು. ಮಹಾವಿಷ್ಣು ಶಿವನ ಬಳಿಗೆ ಹೋಗಿ ದೂರು ನೀಡಿದ.
ಚಿಂತಿಸಬೇಡ. ನಂದಿ, ಈ ಕೂಡಲೇ ಕಾರ್ತಿಕೇಯನ ಬಳಿಗೆ ಹೋಗು. ಬ್ರಹ್ಮನನ್ನು ಈಗಲೇ ಸೆರೆಮನೆಯಿಂದ ಬಿಡಿಸುವಂತೆ ನಾನು ಹೇಳಿದ್ದಾಗಿ ತಿಳಿಸು.
10
ಪ್ರಭು, ಬ್ರಹ್ಮನನ್ನು ಈಗಲೇ ಬಿಡುಗಡೆ ಮಾಡಬೇಕೆಂದು ನಿಮ್ಮ ತಂದೆ ಆಜ್ಞಾಪಿಸಿದ್ದಾರೆ. ಸೃಷ್ಟಿಕಾರ್ಯ ನಡೆಯದೆ ಇಡೀ ವಿಶ್ವವೇ ಸ್ತಬ್ಧವಾಗಿದೆ.
ದಯವಿಟ್ಟು ನನ್ನ ತಂದೆಗೆ ತಿಳಿಸು– ಸೃಷ್ಟಿಗೆ ಮೂಲವಾದ ಓಂಕಾರ ಎಂದರೆ ಏನೆಂದು ವಿವರಿಸಲು ಸಾಧ್ಯವಾಗದೆ ಹೋದದ್ದಕ್ಕೆ ನಾನು ಅವನಿಗೆ ನೀಡಿದ ಶಿಕ್ಷೆಯಷ್ಟೇ ಇದು– ಎಂದು. ಹಾಗೆ ವಿವರಿಸಲಾಗದೆ ಇದ್ದರೆ ಅವನು ಸೃಷ್ಟಿ ಕಾರ್ಯ ಮಾಡುವುದು ಸರಿಯಾಗದು. ಅವನು ಸೆರೆಮನೆಯಲ್ಲಿ ಇರಲು ಯೋಗ್ಯ ಎಂದು ತಿಳಿಸು.
ಪರಶಿವನ ಆಜ್ಞೆಯನ್ನು ಮೀರುವುದು ಅಪರಾಧವಲ್ಲವೇ, ಪ್ರಭೂ ?
ನಂದಿದೇವ, ದಯವಿಟ್ಟು ಕ್ಷಮಿಸು.
11
ಏನು! ಶಿವನ ಆಜ್ಞೆಯನ್ನು ಧಿಕ್ಕರಿಸುವುದು ಅಪರಾಧವೆಂದು ತಿಳಿಸಿದ ಮೇಲೂ ಅವನು ಒಪ್ಪಲಿಲ್ಲವೆ? ಇರಲಿ, ನಾನೇ ಹೋಗಿ ಅವನನ್ನು ಭೇಟಿಯಾಗುತ್ತೇನೆ.

12




ಷಣ್ಮುಖನು ಶಿವನ ಆಜ್ಞೆಯನ್ನು ಆ ಕೂಡಲೇ ಪಾಲಿಸಬೇಕಾಯಿತು. ಬೇರೆ ದಾರಿಯೇ ಇರಲಿಲ್ಲ.

13



14




15

ಕಾಂಚೀಪುರದ ಕುಮಾರಕೋಟಂ ಎಂಬಲ್ಲಿ ಕಾರ್ತಿಕೇಯನು (ಅಥವಾ ಸುಬ್ರಹ್ಮಣ್ಯ, ಷಣ್ಮುಖ) ತನ್ನ ಅಪರಾಧವನ್ನು ಹೋಗಲಾಡಿಸಲು ಸ್ಥಾಪಿಸಿದ ಶಿವಲಿಂಗವು ಇಂದಿಗೂ 'ದೇವಸೇನಾಪತಿ' ಎಂಬ ಹೆಸರಿನಿಂದ ಪೂಜಿಸಲ್ಪಡುತ್ತಿದೆ.

16

ಮುಂದೊಂದು ದಿನ ಸಂನ್ಯಾಸಿಯೊಬ್ಬನು ಈ ಶಿವಲಿಂಗವನ್ನು ಪೂಜಿಸದೆ ಇದ್ದಾಗ, ಷಣ್ಮುಖನು ಯುವಕನ ವೇಷಧರಿಸಿ ಬಂದು, ಆ ಲಿಂಗವನ್ನು ಪೂಜಿಸುವಂತೆ ಆತನನ್ನು ಪ್ರೇರೇಪಿಸಿದನು ಎಂಬ ಪ್ರತೀತಿ ಇದೆ.
(ಆಕರ: ಸ್ಕಾಂದ ಪುರಾಣ, ಕಾಂಚೀಪುರದ ಸ್ಥಳ ಪುರಾಣ)





ದೇವರು ಸರ್ವಶಕ್ತ ಎಂಬುದೇನೋ ನಿಜ. ಆದರೆ ಕೆಲವರಿಗೆ ಮಾತ್ರ ಇದರ ಅರಿವಿದೆ. ಜನರು ಅಹಂಕಾರದಿಂದ ತಾವೇ ಎಲ್ಲವನ್ನೂ ಮಾಡುತ್ತಿರುವುದಾಗಿ ತಿಳಿಯುತ್ತಾರೆ. ಅವರು ದೇವರನ್ನು ನಂಬುವುದಿಲ್ಲ. ಆದರೆ ಯಾರಿಗೆ ದೇವರ ಮೇಲೆ ನಿಜವಾದ ನಂಬಿಕೆ ಇರುವುದೋ ಅವರನ್ನು ಆ ಭಗವಂತನು ಎಲ್ಲ ತೊಂದರೆಗಳಿಂದಲೂ ಪಾರು ಮಾಡುತ್ತಾನೆ. – ಶ್ರೀಮಾತೆ ಶಾರದಾದೇವಿ

ಸುದ್ದಿ ಸಂಚಯ

‘ಸ್ವಚ್ಛ ಮೈಸೂರು, ಸ್ವಸ್ಥ ಜೀವನ’ ಮೈಸೂರು ಅಗ್ರಹಾರ ಬಡಾವಣೆಯಲ್ಲಿ



ಮೈಸೂರು ಶ್ರೀರಾಮಕೃಷ್ಣ ಆಶ್ರಮವು ಹಮ್ಮಿಕೊಂಡಿರುವ ೪೦ ವಾರಗಳ **“ಸ್ವಚ್ಛ ಮೈಸೂರು, ಸ್ವಸ್ಥ ಜೀವನ”** ಎಂಬ ಸ್ವಚ್ಛತಾ ಅಭಿಯಾನ ಮತ್ತು ಜನಜಾಗೃತಿ ಕಾರ್ಯಕ್ರಮದ ೩೬ನೇ ವಾರದ ಅಭಿಯಾನವು ನಗರದ ಅಗ್ರಹಾರದ ಚೆಲುವಾಂಬ ಅಗ್ರಹಾರ, ದೇವಾಂಬ ಅಗ್ರಹಾರ, ಕೆಂಪನಂಜಾಂಬ ಅಗ್ರಹಾರ, ಬನುಮಯ್ಯ ರಸ್ತೆ, ಕಾಶೀಪತಿ ಅಗ್ರಹಾರ, ಬಿ.ಬಿ ಲಾಯ, ತ್ಯಾಗರಾಜ ರಸ್ತೆ, ರಾಮಾನುಜ ರಸ್ತೆ, ಉತ್ತರಾದಿ ಮಠದ ರಸ್ತೆ ಮತ್ತು ಶಂಕರ ಮಠದ ರಸ್ತೆ ಸೇರಿದಂತೆ ವಿವಿಧ ಭಾಗಗಳಲ್ಲಿ ಯಶಸ್ವಿಯಾಗಿ ನಡೆಯಿತು.

೩೬ನೇ ವಾರದ ಅಭಿಯಾನದ ಉದ್ಘಾಟನೆಯನ್ನು ಕೇಂದ್ರ ಕುಡಿಯುವ ನೀರು ಮತ್ತು ನೈರ್ಮಲ್ಯ ಖಾತೆ ಸಚಿವರಾದ ಶ್ರೀ ರಮೇಶ್ ಜಿಗಜಿಣಗಿಯವರು ನೆರವೇರಿಸಿಕೊಟ್ಟರು. ಶ್ರೀರಾಮಕೃಷ್ಣ ಆಶ್ರಮದ ಅಧ್ಯಕ್ಷರಾದ ಸ್ವಾಮಿ ಆತ್ಮಜ್ಞಾನಂದಜಿ, ಹೊಸಮಠದ ನಿರಂಜನ ಪ್ರಣವ ಸ್ವರೂಪಿ ಶ್ರೀಚಿದಾನಂದ ಮಹಾಸ್ವಾಮಿಗಳು, ಮಾಜಿ ವಿಧಾನ ಪರಿಷತ್ ಸದಸ್ಯರಾದ ಶ್ರೀ.ಡಿ.ಮಾದೇಗೌಡರು, ಮಹಾನಗರಪಾಲಿಕೆಯ ಮಹಾಪೌರರಾದ ಎಂ.ಜೆ.ರವಿಕುಮಾರ್, ಮಾಜಿ ವೈದ್ಯಕೀಯ ಶಿಕ್ಷಣ ಸಚಿವ ಶ್ರೀ ಎಸ್.ಎ.ರಾಮದಾಸ್, ಮಾಜಿ ಸಚಿವ ಶ್ರೀ ಎಂ.ಶಿವಣ್ಣ, ಪ್ರೊ.ಕೆ.ಎಸ್.ನಾಗಪತಿ ಮುಂತಾದ ಗಣ್ಯರು ಅಭಿಯಾನದ ಉದ್ಘಾಟನೆಯಲ್ಲಿ ಭಾಗವಹಿಸಿದ್ದರು.

ಸ್ವಯಂಸೇವಕರು ಮನೆಮನೆಗಳಿಗೆ ಭೇಟಿ ನೀಡಿ ಸಾರ್ವಜನಿಕರಿಗೆ ಅರಿವು ನೀಡುವ ಕಾರ್ಯದಲ್ಲಿ ಪಾಲ್ಗೊಂಡರು.

ಆಶ್ರಮದ ಸ್ವಯಂಸೇವಕರು, ವಿವಿಧ ಶೈಕ್ಷಣಿಕ ಸಂಸ್ಥೆಗಳ ವಿದ್ಯಾರ್ಥಿಗಳು ಮತ್ತು ಸ್ಥಳೀಯ ನಾಗರಿಕರನ್ನು ಒಳಗೊಂಡಂತೆ ಒಟ್ಟು ೪೦೦ ಜನ ಅಭಿಯಾನದಲ್ಲಿ ಪಾಲ್ಗೊಂಡರು.



ತಿರುಪತಿ ಆಶ್ರಮದಲ್ಲಿ ನಿವೇದಿತಾ ಜಯಂತಿ

ತಿರುಪತಿ ರಾಮಕೃಷ್ಣ ಮಿಷನ್ ೨೦೧೭ರ ಅಕ್ಟೋಬರ್ ೨೮ ರಂದು ಸೋದರಿ ನಿವೇದಿತಾ ಅವರ ೧೫೦ ನೇ ಜಯಂತಿ ಕಾರ್ಯಕ್ರಮವನ್ನು ಆಚರಿಸಿತು. ಈ ಪ್ರಯುಕ್ತ ‘**ಭಾರತೀಯ ನಿವೇದಿತಾ**’ ಎಂಬ ವಿಚಾರ ಗೋಷ್ಠಿಯನ್ನು ಆಯೋಜಿಸಲಾಗಿತ್ತು.

ತಿರುಪತಿ ಭಾರತೀಯ ವಿದ್ಯಾಭವನದ ನಿರ್ದೇಶಕರಾದ ಶ್ರೀ ಎನ್. ಸತ್ಯನಾರಾಯಣ ರಾಜು ಅವರು ಈ ಸಂದರ್ಭದಲ್ಲಿ ಮಾತನಾಡುತ್ತ, ‘‘ಸ್ವಾತಂತ್ರ್ಯ ಸಂಗ್ರಾಮ, ಕಲೆ, ಸಂಸ್ಕೃತಿ, ಸ್ತ್ರೀಶಿಕ್ಷಣ ಮೊದಲಾದ ಕ್ಷೇತ್ರಗಳಲ್ಲಿ ನಿವೇದಿತಾ ನೀಡಿದ ಕೊಡುಗೆ ಅಸಾಧಾರಣವಾದುದು. ಅವಳ ಹಾಗೆ ಭಾರತ ಹಾಗೂ ಭಾರತೀಯರನ್ನು ಪ್ರೀತಿಸಿದವರು ಬೇರೆ ಯಾರೂ ಇಲ್ಲ. ಆದ ಕಾರಣ ಇಂದಿನ ಯುವಪೀಳಿಗೆ ನಿವೇದಿತೆಯಿಂದ ದೇಶಭಕ್ತಿಯನ್ನು ಕಲಿಯಬೇಕಾಗಿದೆ’’ ಎಂದರು. ಆಂಧ್ರ ಬ್ಯಾಂಕಿನ ಸಹಾಯಕ ಜನರಲ್ ಮ್ಯಾನೇಜರ್ ಶ್ರೀ ಕೃಷ್ಣ ಮೋಹನ್ ಹಾಗೂ ಸುಪ್ರಸಿದ್ಧ ವೈದ್ಯೆ ಡಾ.ಲೀಲಾ ಮುಂತಾದವರು ಅತಿಥಿಗಳಾಗಿ ಭಾಗವಹಿಸಿದ್ದರು.







ತಿರುಪತಿ ಶ್ರೀ ವೆಂಕಟೇಶ್ವರ ವಿಶ್ವವಿದ್ಯಾನಿಲಯಕ್ಕೆ ಸೇರಿದ ೧೦ ಕಾಲೇಜುಗಳಿಂದ ಬಂದ ಸುಮಾರು ೨೫೦ ಮಂದಿ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಅವರಲ್ಲಿ ೧೭೦ ಮಂದಿ ವಿದ್ಯಾರ್ಥಿಗಳು ಪ್ರಬಂಧಗಳನ್ನು ಬರೆದು ಸಲ್ಲಿಸಿದರು ಹಾಗೂ ೨೬ ಮಂದಿ ವಿದ್ಯಾರ್ಥಿಗಳು ವಿಚಾರಗೋಷ್ಠಿಯಲ್ಲಿ ಪಾಲ್ಗೊಂಡರು. ೮ ಮಂದಿ ವಿದ್ಯಾರ್ಥಿಗಳಿಗೆ ಈ ಸಂದರ್ಭದಲ್ಲಿ ಬಹುಮಾನ ವಿತರಣೆ ಮಾಡಲಾಯಿತು.

Managing Editor : Swami Atmajnananda
Editor : Swami Jnanayogananda
Printed and Published by Swami Atmajnananda, on behalf of Sri Ramakrishna Ashrama, Yadavagiri, Mysore and Printed at Mayur Graphics, No.C-12, Industrial Estate, Rajaji Nagar, Bangalore -560 010 and published at Sri Ramakrishna Ashrama, Yadavagiri, Mysore -570 020

VIVEKA PRABHA (KANNADA MONTHLY)
December 2017, Vol.18, No.12, No.of pages : 44

Registered With Registrar of News Papers Of India under 72356/2000.postal Regn.No.KA/SK/MYS/480/ 2015-17. LICENCED TO POST W.P.P.AT YADAVAGIRI MYSORE 570 020,VIDE LICENCE NO.SK/WPP/MYS/155/2015-17



Printed at mayur graphics,Bangalore